# 1:15-20

# ಕ್ರಿಸ್ತನ ಹಿರಿಮೆ

ಕೊಲೊಸ್ಸೆಯವರಿಗೆ ಪತ್ರಿಕೆಯ 1:15-20 ವಚನಗಳಲ್ಲಿ ಒಂದು ಬದಲಾವಣೆ ಸಂಭವಿಸುತ್ತದೆ. ಪೌಲನು ತನ್ನ ವಂದನೆ ಹೇಳುವಿಕೆಯನ್ನು ಮತ್ತು ಕೊಲೊಸ್ಸೆಯವರಿಗಾಗಿ ತಾನು ಹಾಗೂ ತನ್ನ ಸಂಗಡಿಗರು ಅರ್ಪಿಸಿದ ಪ್ರಾರ್ಥನೆಗಳ ಕುರಿತ ಚರ್ಚೆಯನ್ನು ಅಂತ್ಯಗೊಳಿಸುತ್ತಾನೆ. ನಂತರ ಆತನು ಯೇಸುವಿನ ಹಿರಿಮೆ, ಸ್ವಭಾವ, ಮತ್ತು ಸ್ಥಾನವನ್ನು ಕುರಿತು ಗುಣಗಾನ ಮಾಡುವದಕ್ಕೆ ಆರಂಭಿಸುತ್ತಾನೆ. ಯೇಸುವು (1) ದೇವರ ಪ್ರತಿರೂಪನು ಎಂದು ಬರೆಯುತ್ತಾನೆ, ಅದು ಹೊಸ ಒಡಂಬಡಿಕೆಯಲ್ಲಿ ಇನ್ನೆರಡು ಕಡೆಗಳಲ್ಲಿ ಉಲ್ಲೇಖಿಸಲ್ಪಟ್ಟಿರುತ್ತದೆ (2 ಕೊರಿಂಥ 4:4; ಇಬ್ರಿಯ 1:3); (2) ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನು; (3) ಸಮಸ್ತವನ್ನೂ ಸೃಷ್ಟಿಸಿದಾತನು; (4) ಎಲ್ಲಕ್ಕೂ ಮೊದಲು ಇದ್ದವನು; (5) ಸಮಸ್ತಕ್ಕೂ ಆಧಾರಭೂತನು; (6) ಸಭೆಯ ಶಿರಸ್ಸು; (7) ಆದಿಸಂಭೂತನು; (8) ಸತ್ತವರೊಳಗಿಂದ ಮೊದಲು ಎದ್ದು ಬಂದವನು; (9) ಎಲ್ಲಾದರಲ್ಲಿ ಪ್ರಮುಖನು; (10) ಸರ್ವಸಂಪೂರ್ಣತೆಯಿಂದ ತುಂಬಿರುವಾತನು; (11) ಮಾನವರು ಮತ್ತು ದೇವರ ನಡುವೆ ಸಂಧಾನಗೊಳ್ಳುವದಕ್ಕೆ ಆಧಾರನು ಆಗಿದ್ದಾನೆಂದು ಆತನು ಬರೆಯುತ್ತಾನೆ.

15ರಿಂದ 20 ವಚನಗಳು ಆದಿ ಸಭೆಯು ಬಳಸುತ್ತಿದ್ದ ಒಂದು ಸ್ತೋತ್ರಗೀತೆಯಲ್ಲಿರುವ ಪದಗಳನ್ನು ಒಳಗೊಂಡಿರುತ್ತದೆಂದು ಕೆಲವು ವ್ಯಾಖ್ಯಾನಕಾರರು ನಂಬುತ್ತಾರೆ. 15ರಿಂದ 17 ವಚನಗಳು 18ರಿಂದ 20 ವಚನಗಳಿಗೆ ಸಮಾನರೂಪದಲ್ಲಿರುತ್ತವೆ ಎಂದು ಮತ್ತು ಸ್ವಲ್ಪ ಮರುರಚನೆ ಮಾಡಿದ ಬಳಿಕ, ಆದಿ ಸ್ತೋತ್ರಗೀತೆಯಲ್ಲಿನ ಒಂದು ಮಾಪಕವು ಈ ವಚನಗಳಲ್ಲಿ ಕಂಡು ಬರುತ್ತದೆ ಎಂದು ಭಾವಿಸಲಾಗುತ್ತದೆ. ನಮ್ಮ ಲೋಕದೊಳಗೆ ಯೇಸುವಿನ ಪ್ರವೇಶ ಮತ್ತು ನಿರ್ಗಮನದ ಬಗ್ಗೆ 1 ತಿಮೊಥೆ 3:16ರಲ್ಲಿ ಸಹ ವ್ಯಕ್ತಪಡಿಸಲ್ಪಟ್ಟಿದೆ, ಅದು ಆದಿ ಸಭೆಯ ಸ್ತೋತ್ರಗೀತೆ ಎಂದು ಪರಿಗಣಿಸಲ್ಪಟ್ಟಿರುತ್ತದೆ. ಪೌಲನು ಯೇಸುವಿನ ಹಿರಿಮೆಯ ಕುರಿತ ತನ್ನ ವ್ಯಾಖ್ಯೆಗಳಿಗೆ ಪುಷ್ಠಿಯನ್ನು ನೀಡುವದಕ್ಕಾಗಿ ಪರಿಚಿತವಾಗಿದ್ದ ಉಕ್ತಿಗಳನ್ನು ಅಥವಾ ಸ್ತೋತ್ರಗೀತೆಗಳನ್ನು ಸೇರ್ಪಡೆಗೊಳಿಸಿದನೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. (ನೋಡಿರಿ 1 ತಿಮೊಥೆ 1:15; 3:1; 4:8, 9; 2 ತಿಮೊಥೆ 2:11-13; ತೀತನಿಗೆ 3:4-8.)

ಒತ್ತಿ ಹೇಳಲ್ಪಡುವ ಇನ್ನೊಂದು ಸಂಗತಿಯೆಂದರೆ, ಪೌಲನು ಇಲ್ಲಿ ಯೇಸುವಿನ ಕುರಿತಾದ ಗ್ನಾಸ್ಟಿಕ್ ಸಿದ್ಧಾಂತದ ದೋಷಪೂರಿತ ಉಪದೇಶಗಳಿಗೆ ಪ್ರತ್ಯುತ್ತರವಾಗಿ, ಕ್ರಿಸ್ತನ ಕುರಿತು ತನ್ನ ಬೋಧನೆಗಳನ್ನು ಮುಂದಿಡುತ್ತಿದ್ದಾನೆ ಎಂಬದೆ. ಇದು ಅಸಂಭಾವ್ಯವೆಂದು ತೋರುತ್ತದೆ, ಯಾಕೆಂದರೆ ಆ ಹಂತದ ಕಾಲದಲ್ಲಿ ಗ್ನಾಸ್ಟಿಕ್‌ವಾದದ ಬೀಜಗಳಷ್ಟೆ

ಬಿತ್ತಲ್ಪಡುತ್ತಿದ್ದವು ಮತ್ತು ಪೂರ್ಣವಾಗಿ ವಿಕಾಸಗೊಂಡ ಗ್ನಾಸ್ಟಿಕ್‌ವಾದವು ಎರಡನೆಯ ಶತಮಾನದ ತಕನ ಕಾಣಿಸಿಕೊಳ್ಳಲಿಲ್ಲ. ಹೇಗಿದ್ದರೂ, ಯೇಸುವಿನ ಕುರಿತಾದ ಪೌಲನ ಚರ್ಚೆಯಲ್ಲಿ ಗ್ನಾಸ್ಟಿಕ್ ಆಲೋಚನೆಯನ್ನು ತಪ್ಪೆಂದು ತೋರಿಸುವ ಮಾಹಿತಿಯು ಸೇರ್ಪಡೆಗೊಂಡಿರುತ್ತದೆ.

## ಅದೃಶ್ಯನಾದ ದೇವರ ಪ್ರತಿರೂಪನು ಮತ್ತು ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನು (1:15)

**15ಆತನು ಅದೃಶ್ಯನಾದ ದೇವರ ಪ್ರತಿರೂಪನೂ ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನ ಸ್ಥಾನ ಹೊಂದಿದವನೂ ಆಗಿದ್ದಾನೆ.**

### "ಆತನು ಅದೃಶ್ಯನಾದ ದೇವರ ಪ್ರತಿರೂಪನೂ"

ಪೌಲನು ಯೇಸುವನ್ನು **ಅದೃಶ್ಯನಾದ ದೇವರ ಪ್ರತಿರೂಪ** ಎಂದು ಕರೆದನು. "ಪ್ರತಿರೂಪ" ಎಂಬುದಕ್ಕಾಗಿರುವ ಗ್ರೀಕ್ ಪದ (εἰκών, *eikōn*) ವನ್ನು "ಪ್ರತಿಮೆ" ಎಂದು ಅನುವಾದಿಸಬಹುದು ಮತ್ತು ಅದರರ್ಥವು "ಸ್ವರೂಪ" ಎಂದಾಗಿರುತ್ತದೆ. Eastern Orthodox ಸಭೆಗಳು ಯೇಸುವಿನ, ಮರಿಯಳ, ಮತ್ತು ವಿವಿಧ ಸಂತರ ಉಬ್ಬುಕೆತ್ತನೆಗಳಲ್ಲಿ "ಪ್ರತಿಮೆಗಳನ್ನು," ಚಿತ್ರಗಳನ್ನು ಅಥವಾ ಪ್ರತಿಕೃತಿಗಳನ್ನು ಇಟ್ಟುಕೊಂಡಿರುತ್ತವೆ. ಯೇಸುವು ತಂದೆಯ "ಪ್ರತಿಮೆ" ಆಗಿದ್ದಾನೆ, ದೇವರ ಏಕೈಕ ಸ್ಪಷ್ಟಪಡಿಸುವಿಕೆ ಮತ್ತು ಪ್ರತಿಕೃತಿಯಾಗಿರುತ್ತಾನೆ. ಇಲ್ಲಿ ಬಳಸಲ್ಪಟ್ಟಂತೆ "ಪ್ರತಿರೂಪ" ಎಂಬುದು ಹೊರಗಿನ ಸ್ವರೂಪವನ್ನು ತೋರಿಸುವ ಆದರೆ ಒಳಗಿನ ವ್ಯಕ್ತಿ ಮತ್ತು ವ್ಯಕ್ತಿತ್ವವನ್ನು ಪ್ರಕಟಗೊಳಿಸದಂಥ ಒಂದು ಚಿತ್ರಕ್ಕಿಂತಲೂ ವ್ಯತ್ಯಾಸವಾದದ್ದಾಗಿದೆ. ಯೇಸುವು ತಂದೆಯ ವ್ಯಕ್ತಿತ್ವ ಮತ್ತು ದೈವಿಕ ಸ್ವಭಾವದ ಸರ್ವಸಂಪೂರ್ಣತೆಯನ್ನು ಹೊಂದಿರುವದರಿಂದ ಆತನ ಪರಿಪೂರ್ಣವಾದ ಪ್ರತಿರೂಪನಾಗಿದ್ದಾನೆ. ಆತನು ಅದೃಶ್ಯನಾದ ದೇವರನ್ನು ಸದೃಶ್ಯನನ್ನಾಗಿಯೂ ಅರ್ಥವಾಗುವವನ್ನಾಗಿಯೂ ಮಾಡಿದ್ದಾನೆ. ಆತನ ಮೂಲಕವಾಗಿ ದೇವರ ಸರ್ವಸಂಪೂರ್ಣತೆಯು ಪ್ರಕಟಗೊಂಡಿರುತ್ತದೆ.

ಯೇಸು ತಂದೆಯನ್ನು ಮಾನವರಿಗೆ ಪ್ರಕಟಗೊಳಿಸಲು ಬಂದನು (ಯೋಹಾನ 1:18). ಯೇಸುವನ್ನು ನೋಡುವವರು ತಂದೆಯನ್ನು ಸಹ ನೋಡಿದವರಾಗಿದ್ದಾರೆ (ಯೋಹಾನ 12:45; 14:9). "ಆತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ . . . ಆಗಿದ್ದು" (ಇಬ್ರಿಯ 1:3). ಎಲ್ಲಾದರಲ್ಲಿಯೂ ಆತನು ತಂದೆಯ ಹಾಗೆಯೇ ಅದೇ ಮೂಲ ಸ್ವರೂಪ, ಸ್ವಭಾವ, ಮಹಿಮೆ, ಮತ್ತು ಗುಣಲಕ್ಷಣ ಹೊಂದಿರುತ್ತಾನೆ. ಆತನು ಸ್ವತಃ ದೇವರ ಪ್ರತಿಬಿಂಬವೇ ಆಗಿದ್ದಾನೆ. "ವಾಕ್ಯ" (λόγος, *logos*; ಯೋಹಾನ 1:1, 14) ಎಂಬ ಆಲೋಚನೆಯೇನೆಂದರೆ ಯೇಸುವು ಎಲ್ಲಾ ಜನರಿಗೆ ದೇವರ ನಿಜವಾದ ವ್ಯಕ್ತಗೊಳ್ಳುವಿಕೆಯಾಗಿದ್ದಾನೆ ಎಂಬದೆ. ಪೌಲನು ಬರೆಯುತ್ತಿರುವ ಪ್ರತಿರೂಪವು ಕೇವಲ ಯೇಸುವನ್ನು ಶರೀರದಲ್ಲಿರುವಂತೆ ಅಲ್ಲ, ಆದರೆ ಯೇಸುವನ್ನು ನಿತ್ಯವಾದ ಜೀವಿಯಾಗಿ ತೋರಿಸುವದರ ಕುರಿತಾಗಿರುತ್ತದೆ.

ಯೇಸುವು ಸ್ವತಃ ದೇವರಲ್ಲವಾಗಿದ್ದರೆ ತಂದೆಯನ್ನು ಮಾನವರಿಗೆ

ತೋರ್ಪಡಿಸುವದಕ್ಕೆ ಅಶಕ್ತನಾಗಿರುತ್ತಿದ್ದನು; ಆತನು ದೇವರ ನಿಜವಾದ ಪ್ರತಿಕೃತಿಗಿಂತಲೂ ಕಡಿಮೆಯಾಗಿದ್ದಿರುತ್ತಿದ್ದನು. ಆತನು ದೇವರನ್ನು ತನ್ನ ತಂದೆಯೆಂದು ಕರೆದು ತನ್ನನ್ನು ದೇವಕುಮಾರನೆಂದು ಹೇಳಿಕೊಂಡಾಗ, ತನ್ನ ಸ್ವರೂಪದಲ್ಲಿಯೇ ತಾನು "ದೇವರು" ಆಗಿದ್ದಾನೆಂಬದನ್ನು ದೃಢಪಡಿಸುತ್ತಿದ್ದಾನೆಂದು ಯೆಹೂದ್ಯರು ಅರ್ಥಮಾಡಿಕೊಂಡರು (ಯೋಹಾನ 10:32-36).

ಯೇಸುವು ತಂದೆಯೊಂದಿಗೆ ಒಂದೇ ಆಗಿರುವದು ಸಹ ಅವರು ಒಂದೇ ಸ್ವಭಾವ ಹೊಂದಿದ್ದಾರೆಂಬದನ್ನು ತೋರ್ಪಡಿಸುತ್ತದೆ. "ನಾನೂ ತಂದೆಯೂ ಒಂದಾಗಿದ್ದೇವೆ" (ಯೋಹಾನ 10:30) ಎಂದು ಹೇಳಿದ ಬಳಿಕ, ಯೇಸು ಈ ಒಂದಾಗಿರುವಿಕೆಯ ಸ್ವಭಾವವನ್ನು ವಿವರಿಸುತ್ತಾ "ನನ್ನಲ್ಲಿ ತಂದೆಯು ಇದ್ದಾನೆಂತಲೂ ತಂದೆಯಲ್ಲಿ ನಾನು ಇದ್ದೇನೆಂತಲೂ" ಎಂದು ಹೇಳುತ್ತಾನೆ (ಯೋಹಾನ 10:38; ಅಲ್ಲದೆ 14:10, 11, 20 ಸಹ ನೋಡಿರಿ). ತಂದೆ ಮತ್ತು ಮಗನು ಒಂದಾಗಿರುವಂತೆ ಶಾರೀರಿಕ ಜೀವಿಗಳು ಒಂದಾಗಿರುವದಕ್ಕೆ ಸಾಧ್ಯವಿಲ್ಲ.

ಯೇಸುವಿನ ಮಾನವ-ಪೂರ್ವ ಮತ್ತು ಮಾನವ-ನಂತರದ ಅಸ್ತಿತ್ವದಲ್ಲಿ, ಆತನು ತಂದೆಯ ಮಹಿಮೆ ಮತ್ತು ಸ್ವಭಾವವನ್ನು ಹೊಂದಿದ್ದನು ಮತ್ತು ಹೊಂದಿರುತ್ತಾನೆ. ಎಲ್ಲಾ ಕಾಲಗಳಲ್ಲಿಯೂ ಆತನು ತಂದೆಯ ಮನೋವೃತ್ತಿ, ಗುಣಸ್ವಭಾವ, ಮತ್ತು ಯೋಚನೆಯನ್ನು ಹೊಂದಿರುವವನಾಗಿದ್ದಾನೆ. ಅವರ ಆತ್ಮೀಕ ಮತ್ತು ಮಾನಸಿಕ ನಿರ್ಮಾಣದ ಎಲ್ಲಾ ಅಂಶಗಳಲ್ಲಿ ಅವರ ನಡುವೆ ಒಮ್ಮತವಿರುತ್ತದೆ. ಇದರ ಕಾರಣದಿಂದ, ಯೇಸುವು ತಂದೆಯ ಪರಿಪೂರ್ಣವಾದ ಪ್ರತಿನಿಧಿಯಾಗಿದ್ದಾನೆ. ಆತನ ಮತ್ತು ತಂದೆಯ ಪ್ರಪಂಚ ದೃಷ್ಟಿಕೋನಗಳು ಒಂದೇ ಆಗಿವೆ, ಒಂದೇ ಆತ್ಮೀಕ, ನಿತ್ಯತ್ವದ, ಮತ್ತು ನೈತಿಕ ದೃಷ್ಟಿಕೋನ ಹೊಂದಿದ್ದಾರೆ. ಒಬ್ಬನು ಯೇಸುವಿನ ಬಾಹ್ಯರೂಪ ಮತ್ತು ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವದಾದರೆ, ಈ ಅಂಶಗಳಲ್ಲಿ ಆತನು ತಂದೆಯನ್ನು ಸಹ ಅರ್ಥಮಾಡಿಕೊಳ್ಳುವವನಾಗಿದ್ದಾನೆ. ಯೇಸುವಿನ ಸ್ವಭಾವವನ್ನು "ನೋಡುವವರು," ಅಥವಾ ಗ್ರಹಿಸಿಕೊಳ್ಳುವವರು, ತಂದೆಯ ಸ್ವಾಭಾವವನ್ನು ಅರ್ಥಮಾಡಿಕೊಳ್ಳುವರು.

ಮಾನವನು ದೇವರ ಕೆಲವು ಮಿನುಗುನೋಟಗಳಲ್ಲಿ ಕಂಡಿದ್ದನು ಆದರೆ ಯೇಸುವು ಬರುವ ತನಕ ಆತನು ದೇವರ ಸ್ವಭಾದ ಕುರಿತು ಪೂರ್ಣವಾದ ಪ್ರಕಟಣೆಯನ್ನು ಹೊಂದದೆ ಇದ್ದನು. ಯೇಸುವು ತೋಮನಿಗೆ ಹೀಗೆ ವಿವರಿಸಿದನು, "ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ" (ಯೋಹಾನ 14:9; ನೋಡಿರಿ ಯೋಹಾನ 12:45). ಯೇಸುವು ಮಾನವ ಶರೀರಧಾರಿಯಾಗಿದ್ದ ದೇವರಾಗಿದ್ದನು (ಯೋಹಾನ 1:14; 1 ತಿಮೊಥೆ 3:16).

ದೇವರು ಅದೃಶ್ಯನಾದವನಾದ್ದರಿಂದ ಆತನನ್ನು ಶಾರೀರಿಕವಾದ ರೀತಿಯ ದಾರಿಯನ್ನು ಅನುಸರಿಸಿ ಅರ್ಥಮಾಡಿಕೊಳ್ಳಲಾಗದು. ಆತನು ಚಿತ್ರಕಲಾಕಾರರ ಶಾರೀರಿಕವಾದ ಕೆತ್ತನೆಯ ಕೆಲಸಗಳಿಂದ ಪ್ರತಿನಿಧಿಸಲ್ಪಡಲು ಸಾಧ್ಯವಿಲ್ಲ ಮತ್ತು ಪ್ರತಿನಿಧಿಸಲ್ಪಡಕೂಡದು. ಧರ್ಮಶಾಸ್ತ್ರವು ಕೊಡಲ್ಪಟ್ಟ ವೇಳೆಯಲ್ಲಿ ದೇವರ ಯಾವ ರೂಪವು ಕಂಡು ಬಂದಿರಲಿಲ್ಲ. ಈ ಕಾರಣಕ್ಕಾಗಿ, ದೇವರ ಯಾವದೇ ಭೌತಿಕ ಪ್ರಾತಿನಿಧ್ಯಗಳನ್ನು ಮಾಡಕೂಡದಾಗಿತ್ತು (ಧರ್ಮೋಪದೇಶಕಾಂಡ 4:15-18).

ಮೋಶೆಯು ದೇವರ ಬೆನ್ನನ್ನು ನೋಡಿದನು, ಆದರೆ ಆತನ ಮುಖವನ್ನು ಕಾಣಲಿಲ್ಲ (ವಿಮೋಚನಕಾಂಡ 33:20-23); ಯಕೆಂದರೆ ಆತನ ಮುಖವನ್ನು ನೋಡಿ ಯಾರೂ

ಬದುಕುಳಿಯಲಾರರು. ಸಾಮಾನ್ಯವಾಗಿ ಮಾನವ ಕಣ್ಣುಗಳು ಕಾಣುವದಕ್ಕೆ ಸಾಧ್ಯವಿಲ್ಲದ್ದನ್ನು ಕಾಣುವ ರೀತಿಯಲ್ಲಿ ದೇವರು ಮೋಶೆಯ ಕಣ್ಣುಗಳನ್ನು ರೂಪಾಂತರಗೊಳಿಸಿದ್ದಿರಬೇಕು. ದೇವರು ತನ್ನ ಮಹಿಮ ಪ್ರಭಾವದಲ್ಲಿರುವದನ್ನು, ಮಾನವ ಕಣ್ಣುಗಳು ಕಂಡಿಲ್ಲ ಮತ್ತು ಕಾಣುವದಕ್ಕೆ ಸಾಧ್ಯವಿಲ್ಲ (ಯೋಹಾನ 1:18; 6:46). ಒಬ್ಬ ವ್ಯಕ್ತಿಯು ಮಾನವ ದೇಹದಲ್ಲಿರುವ ತನಕ, ಆತನು ದೇವರನ್ನು ಕಾಣಲಾರನು (1 ತಿಮೊಥೆ 6:16; 1 ಯೋಹಾನ 4:12). ದೇವರ ರೀತಿಯ ಆತ್ಮೀಕ ದೇಹವಾಗಿ ಮಾರ್ಪಟ್ಟ ಮೇಲಷ್ಟೇ (1 ಕೊರಿಂಥ 15:44; ಫಿಲಿಪ್ಪಿ 3:21) ಒಬ್ಬ ಕ್ರೈಸ್ತನು ದೇವರನ್ನು ಕಾಣುವದಕ್ಕೆ ಮತ್ತು ಆತನ ಮುಖವನ್ನು ದೃಷ್ಟಿಸುವದಕ್ಕೆ ಶಕ್ತನಾಗುವನು (1 ಯೋಹಾನ 3:2; ಪ್ರಕಟನೆ 22:4).

## "ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನೂ"

ಅಲ್ಲದೆ ಪೌಲನು ಯೇಸುವನ್ನು **ಜ್ಯೇಷ್ಠಪುತ್ರನೂ** ಎಂದು ಸಹ ಕರೆದನು. "ಜ್ಯೇಷ್ಠಪುತ್ರ" (πρωτότοκος, *prōtotokos*) ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಬೇರೊಂದು ಕಡೆ ಬಳಸಲ್ಪಟ್ಟಿದೆ (ಇಬ್ರಿಯ 1:6; ಪ್ರಕಟನೆ 1:5). ಅದು ಆಂಗ್ಲದ proto-type (ಮೂಲರೂಪ) ಎಂಬ ಪದದೊಂದಿಗೆ ಸಂಬಂಧ ಹೊಂದಿರುತ್ತದೆ. Eduard Schweizer ಪ್ರಕಾರವಾಗಿ, ". . . ಈ ಮಾತು ಅವಶ್ಯಕವಾಗಿ ಒಬ್ಬ ಹಿರಿಯ ಸಹೋದರನು ಎಂದು ಸೂಚಿಸುವದಿಲ್ಲ, ಆದರೆ ತನ್ನ ತಂದೆಗೆ ಪ್ರಿಯನಾಗಿರುವವನೊಬ್ಬನ ವಿಶೇಷ ಸ್ಥಾನವನ್ನಷ್ಟೆ ಸೂಚಿಸುತ್ತದೆ."[1]

ಇಬ್ರಿಯ ಕುಟುಂಬದಕ್ಕೆ ಜ್ಯೇಷ್ಠಪುತ್ರನಿಗೆ ಒಂದು ಅತ್ಯುನ್ನತವಾದ ಸ್ಥಾನವಿತ್ತು. ಆತನು ತಂದೆಯ ಆಶೀರ್ವಾದಗಳನ್ನು ಪಡೆದುಕೊಳ್ಳುತ್ತಿದ್ದನು (ಆದಿಕಾಂಡ 27:1-4, 19, 34-37) ಮತ್ತು ಚೊಚ್ಚಲತನದ ಹಕ್ಕನ್ನು ಹೊಂದಿರುತ್ತಿದ್ದನು (ಆದಿಕಾಂಡ 43:33). ಯಾಕೋಬನ ಹಿರಿಯ ಮಗನಾದ ರೂಬೇನನ ರೀತಿಯಲ್ಲಿ ಆತನು ತನ್ನ ಸಹೋದರರಲ್ಲೆಲ್ಲಾ ನಾಯಕನಂತೆ ಗೌರವಿಸಲ್ಪಡಬೇಕಾಗಿತ್ತು (ನೋಡಿರಿ ಆದಿಕಾಂಡ 37:22, 23). ಇತರ ಪುತ್ರರು ಪಡೆದುಕೊಂಡದ್ದಕ್ಕೆ ಹೋಲಿಸಿದರೆ ಆತನಿಗೆ ಸ್ವಾಸ್ತ್ಯದಲ್ಲಿ ಎರಡರಷ್ಟು ಪಾಲು ಸಿಕ್ಕಬೇಕಿತ್ತು (ಧರ್ಮೋಪದೇಶಕಾಂಡ 21:17). ಅನೇಕ ಸಂದರ್ಭಗಳಲ್ಲಿ ಜ್ಯೇಷ್ಠಪುತ್ರ ಎಂಬುದು ಮೊದಲು ಹುಟ್ಟಿದವನನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತಿತ್ತಾದರೂ (ಆದಿಕಾಂಡ 19:34; 27:19), ಅದು ಅತ್ಯಂಥ ಅಧಿಕವಾಗಿ ಗೌರವಿಸಲ್ಪಡುವವನು ಅಥವಾ ಪ್ರೀತಿಸಲ್ಪಡುವವನು ಎಂದು ಸಹ ಸೂಚಿಸುವದಕ್ಕೆ ಬಳಸಲ್ಪಡುತ್ತಿತ್ತು.

ಇಸ್ರಾಯೇಲ್‌ರು ದೇವರಿಗೆ ಚೊಚ್ಚಲಮಗ ಎಂದು ಕರೆಯಲ್ಪಟ್ಟಿದೆ (ವಿಮೋಚನಕಾಂಡ 4:22). ದಾವೀದನು ಜ್ಯೇಷ್ಠಪುತ್ರ ಎಂದು ಕರೆಯಲ್ಪಟ್ಟಿದ್ದಾನೆ (ಕೀರ್ತನೆ 89:27), ಎಫ್ರಾಯೀಮು ಸಹ ಹಾಗೇಯೆ ಕರೆಯಲ್ಪಟ್ಟಿದ್ದಾನೆ (ಯೆರೆಮೀಯ 31:9). ಕ್ರೈಸ್ತರು ಬೇರೆ ಬೇರೆ ಹುಟ್ಟಿನ ಕ್ರಮಾನುಗತಿಗೆ ಸೇರಿದ್ದಾಗ್ಯೂ, ಅವರು ಸಹ ಚೊಚ್ಚಲಮಕ್ಕಳು ಎಂದು ಪರಿಗಣಿಸಲ್ಪಟ್ಟಿದ್ದಾರೆ (ಇಬ್ರಿಯ 12:23). ಇಸ್ರಾಯೇಲ್‌ರು ದೇವರ ಸ್ವಕೀಯ ಜನಾಂಗವಾಗಿದ್ದರು, ಹೊರತು ಜನಾಂಗಗಳಲ್ಲಿ ಮೊದಲು ಹುಟ್ಟಿದವರಲ್ಲ. ದಾವೀದನು ಆತನ ಕುಟುಂಬದಲ್ಲಿ ಎಂಟನೆಯವನಾಗಿದ್ದನು (1 ಸಮುವೇಲ 16:10, 11), ಮತ್ತು ಎಫ್ರಾಯೀಮನು ಯೋಸೇಫನಿಗೆ ಎರಡನೆಯ ಮಗನಾಗಿದ್ದನು (ಆದಿಕಾಂಡ 41:51, 52). ಈ ವಾಕ್ಯಭಾಗಗಳಲ್ಲಿ "ಜ್ಯೇಷ್ಠಪುತ್ರ" ಎಂಬುದರ ಬಳಕೆಯ ಅರ್ಥವು ಪ್ರಥಮದಲ್ಲಿ ಜನಿಸಿದವರು ಎಂದಾಗಿರುವದಿಲ್ಲ. ಬದಲಾಗಿ, "ಜ್ಯೇಷ್ಠಪುತ್ರ" ಎಂಬುದು

ಜ್ಯೇಷ್ಠಪುತ್ರನಿಗಿರುವ ಸ್ಥಾನ ಮತ್ತು ಸವಲತ್ತುಗಳನ್ನು ಸೂಚಿಸುತ್ತದೆ.

> "ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರ" ಎಂಬ ಪದಗುಚ್ಛವು ಮಗನು ಸಹ ಒಬ್ಬ ಸೃಷ್ಟಿ ಜೀವಿ, ಉದ್ದನೆಯ ಸಾಲಿನಲ್ಲಿ ಮೊದಲಿಗನು ಎಂಬ ಅರ್ಥವನ್ನು ಸೂಚಿಸುವದಿಲ್ಲ ಎಂಬುದು 16ನೇ ವಚನದಿಂದ ಸ್ಪಷ್ಟವಾಗಿ ಸಾಭಿತುಪಡಿಸಲ್ಪಟ್ಟಿರುತ್ತದೆ. ಆತನು ಎಲ್ಲಾ ಸೃಷ್ಟಿ ಜೀವಿಗೂ ಮುಂಚಿನವನು, ವಿಭಿನ್ನವಾದವನು, ಮತ್ತು ಅತ್ಯಂಥ ಉನ್ನತದಲ್ಲಿರುವವನು ಆಗಿದ್ದಾನೆ. ಒಬ್ಬ ಜ್ಯೇಷ್ಠಪುತ್ರನಾಗಿ ಆತನು ಎಲ್ಲಾದರ ಬಾಧ್ಯಸ್ಥನು ಮತ್ತು ಆಳುವವನು ಆಗಿದ್ದಾನೆ.[2]

ಯೇಸುವು ಮರಿಯಳ ಮೊದಲ ಮಗು, ಯೋಸೇಫನ ಕುಟುಂಬದಲ್ಲಿ ಜ್ಯೇಷ್ಠಪುತ್ರನಾಗಿದ್ದನು ಎಂಬ ಕಾರಣಕ್ಕೆ, ಇಲ್ಲಿ ಮತ್ತು ಇತರ ಸ್ಥಳಗಳಲ್ಲಿ ಉಲ್ಲೇಖಿಸಲ್ಪಟ್ಟಿರುವಂತೆ ಆತನನ್ನು ಜ್ಯೇಷ್ಠಪುತ್ರನು ಎಂದು ಕೆಲವರು ಪರಿಗಣಿಸುತ್ತಾರೆ (ರೋಮಾ 8:29; ಕೊಲೊಸ್ಸೆ 1:18; ಇಬ್ರಿಯ 1:6; ಪ್ರಕಟನೆ 1:5). ಹೇಗೂ, ಅರ್ಥವು ಈ ರೀತಿಯಲ್ಲಿರುವ ಸಂಭಾವ್ಯತೆಯು ಕಡಿಮೆಯಾಗಿರುತ್ತದೆ. ಈ ಸನ್ನಿವೇಶದಲ್ಲಿ ಪೌಲನು ಯೇಸುವನ್ನು ಸೃಷ್ಟಿಸಲ್ಪಟ್ಟಿರುವದೆಲ್ಲದರ ಮೇಲೆಯೂ ಜ್ಯೇಷ್ಠಪುತ್ರನ ಪ್ರತಿಷ್ಠೆ ಮತ್ತು ಘನತೆಯನ್ನು ಹೊಂದಿದವನು ಎಂಬದಾಗಿ ಮುಂದಿಡುತ್ತಿದ್ದಾನೆ. ಜ್ಯೇಷ್ಠಪುತ್ರನಾಗಿ, ಆತನು "ಆದ್ಯತೆ ಮತ್ತು ದೊರೆತನ ಅಥವಾ ಸಾರ್ವಭೌಮತೆ" ಹೊಂದಿದ್ದಾನೆ.[3]

H. C. G. Moule ಗಮನಕ್ಕೆ ತರುವದೇನೆಂದರೆ ಕೀರ್ತನೆ 89:27ನೇ ವಚನವು "ಜ್ಯೇಷ್ಠಪುತ್ರ' ಎಂಬ ಬಿರುದನ್ನು ಮೆಸ್ಸೀಯನಿಗೆ . . . ಪಿಲಿಷ್ಟಿಯ ಯೆಹೂದಿ ಅನ್ವಯಿಕೆಯಲ್ಲಿ ಮಾಡುತ್ತದೆ."[4] ಆತನು "ಜ್ಯೇಷ್ಠಪುತ್ರ" ಎಂಬ ಪದದ ವಿಷಯದಲ್ಲಿ ಇನ್ನಷ್ಟು ಹೇಳುತ್ತಾನೆ,

> ಅದರ ಬಳಕೆಗಳಲ್ಲಿ, ಮತ್ತು ಸಂಬಂಧಗಳಲ್ಲಿ ಅಧ್ಯಯನ ಮಾಡಿದಾಗ, ಈ ಪದವು ಹೀಗೆ ಅರ್ಥವನ್ನು ಸೂಚಿಸುತ್ತದೆ (*a*) *ಅಸ್ತಿತ್ವದ ಆದ್ಯತೆ*, ಹೀಗೆ ಮಗನು ಸೃಷ್ಟಿಸಲ್ಪಟ್ಟ ವಿಶ್ವಕ್ಕೆ ಮೊದಲಿರುವವನಾಗಿ ಕಾಣಿಸುತ್ತಾನೆ, ಮತ್ತು ಇರುವಿಕೆಯ ನಿತ್ಯತ್ವದ ಕ್ರಮಕ್ಕೆ ಸೇರಿದವನೆಂದಾಗುತ್ತದೆ (ನಂತರ ಬರುವ ಸನ್ನಿವೇಶವನ್ನು ನೋಡಿರಿ); (*b*) "ಸೃಷ್ಟಿಗೆಲ್ಲಾ" *ಕರ್ತನು*, ಇದರ ಮೂಲಕ ನಿತ್ಯವಾದ ಜ್ಯೇಷ್ಠತ್ವದ ಹಕ್ಕು ಹೊಂದಿರುವವನು [ಮೊದಲು ಇದ್ದವನು].[5]

"ಜ್ಯೇಷ್ಠಪುತ್ರ"ನಾಗಿ ಯೇಸುವು ದೇವರ ಸೃಷ್ಟಿಯಲ್ಲಿ ಮೊದಲು ಸೃಷ್ಟಿಸಲ್ಪಟ್ಟವನು ಎಂಬದಾಗಿ ಯೆಹೋವನ ಸಾಕ್ಷಿಗಳು ಬೋಧಿಸುತ್ತಾರೆ. ಅವರು ಹೀಗೆ ಹೇಳುವರು,

> [ಯೇಸು] ಸಹ ದೇವರ "ಜ್ಯೇಷ್ಠಪುತ್ರ"ನು, ಮಾತ್ರವಲ್ಲದೆ "ಒಬ್ಬನೇ" ಮಗನು ಸಹ ಆಗಿದ್ದಾನೆ. (ಯೋಹಾನ 1:14; 3:16; ಇಬ್ರಿಯ 1:6) ಇದರರ್ಥವು ಆತನು ದೇವರ ಇತರ ಆತ್ಮ ಮಕ್ಕಳ ಮುಂಚೆ ಸೃಷ್ಟಿಸಲ್ಪಟ್ಟವನು, ಮತ್ತು ದೇವರಿಂದ ನೇರವಾಗಿ ಸೃಷ್ಟಿಸಲ್ಪಟ್ಟಿದ್ದು ಈತನೊಬ್ಬನೇ ಎಂದಾಗುತ್ತದೆ. ಇತರ ಎಲ್ಲಾ ಸಂಗತಿಗಳ ಸೃಷ್ಟಿಸುವಿಕೆಯಲ್ಲಿ ಈ "ಜ್ಯೇಷ್ಠಪುತ್ರ"ನು ಯೆಹೋವನ ಸಂಗಡ ಭಾಗಿಯಾದನು ಎಂದು ಬೈಬಲ್ ಕಲಿಸುತ್ತದೆ. (ಕೊಲೊಸ್ಸೆ 1:15, 16).[6]

ಯೆಹೋವನ ಸಾಕ್ಷಿಗಳಿಂದ ಬಳಸಲ್ಪಡುವ New World Translationವು ಕೊಲೊಸ್ಸೆ 1:16ರಲ್ಲಿ "ಇತರ" ಎಂದು ಸೇರ್ಪಡೆಗೊಳಿಸಿರುತ್ತದೆ: "ಆತನ ಮೂಲಕವಾಗಿ

[ಇತರ] ಎಲ್ಲಾ ಸಂಗತಿಗಳು ಸೃಷ್ಟಿಸಲ್ಪಟ್ಟವು" (ಒತ್ತಿ ಹೇಳಿದ್ದು ನನ್ನದು).[7] ಇಲ್ಲಿ ಸೂಚ್ಯಾರ್ಥವೇನೆಂದರೆ ಯೇಸು ಮೊದಲು ಸೃಷ್ಟಿಸಲ್ಪಟ್ಟನು, ಮತ್ತು ನಂತರ ಆತನು ಉಳಿದ ಸಮಸ್ತವನ್ನೂ ಸೃಷ್ಟಿಸಿದನು ಎಂಬದೆ. ಇದು ಯೇಸುವನ್ನು ದೇವದೂತರಂತೆ ಒಬ್ಬ ಸೃಷ್ಟಿಸಲ್ಪಟ್ಟ ಜೀವಿಯಂತಾಗಿಸುತ್ತದೆ. ಯೇಸುವು ಒಬ್ಬ ದೇವದೂತನಲ್ಲ; ಆತನು ದೇವದೂತರಿಗಿಂತಲೂ ಉನ್ನತನು ಮತ್ತು ಅವರಿಂದ ಆರಾಧಿಸಲ್ಪಡತಕ್ಕವನು (ಇಬ್ರಿಯ 1:4, 6).

ಗ್ರೀಕ್ ಹೊಸ ಒಡಂಬಡಿಕೆ ವಾಕ್ಯವು ಹೀಗೆ ಹೇಳುತ್ತದೆ, (ἐν ἀυτῷ ἐκτίσθη τὰ πάντα (*en autō ektisthē ta panta,* "ಆತನ ಮೂಲಕ ಸಮಸ್ತವೂ ಉಂಟಾಯಿತು"). "ಇತರ" ಎಂಬ ಪದವು ಗ್ರೀಕ್ ವಾಕ್ಯದಲ್ಲಿ ಕಾಣಿಸಿಕೊಳ್ಳುವದೂ ಇಲ್ಲ ಅದರ ಸೂಚ್ಯಾರ್ಥವೂ ಇರುವದಿಲ್ಲ. "ಇತರ" ಎಂಬುದು ಒಂದು ನ್ಯಾಯಸಮ್ಮತವಲ್ಲದ ದೇವಶಾಸ್ತ್ರೀಕ ವ್ಯಾಖ್ಯೆವೆಂಬಂತೆ ಮಧ್ಯದಲ್ಲಿ ಸೇರಿಸಲಾಗಿದೆಯೇ ಹೊರತು ಗ್ರೀಕ್ ವಾಕ್ಯದ ಜಾಗರೂಕವಾದ ಅನುವಾದವಾಗಿ ಅಲ್ಲ. ಸೃಷ್ಟಿಸಲ್ಪಟ್ಟಿರುವದೆಲ್ಲವನ್ನು ಯೇಸು ಸೃಷ್ಟಿಸಿದನು, "ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ" (ಯೋಹಾನ 1:3). ಯೇಸು ಸ್ವತಃ ತನ್ನನ್ನು ಸೃಷ್ಟಿಸಿಕೊಂಡಿರುವ ಹೊರತು, ಆತನು ಸೃಷ್ಟಿಸಲ್ಪಟ್ಟ ಜೀವಿಯಲ್ಲ ಎಂಬುದನ್ನು ಈ ವಾಸ್ತವಾಂಶವು ನಿರ್ಣಾಯಕವಾಗಿ ಸಾಭಿತುಪಡಿಸುತ್ತದೆ. New World Translation ಅನುವಾದಕರು ಆತನ ಸಮಸ್ತವನ್ನು ಉಂಟು ಮಾಡುವಿಕೆಯು ಅವರ ದೇವಶಾಸ್ತ್ರದಲ್ಲಿ ಒಂದು ಸಮಸ್ಯೆಯೆಂಬುದನ್ನು ಗ್ರಹಿಸಿಕೊಂಡರು; ಆದುದರಿಂದ, ಆತನು ತನ್ನನ್ನು ಹೊರತು ಪಡಿಸಿಕೊಂಡು, ಇತರ ಎಲ್ಲಾ ಸಂಗತಿಗಳನ್ನು ಸೃಷ್ಟಿಸಿದನೆಂಬುದನ್ನು ಸೂಚಿಸುವದಕ್ಕೆ "ಇತರ" ಎಂಬ ಪದವನ್ನು ಸೇರ್ಪಡೆಗೊಳಿಸಿದರು.

ಯೇಸು ಸೃಷ್ಟಿಸಲ್ಪಟ್ಟದ್ದರಲ್ಲಿ ಮೊದಲ ಜೀವಿಯಾಗಲಿ ಅಥವಾ ದೇವರಿಗೆ ಜನಿಸಿದವರಲ್ಲಿ ಪ್ರಥಮನಾಗಲಿ ಆಗಿರಲಿಕ್ಕೆ ಸಾಧ್ಯವಿಲ್ಲ. ಆತನು ನಿತ್ಯನಾದವನು (ಮೀಕ 5:2), ಆದಿಯಾಗಲಿ ಅಥವಾ ಅಂತ್ಯವಾಗಲಿ ಇಲ್ಲದವನು (ಇಬ್ರಿಯ 7:3). ಆತನು ಘನತೆಯ ಉನ್ನತ ಸ್ಥಾನವನ್ನು ಹೊಂದಿರುವವನು ಎಂಬ ಅರ್ಥದಲ್ಲಿ ಜೇಷ್ಠಪುತ್ರನಾಗಿದ್ದಾನೆ, ಮತ್ತು ಆತನು ಜನನ ಅಥವಾ ಸೃಷ್ಟಿಯಲ್ಲಿನ ಕಾಲ ಕ್ರಮಾನುಗತಿ ಎಂಬ ಅರ್ಥದಲ್ಲಿ ಮೊದಲಿಗನು ಎಂದಾಗಿರುವದಿಲ್ಲ.

ಪೌಲನು ಯೇಸುವನ್ನು "ಆದಿಸಂಭೂತನು" ಎಂದು ಕರೆದನು (ಕೊಲೊಸ್ಸೆ 1:18). ಈ ಹೇಳಿಕೆ ಮತ್ತು ಯೋಹಾನನ "ದೇವರ ಸೃಷ್ಟಿಗೆ ಮೂಲನು" ಎಂಬ ಹೇಳಿಕೆ (ಪ್ರಕಟನೆ 3:14) ಇವೆರಡು ಯೆಹೋವನ ಸಾಕ್ಷಿಗಳಿಂದ ತಪ್ಪಾಗಿ ಅರ್ಥೈಸಲ್ಪಟ್ಟಿರುತ್ತವೆ. ಪ್ರಕಟನೆ 3:14 ಯಲ್ಲಿನ "ಆದಿ" ಎಂಬದರ ವಿಷಯದಲ್ಲಿ ನೋಡುವದಾದರೆ, NASBಯ ಅಡಿಟಿಪ್ಪಣಿಯಲ್ಲಿ ಹೀಗೆ ಹೇಳಿರುವದು ಸರಿಯಾಗಿಯೇ ಇರುತ್ತದೆ, "ಅಂದರೆ ಉಗಮ ಅಥವಾ ಮೂಲ." ಹೊಸ ಒಡಂಬಡಿಕೆಯಲ್ಲಿ ಇನ್ನು ಕೆಲವು ವಾಕ್ಯಭಾಗಗಳು "ಆದಿ" ಎಂಬುದನ್ನು ಈ ಅರ್ಥದಲ್ಲಿ ಬಳಸುತ್ತವೆ. "ಆದಿ" (ἀρχή, *archē*) ಎಂಬ ಪದವು ಆರಂಭಿಕ ಸ್ಥಾನ ಮತ್ತು ಯಾವದೋ ಒಂದು ಆರಂಭಗೊಂಡ ಕ್ಷಣ ಎಂಬರ್ಥವನ್ನು ಸೂಚಿಸುತ್ತದೆ (ಮತ್ತಾಯ 24:8, 21). ಅಲ್ಲದೆ ಮೊದಲ ಕಾರಣ, ಆರಂಭಕ್ಕೆ ಕಾರಣವಾದ ಮೂಲ ಎಂದು ಸಹ ಅರ್ಥವನ್ನ ಕೊಡುತ್ತದೆ.

ಪ್ರಕಟನೆಯ ಪುಸ್ತಕದಲ್ಲಿ, ಅದು ಯೇಸುವನ್ನು ಸೂಚಿಸುವ ಪ್ರತಿ ಸಾರಿಯೂ ಯೋಹಾನನು ಅದನ್ನು ಈ ವಿಧದಲ್ಲಿಯೇ ಬಳಸಿರುತ್ತಾನೆ (21:6; 22:13). ಆತನು "ಆದಿಯೂ ಅಂತ್ಯವೂ" ಆಗಿದ್ದಾನೆ, ಸಮಸ್ತವನ್ನು ಆರಂಭಿಸುವಂತೆ ಮಾಡಿದಾತನು ಮತ್ತು ಅದು ಪೂರ್ಣ ಅಂತ್ಯಗೊಳ್ಳುವಂತೆ ಮಾಡುವಾತನು ಆಗಿದ್ದಾನೆ.

ಒಂದು ವೇಳೆ, ಪ್ರಕಟನೆ ಪುಸ್ತಕದ ವಾಕ್ಯಭಾಗಗಳಲ್ಲಿ "ಆದಿ" ಎಂಬದನ್ನು "ಮೂಲ" ಎಂದು ಪರಿಗಣಿಸಬಾರದೆಂದಾದಲ್ಲಿ, "ಅಂತ್ಯ" ಎಂಬುದು ಸಹ "ಮೂಲ" ಎಂದು ಅರ್ಥನಿರೂಪಿಸಲ್ಪಡಕೂಡದು. ಅದರ ಮುಕ್ತಾಯದ ತೀರ್ಮಾನವು ಯೇಸುವಿಗೆ ಆರಂಭವಿತ್ತೆಂದೂ ಅದು ಒಂದು ಅಂತ್ಯಕ್ಕೆ ಬರುವದೆಂದೂ ಆಗುವದು, ಅದು ಸತ್ಯವಾದದ್ದಲ್ಲ. ಇಲ್ಲಿ ಅರ್ಥವೇನೆಂದರೆ ಯೇಸುವು ಆದಿಯ ಮೂಲನು ಮತ್ತು "ಅಂತ್ಯ"ದ ಮೂಲನು ಸಹ ಆಗಿದ್ದಾನೆ ಎಂಬದೆ. ಆತನು ಸಮಸ್ತ ಸೃಷ್ಟಿಯ "ಆದಿ" ಆಗಿದ್ದಾನೆ, ಸಮಸ್ತವು ಸೃಷ್ಟಿಸಲ್ಪಡುವಂತೆ ಕಾರಣನಾದವನು.

Albert Einsteinನನ್ನು "ಸಾಪೇಕ್ಷತೆ ಸಿದ್ಧಾಂತದ ಆದಿ [ಮೂಲ]" ಎಂದು ಕರೆಯಬಹುದು. ಅಂಥ ಹೇಳಿಕೆಯು ಸಾಪೇಕ್ಷತೆ ಸಿದ್ಧಾಂತವು Einsteinನ ಆದಿಗೆ ಕಾರಣವಾಯಿತು ಎಂಬರ್ಥವನ್ನು ನೀಡುವದಿಲ್ಲ. ಬದಲಾಗಿ, ಒಂದು ಮೂಲನಾಗಿ, ಆತನು ಸಾಪೇಕ್ಷತೆ ಸಿದ್ಧಾಂತದ ಜನಕನಾದನು ಎಂಬರ್ಥವಾಗುತ್ತದೆ. ಯೇಸುವಿನ ವಿಷಯದಲ್ಲಿ ಸಹ ಅದೇ ರೀತಿಯಲ್ಲಿ ಇರುತ್ತದೆ: ಆತನು ಸೃಷ್ಟಿಯ ಮೂಲನು ಮತ್ತು ಕಾರಣನು, ಆತನ ಮೂಲಕವೇ ಸಮಸ್ತವೂ ಅಸ್ತಿತ್ವಕ್ಕೆ ಬಂದಿರುತ್ತದೆ.

ಯೋಹಾನ 1:14ರಲ್ಲಿ ಯೇಸುವು "ಒಬ್ಬನೇ ಮಗನು" (μονογενής, *monogenēs*) ಎಂದು ಕರೆಯಲ್ಪಟ್ಟಿದ್ದಾನೆ, ಅದು "ಒಬ್ಬ" ಎಂಬ ಅರ್ಥ ಕೊಡುವ mono, ಮತ್ತು genos ಎಂಬ ಪದಗಳ ಸಂಯೋಜನೆಯಾಗಿರುತ್ತದೆ, ಈ ಪದವನ್ನು "ಸಂತತಿಯವನು, ಲಕ್ಷಣ, ಅಥವಾ ಜಾತಿ" ಎಂದು ಅನುವಾದಿಸಬಹುದಾಗಿದೆ.[8] ಹುಟ್ಟಿಸಲ್ಪಟ್ಟವನು ಎಂಬ ಅರ್ಥದಲ್ಲಿ, ಮೂಲೋತ್ಪತ್ತಿಯ ಯೋಚನೆಯು ಈ ಪದದಲ್ಲಿ ಅಂತರ್ಗತವಾಗಿರುವದಿಲ್ಲ. ಅರ್ಥವು ಏನೆಂದರೆ "ಆ ಜಾತಿಯ ಅವನೊಬ್ಬನೇ, ಸ್ವಭಾವದಲ್ಲಿ ವಿಶಿಷ್ಟನು, ಸ್ವತಃ ಅದೊಂದೇ ವರ್ಗದಲ್ಲಿರುವವನು." *Monogenēs* ಎಂಬುದು ಒಬ್ಬನೇ ಮಗನನ್ನು ಸೂಚಿಸಲು (ಲೂಕ 7:12; 9:38), ಯಾಯೀರನ ಮಗಳನ್ನು ಸೂಚಿಸಲು (ಲೂಕ 8:42), ಮತ್ತು ಇಸಾಕನ ವಿಷಯದಲ್ಲಿ ಬಳಸಲ್ಪಟ್ಟಿದೆ (ಇಬ್ರಿಯ 11:17). ಅಬ್ರಹಾಮನಿಗೆ ಇಸಾಕನನ್ನು ಹೊರತು ಪಡಿಸಿ ಹಾಗರಳಲ್ಲಿ ಹುಟ್ಟಿದ ಇಸ್ಮಾಯೇಲ್ (ಆದಿಕಾಂಡ 16:15) ಮತ್ತು ಕೆಟೂರಳಲ್ಲಿ ಹುಟ್ಟಿದ ಆರು ಮಕ್ಕಳು ಸೇರಿದಂತೆ ಇನ್ನು ಅನೇಕ ಪುತ್ರರಿದ್ದರು (ಆದಿಕಾಂಡ 25:1, 2). ಹಾಗಿದ್ದರೂ, ಇಸಾಕನು ಅಬ್ರಹಾಮನ ಒಬ್ಬನೇ ಮಗನಾಗಿದ್ದನು – ಒಬ್ಬ ವಿಶಿಷ್ಟ, ಆ ವರ್ಗದಲ್ಲಿದ್ದ ಏಕೈಕ ಮಗನಾಗಿದ್ದನು.

ಮೂಲೋತ್ಪತ್ತಿಯ ವಿಷಯದಲ್ಲಿ ಯೇಸು ಒಬ್ಬನೇ ಮಗನಾಗಿರಲಿಲ್ಲ. ಆತನು ಆ ಜಾತಿಯ ಏಕೈಕನು, ಸ್ವಭಾವದಲ್ಲಿ ವಿಶಿಷ್ಟನು, ತಂದೆಯೊಂದಿಗಿನ ತನ್ನ ಸಂಬಂಧದಲ್ಲಿ ಸ್ವತಃ ತಾನೇ ಒಂದು ವರ್ಗವಾಗಿದ್ದನು. *Monogenēs* ಎಂಬ ಪದವು, ಯೇಸುವಿಗೆ ಸಂಬಂಧಪಟ್ಟಂತೆ, ಹೊಸ ಒಡಂಬಡಿಕೆಯಲ್ಲಿ "ಒಬ್ಬನೇ ಮಗನು" ಎಂಬದಾಗಿ ಐದು ಸಾರಿ ಅನುವಾದಿಸಲ್ಪಟ್ಟಿರುತ್ತದೆ (ಯೋಹಾನ 1:14, 18; 3:16, 18; 1 ಯೋಹಾನ 4:9). ಯೇಸುವಿಗೆ

ಒಂದು ಆರಂಭವಿತ್ತೆಂಬ ಅರ್ಥ ಬರುವಂತೆ ಈ ಮಾತನ್ನು ಅನ್ವಯಿಸಕೂಡದು.

ಈ ಅಭಿಪ್ರಾಯಕ್ಕೆ ಬೆಂಬಲವಾಗಿ ಈ ಕೆಳಗಿನದು ಒಂದು ಉತ್ತಮ ಸಾರಾಂಶವಾಗಿರುತ್ತದೆ:

> (1) ಪ್ರಮಾಣಬದ್ಧ ಶಬ್ದಕೋಶಗಳು ಈ ಅರ್ಥವನ್ನು ಬೆಂಬಲಿಸುತ್ತವೆ (ಉದಾಹರಣೆಗೆ, ನೋಡಿರಿ MM, pp. 416f.; Bauer, rev., p. 527). (2) Old Latin MSSವು *monogenes*ನ್ನು *unigenitus* ("ಒಬ್ಬನೇ ಮಗನು") ಎಂಬುದಕ್ಕೆ ಬದಲಾಗಿ *unicus* ("ಒಬ್ಬನೇ") ಎಂಬ ಲ್ಯಾಟಿನ್ ಪದದಿಂದ ಅರ್ಥವನ್ನು ಕೊಡುತ್ತದೆ. Vulgate ನಲ್ಲಿ Jeromeನು ದೇವಶಾಸ್ತ್ರೀಕ ಕಾರಣಗಳಿಗಾಗಿ, ಅಂದರೆ, "ಯೇಸು ಪಡೆಯಲ್ಪಟ್ಟವನು, ನಿರ್ಮಿಸಲ್ಪಟ್ಟವನಲ್ಲ" ಎಂಬ ಸಿದ್ಧಾಂತವನ್ನು ಖಚಿತಪಡಿಸಲು *unicus* ಎಂಬುದನ್ನು *unigenitus* ("ಒಬ್ಬನೇ ಮಗನು") ಎಂಬುದಕ್ಕೆ ಬದಲಾಯಿಸಿದನು. (ಈ ದೇವಶಾಸ್ತ್ರೀಕ ಆಸಕ್ತಿಯ ಕೊರತೆಯುಳ್ಳ ವಾಕ್ಯಭಾಗಗಳಲ್ಲಿ [ಲೂಕ 7:12; 8:42; 9:38] ಆತನು ಗ್ರೀಕ್ ಅನುವಾದದ *monogenes* ರೀತಿಯಲ್ಲಿಯೇ *unicus*ನ್ನು ಉಳಿಸಿಕೊಂಡನು.) AV ಮತ್ತು ಅದರ ನಂತರ ಬಂದ ಇತರ ಆಂಗ್ಲ ತರ್ಜುಮೆಗಳ ಮೇಲೆ Vulgate ಒಂದು ಅಗಾಧವಾದ ಪ್ರಭಾವವನ್ನು ಚಲಾಯಿಸಿತ್ತು. (3) LXXವು *monogenes*ನ್ನು ಇಬ್ರಿಯದ *yahid* ಕ್ಕಾಗಿ ಬಳಸುವದು ಮತ್ತು ಹೊಸ ಒಡಂಬಡಿಕೆಯು ಈ ಪದವನ್ನು ಲೂಕ 7:12; 8:42; 9:38; ಇಬ್ರಿಯ 11:17ರಲ್ಲಿ ಬಳಸುವಿಕೆಯು ಸ್ಪಷ್ಟವಾಗಿ "ಒಬ್ಬನೇ" ಎಂಬದನ್ನು ಬೆಂಬಲಿಸುತ್ತದೆ. (4) 1 Clem. 25:2ರಲ್ಲಿ phoenix (ಫೀನಿಕ್ಸ್) ಪಕ್ಷಿಯನ್ನು ಸೂಚಿಸಿ *monogenes*ನ್ನು ಬಳಸಿರುವದು "ಆ ಜಾತಿಯ ಅದೊಂದೇ" ಎಂಬ ಅರ್ಥವನ್ನು ಅಪೇಕ್ಷಿಸುತ್ತದೆ. (5) ಯೋಹಾನನು ಯೇಸುವಿನ ವಿಶಿಷ್ಟತೆಯನ್ನು *monogenes* ಎಂಬಂತೆ ಒತ್ತಿ ಹೇಳುವದು ಯೇಸುವಿಗಾಗಿ ಮಾತ್ರವೇ ಆತನು *huios* ಎಂಬದನ್ನು ಕಾಯ್ದಿರಿಸಿರುವದರಲ್ಲಿ ಎತ್ತಿ ತೋರಿಸಲ್ಪಟ್ಟಿರುತ್ತದೆ; ವಿಶ್ವಾಸಿಗಳನ್ನು ಆತನು *tekna,* "ಮಕ್ಕಳು" ಎಂದು ಕರೆಯುತ್ತಾನೆ.[9]

ಯೇಸುವು ಸೃಷ್ಟಿಸಲ್ಪಟ್ಟ ಎಲ್ಲದಕ್ಕೂ ಮೂಲನಾಗಿದ್ದಾನೆ. ಸಮಸ್ತದರ ಸೃಷ್ಟಿಕರ್ತನಾಗಿ, ಆತನು ಸೃಷ್ಟಿಸಲ್ಪಟ್ಟದ್ದೆಲ್ಲದರ ಮೇಲೆ ಸರ್ವೋಚ್ಛನಾಗಿದ್ದಾನೆ. ಆತನು ದೇವರ ಏಕೈಕ ಮತ್ತು ವಿಶಿಷ್ಟ ಮಗನಾಗಿದ್ದಾನೆ.

## ಸರ್ವವನ್ನು ಸೃಷ್ಟಿಸಿದಾತನು (1:16)

**16ಭೂಪರಲೋಕಗಳಲ್ಲಿರುವ ದೃಶ್ಯಾದೃಶ್ಯವಾದವು ಗಳೆಲ್ಲವೂ ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ ಧೊರೆತನಗಳಾಗಲಿ ಅಧಿಕಾರಗಳಾಗಲಿ ಆತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವು ಆತನ ಮುಖಾಂತರವಾಗಿಯೂ ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟಿತು.**

ಯೇಸು ಅದೃಶ್ಯನಾದ ದೇವರ ಪ್ರತಿರೂಪನು ಮತ್ತು ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನು ಎಂದು ತೋರಿಸಿ ಕೊಟ್ಟ ಬಳಿಕ (ವ. 15), ಯೇಸುವು ಸಮಸ್ತದ ಸೃಷ್ಟಿಕರ್ತನು ಎಂಬ ಘನ ಗಾಂಭಿರ್ಯವಾದ ಸತ್ಯದ ಕಡೆಗೆ ಪೌಲನು ತಿರುಗಿಕೊಳ್ಳುತ್ತಾನೆ. ಒಬ್ಬನು ಸೃಷ್ಟಿಯೊಂದಿಗೆ ಯೇಸುವಿಗಿರುವ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕೆಂದರೆ ಆತನು ಅರಿತುಕೊಳ್ಳುವ ಅಗತ್ಯವಿರುವ ಮುಖ್ಯ ಪಗುಚ್ಛಗಳನ್ನು 16 ಮತ್ತು 17 ವಚನಗಳು ಒಳಗೊಂಡಿರುತ್ತವೆ.

**“ಸರ್ವವು ಆತನ ಮುಖಾಂತರವಾಗಿ . . . ಸೃಷ್ಟಿಸಲ್ಪಟ್ಟವು”**

ಈ ವಚನವು **ಆದ್ದರಿಂದ** (ὅτι, *hoti*) ಎಂಬ ಪದದಿಂದ ಆರಂಭಗೊಳ್ಳುತ್ತದೆ, ಒಂದು ವಿವರಣಾತ್ಮಕ ಉಪವಾಕ್ಯದ ಒಂದು ಗುರುತಾಗಿರುತ್ತದೆ. ಅದು 15 ಮತ್ತು 16 ವಚನಗಳನ್ನು ಜೋಡಿಸುವದಾಗಿದೆ, ಹೀಗೆ ಈಗಷ್ಟೆ ಚರ್ಚಿಸಿದ ಯೇಸುವಿನ ಆದ್ಯತೆ ಮತ್ತು ಒಡೆಯತ್ವಕ್ಕೆ ಈ ಕೆಳಗಿನ ಹೇಳಿಕೆಗಳು ಪುರಾವೆಗಳು ಎಂಬದಾಗಿ ಸೂಚಿಸುವದಾಗಿರುತ್ತದೆ.

**ಸೃಷ್ಟಿಸಲ್ಪಟ್ಟಿತು** (ἐκτίσθη, *ektisthē*, ಇದು κτίζω, *ktizō ಎಂಬುದರ ಮೂಲ ಪದ*) ಎಂಬುದರ ಅರ್ಥವು “ಶೂನ್ಯದಿಂದ ಅಸ್ತಿತ್ವಕ್ಕೆ ತರಲ್ಪಟ್ಟಿತು” ಎಂಬದಾಗಿದೆ. ಯೇಸುವು “ಜ್ಯೇಷ್ಠಪುತ್ರ”ನು – ಅಂದರೆ, ಸೃಷ್ಟಿಗೆಲ್ಲಾ ಸರ್ವೋಚ್ಛನು – “ಆದ್ದರಿಂದ” ಅಥವಾ ಯಾಕೆಂದರೆ, ಆತನೇ ಸಮಸ್ತವನ್ನು ಸೃಷ್ಟಿಸಿದನು. “ಮನೆಗಿಂತ ಮನೆಕಟ್ಟಿದವನಿಗೆ ಹೆಚ್ಚಾದ ಮಾನವಿರುವದು” (ಇಬ್ರಿಯ 3:3). ಒಬ್ಬ ಜ್ಯೇಷ್ಠಪುತ್ರನಾಗಿ ಆತನ ಸ್ಥಾನ ಮತ್ತು ಗೌರವವು ಆತನು **ಸರ್ವ**ವನ್ನು ಸೃಷ್ಟಿಸಿದ್ದರ ಮೇಲೆ ಆಧಾರವಾಗಿರುತ್ತದೆ, ಅದರಲ್ಲಿ “ಆಕಾಶವೂ ಭೂಮಿಯೂ” (ಆದಿಕಾಂಡ 1:1) ಮತ್ತು ಇಡೀ ವಿಶ್ವವು ಸೇರಿರುತ್ತದೆ.

ಅನುವಾದಿಸಲ್ಪಟ್ಟ **ಮುಖಾಂತರ** ಎಂಬ ಉಪಸರ್ಗವು ಗ್ರೀಕ್.ನ ἐν (*en*). ಕೆಲವರು *en* ತನ್ನ ಮೂಲಭೂತ ಅರ್ಥವಾದ “ನಲ್ಲಿ” ಎಂಬುದನ್ನು ಉಳಿಸಿಕೊಳ್ಳತಕ್ಕದ್ದು ಎಂದು ಅಭಿಪ್ರಾಯ ಪಡುತ್ತಾರೆ: “‘ನಲ್ಲಿ’ ಎಂಬ ಉಪಸರ್ಗವು ಕ್ರಿಸ್ತನನ್ನು ಸೃಷ್ಟಿಯ ಕಾರ್ಯವು ಸಂಭವಿಸುವಂಥ ‘ಮಂಡಲ’ ಎಂಬದಾಗಿ ಸೂಚಿಸುವಂತೆ ತೋರುತ್ತದೆ.”[10]

ಹೊಸ ಒಡಂಬಡಿಕೆಯ ಎಲ್ಲಾ ಸಂಬಂಧಿತ ವಾಕ್ಯಭಾಗಗಳಲ್ಲಿ, ಸೃಷ್ಟಿಯ ಕಾರ್ಯದಲ್ಲಿ ಯೇಸುವಿನ ತೊಡಗಿರುವಿಕೆಯು ಗ್ರೀಕ್.ನ διά (*dia*) ಎಂಬ ಉಪಸರ್ಗದಿಂದ ವ್ಯಕ್ತಪಡಿಸಲ್ಪಟ್ಟಿರುತ್ತದೆ, ಅದರರ್ಥವು “ಮುಖಾಂತರ” ಎಂದಾಗಿರುತ್ತದೆ (ಯೋಹಾನ 1:3, 10; 1 ಕೊರಿಂಥ 8:6; ಇಬ್ರಿಯ 1:2). ಸೃಷ್ಟಿಸಲ್ಪಟ್ಟಿದ್ದೆಲ್ಲವೂ ಯೇಸುವಿನ ಮೂಲಕ ಸೃಷ್ಟಿಸಲ್ಪಟ್ಟಿತು. ಆತನು ಯಾರ ಮುಖಾಂತರ ಎಲ್ಲವು ಸೃಷ್ಟಿಸಲ್ಪಟ್ಟಿತೋ ಆ ಮಧ್ಯಸ್ಥಗಾರ, ಮಧ್ಯವರ್ತಿ ಕಾರಣ ಆಗಿದ್ದಾನೆ.

ಸೃಷ್ಟಿಯ ಕಾರ್ಯದಲ್ಲಿ ತಂದೆ ಮತ್ತು ಮಗ ಇಬ್ಬರೂ ಭಾಗಿಯಾಗಿದ್ದರು. ದೇವರು ಆಕಾಶವನ್ನು ಮತ್ತು ಭೂಮಿಯನ್ನು ಉಂಟು ಮಾಡಿದನು ಹಾಗೂ ಯೇಸುವು “ಸರ್ವ”ವನ್ನು ಸೃಷ್ಟಿಸಿದನು ಎಂಬ ವಾಸ್ತವಾಂಶದ ಅರ್ಥವು ಯೇಸುವು ದೇವರಾಗಿದ್ದಾನೆ ಆದರೆ ತಂದೆಯಲ್ಲ ಎಂಬದೆ; ಮಗನಾಗಿ, ಆತನು ತಂದೆಯ ಸಂಗಡ ಸೃಷ್ಟಿಯ ಪ್ರಕ್ರಿಯೆಯಲ್ಲಿ ಸಹಕಾರ ನೀಡಿದನು.

ವಿಶ್ವ ಮತ್ತು ಸಕಲ ವಿಧವಾದ ಜೀವಗಳ ಅಸ್ತಿತ್ವಕ್ಕೆ ಮೂರು ಪ್ರತಿಪಾದನೆಗಳು ಕೊಡಲ್ಪಡುತ್ತವೆ: (1) ಅವುಗಳು ಸೃಷ್ಟಿಸಲ್ಪಟ್ಟಿರುತ್ತವೆ ಅಥವಾ ಸೃಷ್ಟಿಸಲ್ಪಟ್ಟಿರುವದಿಲ್ಲ. (2) ಅವುಗಳು ವಿನ್ಯಾಸಿಸಲ್ಪಟ್ಟಿರುತ್ತವೆ ಅಥವಾ ವಿನ್ಯಾಸಿಸಲ್ಪಟ್ಟಿರುವದಿಲ್ಲ. (3) ಅವುಗಳನ್ನು ಬುದ್ಧಿಶಕ್ತಿ ಅಥವಾ ಬುದ್ಧಿಶಕ್ತಿಯಲ್ಲದ್ದು ಅಸ್ತಿತ್ವಕ್ಕೆ ತಂದಿತು.

ವಿಶ್ವವು ಸೃಷ್ಟಿಸಲ್ಪಟ್ಟಿಲ್ಲವಾದರೆ, ಭೌತವಸ್ತುವು ನಿತ್ಯವಾದದ್ದು ಎಂದಾಗುತ್ತದೆ. ಭೌತವಸ್ತುವು ನಿತ್ಯವಾದದ್ದಲ್ಲ ಎಂಬ ನಿರ್ಧಾರಕ್ಕೆ ವಿಜ್ಞಾನಿಗಳು ಬಂದಿರುತ್ತಾರೆ, ಅದರರ್ಥವು ಅದು ಸೃಷ್ಟಿಸಲ್ಪಟ್ಟದ್ದಾಗೊರಬೇಕು ಎಂದಾಗುತ್ತದೆ. ನಕ್ಷತ್ರಗಳಿಗೆ ಶಕ್ತಿ ತುಂಬುವ ಬದಲಿಡಲಾಗದಂತಹ ಜಲಜನಕ (ಹೈಡ್ರೋಜನ್) ಬರಿದಾಗುತ್ತಾ ಬರುತ್ತಿದೆ.

ಶಕ್ತಿಯ ಅಂತಹ ಬಳಕೆಯು ಸದಾಕಾಲವೂ ಸಾಗಿರುವದಿಲ್ಲ ಮತ್ತು ಶಾಶ್ವತವಾಗಿ ಸಾಗಲಾರದು. ಕಾಲದ ಒಂದಿಲ್ಲಾ ಒಂದು ಹಂತದಲ್ಲಿ, ವಿಶ್ವಕ್ಕೆ ಶಕ್ತಿಯನ್ನು ಕೊಡಬೇಕಾದ ಸಂದರ್ಭವಿದ್ದಿತ್ತು. ಅದಕ್ಕೊಂದು ಆರಂಭವು ಇದ್ದಿರಬೇಕು.

ವಿಶ್ವಕ್ಕೆ ಒಂದು ಆರಂಭವಿತ್ತು ಎಂದಾದರೆ, ಅದು ವಿನ್ಯಾಸಗೊಳಿಸಲ್ಪಟ್ಟಿತ್ತು ಅಥವಾ ವಿನ್ಯಾಸಗೊಳಿಸ ಲ್ಪಟ್ಟಿರಲಿಲ್ಲ. ವಿಶ್ವದ ಅನೇಕ ಅಂಶಗಳು – ಉದಾಹರಣೆಗೆ, ಆಕಾಶಕಾಯಗಳು, ಭೂಮಿಯ ಪರಿಸರ ವಿಜ್ಞಾನ, ಮತ್ತು ಜೀವಿಸುವ ಪ್ರಾಣಿ ಅಥವಾ ಸಸ್ಯಗಳು – ವಿನ್ಯಾಸವನ್ನು ತೋರಿಸುತ್ತವೆ. ವಿನ್ಯಾಸ ಇರುವದಾದರೆ, ಸೃಷ್ಟಿಸಿದ ಶಕ್ತಿಯು ವಿನ್ಯಾಸಗೊಳಿಸುವ ಸಾಮರ್ಥ್ಯವನ್ನು ಹೊಂದಿದ್ದಿರಬೇಕು ಎಂದಾಗುತ್ತದೆ.

ವಿಶ್ವದಲ್ಲಿನ ವಿನ್ಯಾಸವು ಬುದ್ಧಿಶಕ್ತಿಯಿಂದ ಅಥವಾ ಬುದ್ಧಿಶಕ್ತಿಯಲ್ಲದ್ದರಿಂದ ಉಂಟು ಮಾಡಲ್ಪಟ್ಟಿತು. ಮರು-ಉತ್ಪತ್ತಿ ಮಾಡುವ ಹಾಗೆ ಪುರುಷ ಮತ್ತು ಸ್ತ್ರೀ ಹೇಗೆ ಬೇರೆ ಬೇರೆಯಾಗಿ ಅಭಿವೃದ್ಧಿಗೊಂಡಿರಲು ಸಾಧ್ಯ? ಲಕ್ಷಾಂತರ ವರ್ಷಗಳ ವಿಕಸನವು ಉತ್ತರವಾಗಿರುವದಿಲ್ಲ. ಪ್ರತಿಯೊಂದು ಜೀವಿಯು ಒಂದು ಸಂತತಿಯಲ್ಲಿ ಮರುಉತ್ಪತ್ತಿಗೊಳಿಸಬೇಕು ಇಲ್ಲವೆ ಅಳಿದುಹೋಗಬೇಕು. ಮರುಉತ್ಪತ್ತಿ ಮತ್ತು ಪ್ರಕೃತಿಯ ಇತರ ಅಂಶಗಳು ಬುದ್ಧಿವಂತಿಕೆಯಿಂದ ವಿನ್ಯಾಸಗೊಳಿಸಲ್ಪಟ್ಟದ್ದನ್ನು ತೋರಿಸುತ್ತವೆ, ಅದನ್ನು ಭೌತವಸ್ತುವು ಉತ್ಪಾದಿಸಲಾರದು. ಬುದ್ಧಿಶಕ್ತಿಯು ಇಲ್ಲದೆ, ಭೌತವಸ್ತುವು ಕ್ರಮದ ಬದಲಾಗಿ ಅಸ್ತವ್ಯಸ್ತತೆಯ ಕಡೆಗೆ ಒಲವು ಹೊಂದಿರುತ್ತದೆ. ಬುದ್ಧಿಶಕ್ತಿಯಲ್ಲದ್ದಕ್ಕೆ ವಿನ್ಯಾಸಗೊಳಿಸುವ ಸಾಮರ್ಥ್ಯವಿಲ್ಲವಾದ್ದರಿಂದ, ತಾರ್ಕಿಕವಾದ ನಿರ್ಧಾರವೇನೆಂದರೆ ಒಬ್ಬ ಬುದ್ಧಿಶಕ್ತಿಯುಳ್ಳ ವಿನ್ಯಾಸಕಾರನು, ದೇವರು ವಿಶ್ವವನ್ನು ಸೃಷ್ಟಿಸಿದನು ಎಂಬದೆ.

ಒಂದು ಸೃಷ್ಟಿಸಲ್ಪಟ್ಟ ವಿಶ್ವದ ಪರವಾಗಿ ಬೈಬಲ್ ಮೂಲಭೂತ ವಾದಗಳನ್ನು ಮಂಡಿಸುತ್ತದೆ:

> ಆಕಾಶವು ದೇವರ ಪ್ರಭಾವವನ್ನು ಪ್ರಚುರ ಪಡಿಸುತ್ತದೆ (ಕೀರ್ತನೆ 19:1).

> ಹೇಗಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ (ರೋಮಾ 1:20).

> ಪ್ರತಿ ಮನೆಯನ್ನು ಯಾರೋ ಒಬ್ಬನು ಕಟ್ಟಿರುವನು' ಸಮಸ್ತವನ್ನು ಕಟ್ಟಿದಾತನು ದೇವರೇ (ಇಬ್ರಿಯ 3:4).

ವಿಶ್ವವು ಒಬ್ಬ ಬುದ್ಧಿಶಕ್ತಿಯುಳ್ಳ ಜೀವಿಯಿಂದ ಸೃಷ್ಟಿಸಲ್ಪಟ್ಟಿರುತ್ತದೆಂಬದನ್ನು ತಿರಸ್ಕರಿಸುವ ಮೂಲಕ, ಒಬ್ಬನು ಭೌತವಸ್ತುವು ನಿತ್ಯವಾದದ್ದೆಂದು, ಮತ್ತು ವಿಶ್ವದಲ್ಲಿ ಕ್ರಮವನ್ನು ಕಾಪಾಡಿಕೊಂಡು ಹೋಗಬಲ್ಲದು ಎಂದು ನಂಬಿಕೆ ಉಳ್ಳವನಾಗಿರಬೇಕಾಗುತ್ತದೆ. ಇದಕ್ಕೆ ವೈಜ್ಞಾನಿಕ ಮೂಲತತ್ವಗಳನ್ನು ನಿರಾಕರಿಸುವ ಅಗತ್ಯವಿರುತ್ತದೆ. ಕೆಲವೊಂದು ಸರಳವಾದ ಉದಾಹರಣೆಗಳೆಂದರೆ ಜೀವದಿಂದ ಜೀವವು ಉಂಟಾಗುತ್ತದೆ, ಶಕ್ತಿಯ ಬರಿದಾಗುವಿಕೆಯು ಒಂದು ಶಕ್ತಿಯ ಮೂಲಕ್ಕೆ ಬೇಡಿಕೆಯನ್ನಿಡುತ್ತದೆ, ಬುದ್ಧಿಶಕ್ತಿಯು ಬುದ್ಧಿಶಕ್ತಿಯಿಂದ ಬರುತ್ತದೆ, ಮತ್ತು ವಿನ್ಯಾಸವು

ವಿನ್ಯಾಸಕಾರಣ ಫಲಿತವಾಗಿರುತ್ತದೆ. ವಿಶ್ವಾಸಿಗಳೇತರೆಂದು ಕರೆಯಲ್ಪಡುವವರು ಸರ್ವಜ್ಞಾನಿಯಾದ ಮತ್ತು ಸರ್ವಶಕ್ತನಾದ ದೇವರ ಸೃಷ್ಟಿಸುವ ಮಹಾ ಮೇಧಾವಿತನದ ಬದಲಾಗಿ ಪ್ರಕೃತಿಯ ಅದ್ಭುತಗಳಲ್ಲಿ ವಿಶ್ವಾಸಿಬೇಕು.

ಎರಡನೆಯ ಶತಮಾನದಲ್ಲಿ ಅಭಿವೃದ್ಧಿಗೊಂಡ ಗ್ನಾಸ್ಟಿಕ್‌ವಾದವು ಕ್ರೈಸ್ತತ್ವದ ಕೆಲವು ಮೂಲಭೂತ ಬೋಧನೆಗಳನ್ನು ನಿರಾಕರಿಸಿತು. ಅದರ ಅನುಯಾಯಿಗಳು ಬೋಧಿಸಿದ್ದೇನೆಂದರೆ, ದೇವರು ಬೆಳಕಿನಲ್ಲಿ ವಾಸಿಸುವ ಶುದ್ಧ ಆತ್ಮನಾಗಿದ್ದು, ಆತನು ಪಾಪದ ಭೌತವಸ್ತು ಮತ್ತು ಕತ್ತಲೆಯಿಂದ ಸಂಪೂರ್ಣ ಪ್ರತ್ಯೇಕವಾಗಿರುತ್ತಾನೆ. ಅವರ ಆಲೋಚನೆಯ ಪ್ರಕಾರ, ಆತನು ಭೌತಿಕ ಶರೀರವನ್ನು ಧರಿಸಿಕೊಳ್ಳುವದು ಅಸಾಧ್ಯವಾಗಿತ್ತು, ಮತ್ತು ಆತನು ಭೌತವಸ್ತುವನ್ನು ಉಂಟು ಮಾಡುವಿಕೆಯನ್ನು ಅವರು ಅಸಂಭವನೀಯವಾದ ವಿಚಾರವೆಂದು ಪರಿಗಣಿಸಿದ್ದರು. ಪಾಪದಿಂದ ಪ್ರತ್ಯೇಕವಾಗಿರುವ ದೇವರು, ಪಾಪದಿಂದ ಕೆಟ್ಟುಹೋಗಿರುವ ಲೋಕವನ್ನು ಸೃಷ್ಟಿಸಿರುವದಕ್ಕೆ ಸಾಧ್ಯವಿಲ್ಲವೆಂದು ಅವರು ವಾದಿಸುತ್ತಾರೆ. ಆದುದರಿಂದ, ಅವರು ನಂಬುವದೇನೆಂದರೆ, ಭೌತಿಕ ವಿಶ್ವವು ಒಬ್ಬ ಒಳ್ಳೆಯ ದೇವರಿಂದ ಒಬ್ಬ ಅಲ್ಪನಾದ ದೇವರಿಗೆ ಮತ್ತು ಕ್ರಮೇಣದಲ್ಲಿ ಕೆಟ್ಟ ಭೌತವಸ್ತುವಿಗೆ ಹರಿದು ಬಂದ ಅನಾದಿಶಕ್ತಿಗಳು, ಹೊರಸೂಸುವಿಕೆಗಳ ಸರಣಿಯಿಂದ ಒಂದು ತಪ್ಪಾಗಿ ಸೃಷ್ಟಿಸಲ್ಪಟ್ಟಿರುತ್ತದೆ ಎಂಬದೆ. ವಿಶ್ವದ ಮೂಲದ ಕುರಿತು ಅನಂತರದಲ್ಲಿ ಬಂದ ಗ್ನಾಸ್ಟಿಕ್‌ರ ಬೋಧನೆಗಳು ಕೊಲೊಸ್ಸೆಯವರಿಗೆ ಪತ್ರಿಕೆಯಲ್ಲಿ ಪೌಲನು ನೀಡುವ ಬೋಧನೆಗೆ ವ್ಯತಿರಿಕ್ತವಾಗಿರುತ್ತದೆ. ಸಮಸ್ತವು ಸೃಷ್ಟಿಸಲ್ಪಟ್ಟಿದ್ದು ಯೇಸುವಿನ ಮುಖಾಂತರವೇ ಹೊರತು, ದೇವದೂತ ಮಧ್ಯವರ್ತಿಗಳಿಂದಲ್ಲ ಎಂಬದನ್ನು ಆತನು ಒತ್ತಿ ಹೇಳುತ್ತಾನೆ.

### "ಭೂಪರಲೋಕಗಳಲ್ಲಿರುವ"

ಯೇಸು **ಭೂಪರಲೋಕಗಳಲ್ಲಿರುವ** "ಸರ್ವ"ವನ್ನೂ ಉಂಟು ಮಾಡುವದರಲ್ಲಿ ಸಾಧನವಾಗಿದ್ದನು. "ಪರಲೋಕಗಳು" (οὐρανοῖς, *ouranois*) ಎಂಬುದು ಆಕಾಶವನ್ನು (ಅಪೊಸ್ತಲರ ಕೃತ್ಯಗಳು 14:17), ನಕ್ಷತ್ರಗಳಿಂದ ಕೂಡಿದ ಉನ್ನತ ಲೋಕಗಳನ್ನು (ಎಫೆಸ 4:10; ಇಬ್ರಿಯ 4:14; 7:26; 2 ಪೇತ್ರ 3:7, 10), ಮತ್ತು ದೇವರ ನಿತ್ಯವಾದ ಪರಲೋಕ ನಿವಾಸವನ್ನು ಸೂಚಿಸಬಹುದಾಗಿದೆ (ಮತ್ತಾಯ 6:9; ಇಬ್ರಿಯ 8:1). ಅಲ್ಲದೆ, ಈ ಪದವು ಭೂಮಿಯ ಹೊರಗಡೆಯಲ್ಲಿರುವ ಒಳ್ಳೆಯ ಮತ್ತು ಕೆಟ್ಟ ಎರಡೂ ಆತ್ಮಗಳು ವಾಸಿಸುವಂತಹ ಮಂಡಲಗಳು ಎಂಬ ಅರ್ಥವನ್ನು ಕೊಡಬಹುದಾಗಿದೆ (ಎಫೆಸ 1:10). ಈ ವಚನಗಳಲ್ಲಿ "ಳಲ್ಲಿರುವ" ಮತ್ತು "ಮೇಲೆ" ಎಂಬ ಪದಗಳ ಬಳಕೆಯು ಸೂಚಿಸುವದೇನೆಂದರೆ ಈ ಸ್ಥಳಗಳ ಎಲ್ಲಾ ನಿವಾಸಿಗಳು ಎಂಬ ಅರ್ಥದಲ್ಲಿ ಪೌಲನು ಹೇಳಿದನು ಎಂಬದೆ. ಅದು ನಿಜವಾದಲ್ಲಿ, ಇದರೊಳಗೆ ಭೂಮಿಯ ಮೇಲಿರುವ ನಿವಾಸಿಗಳು ಮತ್ತು ಭೂಮಿಯ ಮಂಡಲ ಹೊರಗಿರುವ ಪ್ರತಿಯೊಂದು ಜೀವಿಯೂ – ದೇವದೂತ ಹಾಗೂ ಸೈತಾನಿಗೆ ಸಂಬಂಧಿಸಿದ ಜೀವಿಗಳು ಸಹ – ಸೇರಿರುತ್ತಾರೆ.

ಆಕಾಶ ಮತ್ತು ಭೂಮಿಯನ್ನು ಉಂಟು ಮಾಡುವ ಮುನ್ನ, ಕೆಟ್ಟದ್ದು ಇರಲಿಲ್ಲ. ಶಾರೀರಿಕವಾದದ್ದು ಯಾವದೂ ಅಸ್ತಿತ್ವದಲ್ಲಿರಲಿಲ್ಲ. ದೇವರ ಆತ್ಮೀಕ ಮಂಡಲ ಮಾತ್ರವೇ ಅಸ್ತಿತ್ವದಲ್ಲಿತ್ತು. ಯೇಸು ಹಿಂದಿರುಗಿ ಬರುವಾಗ, ಆತನು ಎಲ್ಲವನ್ನೂ ಅದರ ಮೂಲಸ್ಥಿತಿಗೆ ತರುವನು (ಅಪೊಸ್ತಲರ ಕೃತ್ಯಗಳು 3:20, 21); ಆಗ ಶಾರೀರಿಕವಾದ ಯಾವದೂ

ಇರುವದಿಲ್ಲ. ಕೇವಲ ನಿತ್ಯವಾದ, ಅದೃಶ್ಯವಾದ ಆತ್ಮೀಕ ಮಂಡಲವು ಉಳಿಯುವದು (2 ಕೊರಿಂಥ 4:18). ಸೃಷ್ಟಿಕರ್ತನಾಗಿ, ಯೇಸು ಸೃಷ್ಟಿಸಲ್ಪಟ್ಟ ಎಲ್ಲದರ ಮೇಲೆ ಸರ್ವೋಚ್ಛನಾಗಿದ್ದಾನೆ (ನೋಡಿರಿ 1 ಪೇತ್ರ 3:22). ಆಕಾಶ ಮತ್ತು ಭೂಮಿಯುದ್ದಕ್ಕೂ ಯೇಸುವಿನ ಅಧಿಕಾರದಡಿಯಲ್ಲಿ ಇಲ್ಲದ ಏಕೈಕ ವ್ಯಕ್ತಿಯೆಂದರೆ ತಂದೆಯು, ಆತನು ಸಮಸ್ತವನ್ನು ಆತನಿಗೆ ಅಧೀನ ಪಡಿಸಿರುತ್ತಾನೆ (1 ಕೊರಿಂಥ 15:27).

## "ದೃಶ್ಯಾದೃಶ್ಯವಾದವುಗಳೆಲ್ಲವೂ"

ಸೃಷ್ಟಿಸಲ್ಪಟ್ಟಿರುವ ಎಲ್ಲದರಲ್ಲಿ, ಬರಿದಾದ ಕಣ್ಣಿಗೆ **ದೃಶ್ಯವಾಗಿ**ರುವವುಗಳಿಗಿಂತಲೂ **ಅದೃಶ್ಯವಾದವುಗಳು** ಅಧಿಕವಾಗಿರುತ್ತವೆ. ಗೋಚರವಾಗುವ ಎಲ್ಲವನ್ನೂ ಅದೃಶ್ಯವಾದ ಕಣಗಳಿಂದ ರೂಪಿಸಲ್ಪಟ್ಟಿವೆ. ಬೈಬಲ್ ಹೀಗೆ ಹೇಳುವದು ವೈಜ್ಞಾನಿಕವಾಗಿ ಸರಿಯಾಗಿರುತ್ತದೆ, "ಕಾಣಿಸುವ ಈ ಜಗತ್ತು ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲ" (ಇಬ್ರಿಯ 11:3). ಇದು ಸಮಸ್ತವನ್ನು ದೇವರು ಶೂನ್ಯದಿಂದ ಉಂಟು ಮಾಡಿದ್ದನ್ನು ಸೂಚಿಸಬಹುದಾಗಿದೆ.

ಪೌಲನು ಆಕಾಶಗಳಲ್ಲಿಯೂ ಭುಮಿಯಲ್ಲಿಯೂ ಇರುವ ಸಮಸ್ತವನ್ನು ಸೇರ್ಪಡೆಗೊಳಿಸಿ ಹೇಳುವವನಾಗಿದ್ದಲ್ಲಿ, ಆತನು ದೃಶ್ಯವಾಗಿರುವ ಭೂಮಿಯ ನಿವಾಸಿಗಳನ್ನು ಮತ್ತು ಭೂಮಂಡಲದ ಹೊರಗಿರುವ ಅದೃಶ್ಯವಾದ ಆತ್ಮೀಕ ಜೀವಿಗಳು, ಜೊತೆಗೆ ದೇವರ ಮತ್ತು ಪಿಶಾಚನ ದೂತರು ಸಹ ಸೇರಿದಂತೆ ಇವರೆಲ್ಲರನ್ನು ಒಳಪಡಿಸಿ ಹೇಳಿದನೆಂದಾಗುತ್ತದೆ. ನಾವು ನಮ್ಮ ದೃಷ್ಟಿಯನ್ನು ನಿತ್ಯವಾದ, ಅದೃಶ್ಯವಾದ, ಪರಲೋಕ ಮಂಡಲದ ಮೇಲೆ ಇಡತಕ್ಕದ್ದು (2 ಕೊರಿಂಥ 4:18; ಕೊಲೊಸ್ಸೆ 3:1).

ಸೃಷ್ಟಿಕರ್ತನಾಗಿ, ಯೇಸುವು ಮಾನವ ಕಣ್ಣಿಗಳಿಗೆ ಗೋಚರವಾಗಬಲ್ಲವುಗಳಾಗಲಿ ಅಥವಾ ಅವುಗಳಿಂದ ಮರೆಯಾದವುಗಳಾಗಲಿ ಸರಿಯೇ ಸೃಷ್ಟಿಸಲ್ಪಟ್ಟದ್ದೆಲ್ಲದರ ಮೇಲೆ ಸರ್ವೋಚ್ಛನಾಗಿದ್ದಾನೆ. ಈ ಕಾರಣಕ್ಕಾಗಿ, ಶಾರೀರಿಕವಾಗಿರುವ ಯಾವದಕ್ಕಾದರೂ ಅಥವಾ ದೇವದೂತರಂತಹ ಅಥವಾ ಇತರ ಯಾವದೇ ಜೀವಿಗಳಂತಹ ಅದೃಶ್ಯವಾದ ಯಾವದಕ್ಕಾದರೂ ಆರಾಧನೆಯನ್ನಾಗಲು ಘನವನ್ನಾಗಲಿ ಸಲ್ಲಿಸುವ ಅಗತ್ಯವಿರುವದಿಲ್ಲ. ಯೇಸುವು ಏನಾಗಿದ್ದಾನೆಂಬ ಕಾರಣಕ್ಕಾಗಿ, ನಾವು ಆತನಿಗೆ ಅಧೀನರಾಗಬೇಕು, ಆತನನ್ನು ಘನ ಪಡಿಸಬೇಕು, ಆರಾಧಿಸಬೇಕು, ಮತ್ತು ವಿಧೇಯರಾಗಬೇಕು (ಎಫೆಸ 1:20-23; ಇಬ್ರಿಯ 1:6; 5:9).

## "ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ ದೊರೆತನಗಳಾಗಲಿ ಅಧಿಕಾರಗಳಾಗಲಿ"

ಯೇಸು ಉಂಟು ಮಾಡಿದ ಸೃಷ್ಟಿಗಳ ಕುರಿತ ತನ್ನ ಪಟ್ಟಿಗೆ, ಪೌಲನು ಮುಂದೆ **ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ ದೊರೆತನಗಳಾಗಲಿ ಅಧಿಕಾರಗಳಾಗಲಿ** ಸೇರ್ಪಡೆಗೊಳಿಸುತ್ತಾನೆ. ಇಲ್ಲಿ, "ಯಾವದೇ ಭಿನ್ನತೆಯನ್ನು ಮಾಡುವ ಉದ್ದೇಶವಿಲ್ಲದೆ ಗ್ರೀಕ್‌ನಲ್ಲಿ ನಾಲ್ಕು ಪದಗಳು ಬಳಸಲ್ಪಟ್ಟಿವೆ; ರೋಮಾ 8:38; 1 ಕೊರಿಂಥ 15:24; ಎಫೆಸ 1:21, 3:10, 6:12; ಕೊಲೊಸ್ಸೆ 2:10, 15; 1 ಪೇತ್ರ 3:22ರಲ್ಲಿನ ಹೋಲಿಕೆ ಮಾಡಬಹುದಾದ ಪಟ್ಟಿಗಳನ್ನು ನೋಡಿರಿ."[11] David M. Hay ಈ ಕೆಳಗಿನ ಅಭಿಪ್ರಾಯವನ್ನು

ವ್ಯಕ್ತಪಡಿಸುತ್ತಾನೆ:

> 1:16 ರಲ್ಲಿನ "ಸಿಂಹಾಸನಗಳಾಗಲಿ" ಎಂಬ ಪದವು ಹೊಸ ಒಡಂಬಡಿಕೆಯ ಇನ್ನಾವದೇ ವಾಕ್ಯಭಾಗಗಳಲ್ಲಿ ಅತಿಮಾನುಷ ಅಧಿಕಾರಗಳೆಂಬ ಅರ್ಥದಲ್ಲಿ ಬಳಸಲ್ಪಟ್ಟಿರುವದಿಲ್ಲ. "ದೊರೆತನಗಳಾಗಲಿ" ಎಂಬುದು ಪುನಃ ಎಫೆಸ 1:21ರಲ್ಲಿ ಮಾತ್ರವೇ ಈ ಅರ್ಥದಲ್ಲಿ ಬಳಸಲ್ಪಟ್ಟಿದೆ. ಅತಿಮಾನುಷ "ಪ್ರಭುತ್ವ" ಎಂಬುದು ಪುನಃ 2:10 ಮತ್ತು 15ರಲ್ಲಿಯೂ ರೋಮಾ 8:38; 1 ಕೊರಿಂಥ 15:24; ಎಫೆಸ 1:21; 3:10; ಮತ್ತು 6:12ರಲ್ಲಿಯೂ ಪುನಃ ಬಳಸಲ್ಪಟ್ಟಿದೆ. "ಅಧಿಕಾರ" ಎಂದು ಅನುವಾದಿಸಲ್ಪಟ್ಟಿರುವ ಪದವು ರೋಮಾ 8:38ನ್ನು ಹೊರತು ಪಡಿಸಿ ಮಿಕ್ಕ ಎಲ್ಲಾ ವಾಕ್ಯಭಾಗಗಳಲ್ಲಿ "ಪ್ರಭುತ್ವ" ಎಂಬುದರ ಜೊತೆಯಲ್ಲಿಯೇ ಕಾಣಿಸಿಕೊಳ್ಳುತ್ತದೆ. ಸ್ಪಷ್ಟವಾಗಿ ನಾವು ಇಲ್ಲಿ ರೂಢಿಮಾದರಿ ಪದಗಳ ಬಗ್ಗೆ ಮಾತಾಡುತ್ತಿದ್ದೇವೆ.[12]

ಈ ನಾಲ್ಕು ಪದಗಳನ್ನು ಸೇರ್ಪಡೆಗೊಳಿಸುವ ಮೂಲಕ, ಯೇಸುವು ಅಸ್ತಿತ್ವದಲ್ಲಿರುವ ಎಲ್ಲಾ ಅಧಿಕಾರ ಮೇಲಿರುವವನು ಮತ್ತು ಪ್ರತಿಯೊಂದು ಅಧಿಕಾರವು ಆತನ ಮೇಲೆ ಅವಲಂಭಿತವಾಗಿದೆ ಎಂಬುದನ್ನು ಪೌಲನು ಒತ್ತಿ ಹೇಳುತ್ತಾನೆ. ಆತನು ವಿಶ್ವದಲ್ಲಿರುವ ಅತ್ಯುನ್ನತ ಪ್ರತಿಷ್ಠಾಪನೆಗಳು ಮತ್ತು ಜೀವಿಗಳಿಗೆ ಸರ್ವೋಚ್ಚನಾಗಿದ್ದಾನೆ. ಭೂಮಿಯ ಮೇಲಿನ ಅಧಿಕಾರಗಳು ಆತನಿಗೆ ಹೋಲಿಸಿದರೆ ಅಲ್ಪವಾದವುಗಳಾಗಿವೆ, ಅದೇ ರೀತಿಯಲ್ಲಿಯೇ ದೇವದೂತರು ಮತ್ತು ಸೈತಾನನ ಅಧೀಕಾರಗಳು ಸೇರಿದಂತೆ ಪರಲೋಕದ ಸಮೂಹಗಳು ಸಹ ಇರುತ್ತವೆ (1 ಪೇತ್ರ 3:22; ಇಬ್ರಿಯ 2:14; 1 ಯೋಹಾನ 4:4). ಕೊಲೊಸ್ಸೆಯವರಿಗೆ ವಿಗ್ರಹಾರಾಧಕ ಜನರ ದೇವರುಗಳನ್ನಾಗಲಿ ಅಥವಾ ದೇವದೂತರನ್ನಾಗಲಿ ಆರಾಧಿಸುವಂತೆ ಮೋಸ ಹೋಗದೆ ಆತನೊಬ್ಬನನ್ನೇ ಆರಾಧಿಸುವಂತೆ ಬೋಧಿಸಲಾಯಿತು (ಕೊಲೊಸ್ಸೆ 2:18).

## "ಸರ್ವವು ಆತನ ಮುಖಾಂತರವಾಗಿಯೂ ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟಿತು"

ಆಕಾಶಗಳು ಮತ್ತು ಭೂಮಿಯು ಯೇಸುವಿನಿಂದ ಸೃಷ್ಟಿಸಲ್ಪಟ್ಟಿದ್ದು ಮಾತ್ರವೇ ಆಗಿರಲಿಲ್ಲ, ಆದರೆ ಅವುಗಳು ಆತನಿಗೋಸ್ಕರವಾಗಿ ಸೃಷ್ಟಿಸಲ್ಪಟ್ಟಿದ್ದವು. ಆತನು ಶಾರೀರಿಕ ವಿಶ್ವಕ್ಕೆ ಮೂಲನು ಮತ್ತು ಅದರ ಅಸ್ತಿತ್ವಕ್ಕೆ ಕಾರಣನು ಆಗಿದ್ದಾನೆ.

ಗ್ರೀಕ್ ಕ್ರಿಯಾಪದ ರೂಪವಾದ (ἔκτισται, *ektistai*), **ಸೃಷ್ಟಿಸಲ್ಪಟ್ಟಿತು** ಎಂಬುದು ಸೂಚಿಸುವದೇನೆಂದರೆ ಸೃಷ್ಟಿಯು ಕಾಲದಲ್ಲಿನ ಒಂದು ಹಂತದಲ್ಲಿ ಸಂಭವಿಸಿತು ಮತ್ತು ಸೃಷ್ಟಿಯು ತಾನಿರುವ ರೂಪದಲ್ಲಿ ಯೇಸುವಿನ ಮುಖಾಂತರ ಮತ್ತು ಆತನಿಗೋಸ್ಕರ ಮುಂದುವರೆಯುತ್ತಿದೆ ಎಂಬದೆ. "ವಚನದ ಅಂತ್ಯದಲ್ಲಿ . . . 'ಸೃಷ್ಟಿಸಲ್ಪಟ್ಟಿತು' ಕಾಲರೂಪವು ಪರಿಪೂರ್ಣವಾಗಿದೆ, ಸೃಷ್ಟಿಸುವ ಕ್ರಿಯೆಯ ನಿರಂತರ ಫಲಿತವನ್ನು ಸೂಚಿಸುವದಾಗಿದೆ."[13] ಎಲ್ಲಾ ಸೃಷ್ಟಿಯು ಆತನ ಮಹಿಮೆಗಾಗಿ ಮತ್ತು ಘನತೆಗಾಗಿ ಇರುತ್ತದೆ. ತಂದೆಯ ಉದ್ದೇಶವು ಇದೇ ಆಗಿತ್ತು: ಏನೆಂದರೆ ತನ್ನ ಸೃಷ್ಟಿಯ ಮುಖಾಂತರ ಭೂಮಿಯ ಮತ್ತು ಪರಲೋಕದ ಎರಡೂ ಜೀವಿಗಳಿಂದಲೂ ಯೇಸುವ ಮಹಿಮೆ ಪಡಿಸಲ್ಪಡಬೇಕು ಎಂಬದೆ.

**ಆತನಿಗೋಸ್ಕರವಾಗಿಯೂ** ಎಂಬ ಪದದಲ್ಲಿರುವ "ಗೋಸ್ಕರ" (εἰς, *eis*,

ಪ್ರಾಥಮಿಕವಾಗಿ "ಒಳಗೆ" ಎಂದರ್ಥ ನೀಡುವ) ಎಂಬ ಉಪಸರ್ಗವು ಈ ಸಂದರ್ಭದಲ್ಲಿ "ಉದ್ದೇಶ ಅಥವಾ ಗುರಿ" ಯನ್ನು ವ್ಯಕ್ತಪಡಿಸುತ್ತದೆ.[14] *Eis*ನ ಅದೇ ಅರ್ಥವು ಅಪೊಸ್ತಲರ ಕೃತ್ಯಗಳು 2:38ರಲ್ಲಿ ಕಂಡುಬರುತ್ತದೆ. ಯೆಹೂದ್ಯರು ತಮ್ಮ ಪಾಪಗಳು ಪರಿಹಾರವಾಗು "ವದಕ್ಕಾಗಿ," *eis*, ಪಶ್ಚಾತ್ತಾಪಪಟ್ಟು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಪೇತ್ರನು ಹೇಳುತ್ತಾನೆ. ಯೇಸುವು ತನ್ನ ರಕ್ತವು ಪಾಪಗಳ ಕ್ಷಮೆ "ಗಾಗಿ" ಸುರಿಸಲ್ಪಡುವದು ಎಂದು ಹೇಳಿದಾಗ *eis*ನ್ನು ಬಳಸಿದನು (ಮತ್ತಾಯ 26:28). ಯೇಸುವು ರಕ್ತವನ್ನು ಸುರಿಸುವದರ ಮತ್ತು ಪಶ್ಚಾತ್ತಾಪ ಪಡುವದು ಹಾಗೂ ದೀಕ್ಷಾಸ್ನಾನ ಮಾಡಿಸಿಕೊಳ್ಳುವರ ಅಂತಿಮ ಉದ್ದೇಶ ಹಾಗೂ ಗುರಿಯು ಪಾಪಗಳ ಕ್ಷಮಾಪಣೆಯಾಗಿರುತ್ತದೆ, ಅದೇ ರೀತಿಯೇ ಯೇಸುವು ಸೃಷ್ಟಿಯ ಉದ್ದೇಶ ಹಾಗೂ ಗುರಿಯಾಗಿದ್ದಾನೆ. ವಿಶ್ವವು ಕ್ರಿಸ್ತನಲ್ಲಿ ಕೇಂದ್ರೀಕೃತವಾಗಿದೆ.

ವಿಶ್ವವು ಯೇಸುವಿಗೋಸ್ಕರ ಇರುವದಾಗಿದೆ; ಯಾಕೆಂದರೆ ಆತನಿಗೋಸ್ಕರವೇ ಅದು ಸೃಷ್ಟಿಸಲ್ಪಟ್ಟಿತು. ಅದೇ ರೀತಿಯಲ್ಲಿಯೇ, ಪೌಲನು ಹೀಗೆ ಬರೆಯುತ್ತಾನೆ, "ಸಮಸ್ತವು ಆತನಿಂದ ಉತ್ಪತ್ತಿಯಾಗಿ ಆತನಿಂದ ನಡೆಯುತ್ತಾ ಆತನಿಗಾಗಿ [*eis*] ಇರುತ್ತದೆ" (ರೋಮಾ 11:36), ಮತ್ತು ". . . ಒಬ್ಬನೇ ದೇವರಿದ್ದಾನೆ; ಆತನು ತಂದೆಯೆಂಬಾತನೇ; ಆತನು ಸಮಸ್ತಕ್ಕೂ ಮೂಲಕಾರಣನು; ನಾವು ಆತನಿಗಾಗಿ [*eis*] ಉಂಟಾದೆವು. ಮತ್ತು ನಮಗೆ ಒಬ್ಬನೇ ಕರ್ತ; ಆತನು ಯೇಸು ಕ್ರಿಸ್ತನೇ; ಆತನ ಮುಖಾಂತರ ಸಮಸ್ತವೂ ಉಂಟಾಯಿತು, ನಾವೂ ಆತನ ಮುಖಾಂತರ ಉಂಟಾದೆವು" (1 ಕೊರಿಂಥ 8:6). ನಾವು ತಂದೆಗಾಗಿ ಮತ್ತು ಮಗನಿಗಾಗಿ ಉಂಟಾದೆವು ಎಂದು ಹೇಳುವದರಲ್ಲಿ ಯಾವದೇ ವಿರೋಧ ಇರುವದಿಲ್ಲ. ನೀತಿವಂತರ ಆತ್ಮೀಕ ಸ್ವಭಾವವು ಮಗನಿಂದ ಆತನ ಮಹಿಮೆಗೋಸ್ಕರ ಸಾಧ್ಯಗೊಳಿಸಲ್ಪಟ್ಟಿದೆ, ಹೀಗೆ ಆತನು ಅವರನ್ನು ತಂದಗೆ ಒಪ್ಪಿಸುವದಕ್ಕೆ ಶಕ್ತನಾಗುವನು. ಮಗನಿಗೆ ಸೇರಿದವರು ಮತ್ತು ಆತನ ರಾಜ್ಯದಲ್ಲಿರುವವರು ಅಂತ್ಯದಲ್ಲಿ "ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು" (ಮತ್ತಾಯ 13:43), ಆಗ ಆತನು ತನ್ನ ರಾಜ್ಯವನ್ನು ತಂದೆಗೆ ಒಪ್ಪಿಸಿ ಕೊಡುತ್ತಾನೆ (1 ಕೊರಿಂಥ 15:24).

## ಸಮಸ್ತಕ್ಕೂ ಆಧಾರಭೂತನು (1:17)

**17ಆತನು ಎಲ್ಲಕ್ಕೂ ಮೊದಲು ಇದ್ದವನು; ಆತನು ಸಮಸ್ತಕ್ಕೂ ಆಧಾರಭೂತನು.**

### "ಆತನು ಎಲ್ಲಕ್ಕೂ ಮೊದಲು ಇದ್ದವನು"

ಯೇಸು **ಎಲ್ಲಕ್ಕೂ ಮೊದಲು ಇದ್ದವನು** ಎಂಬ ವಾಸ್ತವಾಂಶದ ಅರ್ಥವು ಆತನು ಸೃಷ್ಟಿಸಲ್ಪಟ್ಟ ಸಂಗತಿಗಳ ಭಾಗವಾಗಿರಲಿಲ್ಲ ಎಂಬದೆ. "ಮೊದಲು" (πρὸ, *pro*) ಎಂಬುದನ್ನು ಕಾಲ ಮತ್ತು ಸ್ಥಾನದ ಆದ್ಯತೆಗಳೆರಡನ್ನೂ ಸೂಚಿಸುವದಕ್ಕೆ ಬಳಸಬಹುದಾಗಿದೆ. ಹೊಸ ಒಡಂಬಡಿಕೆಯಲ್ಲಿ ಕನಿಷ್ಠ ಎರಡು ಸಾರಿ, ಅದು ಸ್ಥಾನದ ಅರ್ಥದಲ್ಲಿ ಬಳಸಲ್ಪಟ್ಟಿದೆ ("ಮುಖ್ಯವಾಗಿ"; ಯಾಕೋಬ 5:12; 1 ಪೇತ್ರ 4:8). ಬಹುಶಃ ಪೌಲನು ಎರಡೂ ಆಲೋಚನೆಗಳನ್ನು ಉದ್ದೇಶಿಸಿ ಹೇಳಿರಬೇಕು. ಆತನ ಮುಂಚಿನ ವಾದಗಳ ಪ್ರಕಾರ, ಯೇಸುವು ಎಲ್ಲಕ್ಕೂ ಮೇಲಿರುವವನು ಮತ್ತು ಮೊದಲು ಇರುವವನು

ಎರಡೂ ಆಗಿದ್ದಾನೆ.

ಯೇಸುವು ಎಲ್ಲಕ್ಕೂ ಮೊದಲು "ಇದ್ದವನು" ಎಂದು ಒತ್ತಿ ಹೇಳಿದನು, ಹೊರತು ಆತನು ಎಲ್ಲಕೂ ಮೊದಲು "ಇದ್ದನು" ಎಂದಲ್ಲ. "ಇದ್ದವನು" ಎಂದು ಬಳಸುವ ಮೂಲಕ, ಯೇಸುವು ಎಲ್ಲಕ್ಕೂ ಮೊದಲು ಇರುವದನ್ನು ಮುಂದುವರೆಸಿರುತ್ತಾನೆಂಬ ಸೂಚ್ಯಾರ್ಥವನ್ನು ನೀಡುತ್ತಾನೆ. J. B. Lightfoot ಸರಿಯಾಗಿ ಅಭಿಪ್ರಾಯ ಪಡುತ್ತಾನೆ, ಏನೆಂದರೆ (ἐστιν, *estin*) ಎಂಬುದು "ಪೂರ್ವಾಸ್ತಿತ್ವವು ಸಂಪೂರ್ಣವಾದ ಅಸ್ತಿತ್ವ ಎಂದು ಘೋಷಿಸುವದಾಗಿದೆ" ಎಂಬದೆ.[15] ಯೇಸು "ಲೋಕವು ಉಂಟಾಗುವದಕ್ಕೆ ಮುಂಚೆ" ತಾನು ತಂದೆಯ ಬಳಿಯಲ್ಲಿದ್ದನೆಂದು ಹೇಳುವ ಮೂಲಕ ಇದೇ ಸತ್ಯವನ್ನು ವ್ಯಕ್ತಪಡಿಸುತ್ತಾನೆ (ಯೋಹಾನ 17:5).

"ಎಲ್ಲಕ್ಕೂ" ಎಂಬುದು ಮಾನವನ ಬರಿದಾದ ಕಣ್ಣುಗಳಿಗೆ ಗೋಚರವಾಗುವ ಅಥವಾ ಅಗೋಚರವಾಗಿರುವಂತಹ ಜೀವವುಳ್ಳ ಮತ್ತು ಜೀವವಿಲ್ಲದ ಪ್ರತಿಯೊಂದು ಸಂಗತಿಯು ಸೇರಿದಂತೆ ಸ್ವಭಾವದಲ್ಲಿ ಭೌತಿಕ ಅಥವಾ ಆತ್ಮೀಕವಾಗಿರುವ ಎಲ್ಲವನ್ನೂ ಒಳಗೊಂಡಿರುತ್ತದೆ. ಯೇಸುವು ಎಲ್ಲಕ್ಕೂ ಮೊದಲು ಇದ್ದವನು ಎಂಬ ವಾಕ್ಯಾಂಶದ ಅರ್ಥವು ಆತನು ನಿತ್ಯನಾದವನು ಮತ್ತು ಆತನು ಸಮಸ್ತಕ್ಕೂ ಸರ್ವೋಚ್ಚನು ಎಂದಾಗಿರುತ್ತದೆ. ಸಮಸ್ತವೂ ಆರಂಭಗೊಂಡಾಗ, ಆತನು ಮುಂಚೆಯೇ ಇದ್ದನು (ಯೋಹಾನ 1:1). ಆತನಿಗೆ ಆದಿಯು ಇರಲಿಲ್ಲವಾದ್ದರಿಂದ ಆತನು ಎಲ್ಲಕ್ಕೂ ಮೊದಲು ಇದ್ದವನಾಗಿದ್ದಾನೆ.

## "ಆತನು ಸಮಸ್ತಕ್ಕೂ ಆಧಾರಭೂತನು"

ಯೇಸು ತಾನು ಯಾವದನ್ನು ಉಂಟು ಮಾಡಿದನೋ ಅದನ್ನು ಪೋಷಿಸುತ್ತಾನೆ. ". . . ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದು" (ಇಬ್ರಿಯ 1:3a). ಪೌಲನು ಹೀಗೆ ಹೇಳಿದನು, **ಆತನು ಸಮಸ್ತಕ್ಕೂ ಆಧಾರನು**. ಸಮಸ್ತವೂ "ದೇವರ ಮಾತಿನಿಂದ" ಅಸ್ತಿತ್ವಕ್ಕೆ ಬಂದವು (ಇಬ್ರಿಯ 11:3). ಸಮಸ್ತವೂ ಯಾವ ವಾಕ್ಯದಿಂದ ಉಂಟು ಮಾಡಲ್ಪಟ್ಟಿತೋ ಅದೇ ವಾಕ್ಯವು ಆಕಾಶಗಳನ್ನು ಮತ್ತು ಭೂಮಿಯನ್ನು ಕಡೇ ದಿನದಲ್ಲಿ ಬೆಂಕಿಯಿಂದ ನಾಶವಾಗುವದಕ್ಕೆ ಇಟ್ಟಿದೆ (2 ಪೇತ್ರ 3:5-7). ಲೋಕದ ಆರಂಭ ಮತ್ತು ಮುಂದುವರೆದಿರುವ ಅದರ ಅಸ್ತಿತ್ವವು ಯೇಸುವಿನ ಮೇಲೆ ಆಧಾರವಾಗಿರುತ್ತದೆ. ಆತನ ವಾಕ್ಯದಿಂದ ಎಲ್ಲವೂ ನಿರ್ಮಿತವಾಯಿತು ಮತ್ತು ಇರುವಿಕೆಯನ್ನು ಮುಂದುವರೆಸಿರುತ್ತದೆ; ಮತ್ತು ಆತನ ವಾಕ್ಯದಿಂದ ಸೃಷ್ಟಿಯು ಇಲ್ಲದಂತಾಗಲಿದೆ. ಆತನ ವಾಕ್ಯದ ಶಕ್ತಿಯು ಸಮಸ್ತಕ್ಕೂ ಆಧಾರವಾಗಿರುವದರಿಂದ ಅದು ಅಸ್ತಿತ್ವವನ್ನು ಮುಂದುವರೆಸಿರುತ್ತದೆ.

"ಆಧಾರಭೂತನು" (συνίστημι, *sunistēmi*) ಎಂದು ಅನುವಾದಿಸಲ್ಪಟ್ಟಿರುವ ಪದವು ಯೇಸು ತನ್ನ ಸೃಷ್ಟಿಯನ್ನು ಒಟ್ಟಾಗಿರುವಂತೆ ಮಾಡಿದ್ದು ಮಾತ್ರವಲ್ಲದೆ ಅದನ್ನು ನಿರಂತರವಾಗಿ ಒಂದಾಗಿ ಹಿಡಿದಿಟ್ಟುಕೊಳ್ಳುವಂತೆ ಮಾಡುತ್ತಲಿದ್ದಾನೆ ಎಂಬ ಆಲೋಚನೆಯನ್ನ ವ್ಯಕ್ತಪಡಿಸುತ್ತದೆ. ಆತನ ಮೂಲಕ ಸಮಸ್ತವೂ ಒಂದಾಗಿ ಹಿಡಿದಿಟ್ಟುಕೊಳ್ಳಲ್ಪಟ್ಟ ಕಾರಣದಿಂದ, ವಿಶ್ವವು ಅಸ್ತವ್ಯಸ್ತತೆಗೆ ಒಳಗಾಗಿರುವದಿಲ್ಲ. ಅದು ನಿರಂತರವಾಗಿ ಯೇಸುವಿನ ಶಕ್ತಿಯ ಮೂಲಕ ಸಾಮರಸ್ಯದಿಂದ ನಿಯಂತ್ರಣ ಮಾಡಲ್ಪಡುತ್ತಿದೆ. ಆತನು ಸೃಷ್ಟಿಸಲ್ಪಟ್ಟ ವಿಶ್ವವನ್ನು ಪೋಷಣೆ ಮಾಡುವ ಮತ್ತು

ನಿರ್ವಹಿಸುವಂತಹ ಏಕೀಕರಣದ ಶಕ್ತಿಯಾಗಿದ್ದಾನೆ.

## ಸಭೆಯ ಶಿರಸ್ಸು ಮತ್ತು ಸರ್ವೋಚ್ಚನು (1:18, 19)

**[18]ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು; ಆತನು ಆದಿಸಂಭೂತನು. ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ. [19]ತಂದೆಯಾದ ದೇವರು ಆತನಲ್ಲಿ ತನ್ನ ಸರ್ವಸಂಪೂರ್ಣತೆಯು ವಾಸವಾಗಿರಬೇಕೆಂತಲೂ.**

ಈ ಹಂತದಲ್ಲಿ, ಪೌಲನು ವಿಶ್ವದೊಂದಿಗೆ ಯೇಸುವಿನ ಸಂಬಂಧದ ಕುರಿತ ತನ್ನ ಚರ್ಚೆಯಿಂದ ಸಭೆಯೊಂದಿಗೆ ಆತನಿಗಿರುವ ಸಂಬಂಧದ ಕಡೆಗೆ ತಿರುಗಿಕೊಳ್ಳುತ್ತಾನೆ. ಯೇಸುವು ವಿಶ್ವವನ್ನು ಆಳುವವನು ಮಾತ್ರವೇ ಅಲ್ಲ ಆದರ ಸಭೆಯ ಮೇಲೆ ಸಹ ಆಳ್ವಿಕೆ ಮಾಡುವವನಾಗಿದ್ದಾನೆ.

### "ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು" (1:18)

ದೇವರ ಪ್ರತಿರೂಪನು, ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನು ಮತ್ತು ವಿಶ್ವದ ಸೃಷ್ಟಿಕರ್ತನು ಆಗಿರುವದರ ಜೊತೆಗೆ, ಯೇಸುವು **ಸಭೆಯೆಂಬ ದೇಹಕ್ಕೆ . . . ಶಿರಸ್ಸು ಸಹ ಆಗಿದ್ದಾನೆ.**

ಈ ಸನ್ನಿವೇಶದಲ್ಲಿ ನಾಲ್ಕು ಸಾರಿ, ಪೌಲನು "ಆತನು" ಎಂದು ಹೇಳುತ್ತಾನೆ. ಯೇಸುವು ದೇವರ ಪ್ರತಿರೂಪನು (ವ. 15), ಎಲ್ಲಕ್ಕೂ ಮೊದಲು ಇದ್ದವನು (ವ. 17), ದೇಹಕ್ಕೆ ಶಿರಸ್ಸು (ವ. 18), ಮತ್ತು ಆಧಿಸಂಭೂತನು (ವ. 18). ಇತರ ವಾಕ್ಯಭಾಗಗಳಲ್ಲಿ ಪೌಲನು "ಸಭೆಯೆಂಬ ದೇಹಕ್ಕೆ" ಯೇಸುವು ಶಿರಸ್ಸಾಗಿದ್ದಾನೆಂದು ಕಲಿಸಿದನು (ಎಫೆಸ 1:22, 23; 5:23). ಕೊಲೊಸ್ಸೆಯಲ್ಲಿ ಆತನು "ದೇಹವಾದ ಸಭೆಗೆ" ಎಂದು ಹಿಮ್ಮೊಗ ಕ್ರಮದಲ್ಲಿ ಬರೆಯುತ್ತಾನೆ (ವ. 18; ನೋಡಿರಿ 1:24).

ದೇಹದೊಂದಿಗೆ ಶಿರಸ್ಸಿನ ಸಂಬಂಧವು ಪ್ರಾಮುಖ್ಯವಾದದ್ದಾಗಿದೆ. ದೇಹದ ಚಟುವಟಿಕೆಗಳನ್ನು ಶಿರಸ್ಸು ನಿಯಂತ್ರಣ, ನಿರ್ದೇಶನ, ಮತ್ತು ಆಡಳಿತ ಮಾಡಿದರೆ, ಅದೇ ವೇಳೆಯಲ್ಲಿ ದೇಹವು ಶಿರಸ್ಸಿನ ಅಭಿಲಾಷೆಗಳಿಗೆ ಅಧೀನತೆಯುಳ್ಳದ್ದಾಗಿ ಪ್ರತಿಕ್ರಿಯಿಸುತ್ತದೆ (ಎಫೆಸ 5:24). ಯೇಸುವು ಶಿರಸ್ಸಾಗಿ, ದೇಹದ ಮೂಲಕ ತನ್ನ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುತ್ತಾನೆ ಮತ್ತು ಸಾಧಿಸುತ್ತಾನೆ. ದೇಹವಾದ ಸಭೆಯು, ಯೇಸುವಿನ ಅಭಿಲಾಷೆಗಳನ್ನು ಪೂರೈಸುವದಕ್ಕೆ ಇರುವದಾಗಿದೆ; ಅದರ ಸದಸ್ಯರು ಆತನ ಭೂಲೋಕದ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಕ್ರಿಯೆ ಮಾಡುವದಕ್ಕೆ ಶಿರಸ್ಸಿಗೆ ದೇಹದ ಅಗತ್ಯವಿರುತ್ತದೆ, ಮತ್ತು ತನ್ನ ಕಾರ್ಯಗಳನ್ನು ನಿಯಂತ್ರಿಸುವದಕ್ಕಾಗಿ ದೇಹಕ್ಕೆ ಶಿರಸ್ಸಿನ ಅಗತ್ಯವಿರುತ್ತದೆ. ದೇಹವು ತನ್ನ ಪೋಷಣೆ ಮತ್ತು ಹಿತಾಸಕ್ತಿಗೋಸ್ಕರ ಶಿರಸ್ಸಿನ ಮೇಲೆ ಆಧಾರವಾಗಿರುತ್ತದೆ. ದೇಹದೊಂದಿಗೆ ಯೇಸುವಿಗಿರುವ ಸಂಬಂಧವು ವೈಯಕ್ತಿಕವಾದದ್ದು; ಅದು ಒಂದು ಕಟ್ಟಡದೊಂದಿಗೆ ಯಜಮಾನನಿಗಿರುವ ಸಂಬಂಧಕ್ಕಿಂತಲೂ ವ್ಯತ್ಯಾಸವಾದದ್ದು. ಶಿರಸ್ಸು ಮತ್ತು ದೇಹದ ನಡುವೆ ಒಂದು ಸಮರ್ಪಕವಾದ ಪರಸ್ಪರ ಸಂಬಂಧವಿರುವದಾದರೆ ಮಾತ್ರವೇ ಒಬ್ಬ ವ್ಯಕ್ತಿಯಂತೆ, ಸಭೆಯು ಕ್ರಿಯೆ ಮಾಡಬಲ್ಲದ್ದಾಗಿದೆ.

ಯೇಸುವಿನ ಶಿರಸ್ಸತ್ವದ ಬಗ್ಗೆ A. T. Robertson ನೀಡಿದ ವ್ಯಾಖ್ಯೆಯು

ಪರಿಗಣಿಸಲ್ಪಡುವದಕ್ಕೆ ಯೋಗ್ಯವಾದದ್ದಾಗಿದೆ:

> ನಿಖರವಾಗಿ ಶಿರಸ್ಸು ದೇಹವನ್ನು ಆಳ್ವಿಕೆ ಮಾಡುವ ರೀತಿಯಲ್ಲಿಯೇ, ಆತನ ಸಭೆಯ ಮೇಲೆ ಆತನಿಗಿರುವ ಯಜಮಾನಿಕೆ ಮತ್ತು ದೊರೆತನ ಇರುತ್ತವೆ. ದೇಹ ಮತ್ತು ಶಿರಸ್ಸಿನ ನಡುವೆ ಒಂದು ಜೀವಧಾರಕ ಸಂಬಂಧವಿರುತ್ತದೆ. ಹೇಗೂ, ದೇಹವು ಶಿರಸ್ಸಿಗೆ ಆಜ್ಞೆಗಳನ್ನು ಮಾಡುವದಿಲ್ಲ. ಅದು ನೋವು ಕೊಡಬಹುದು, ಮತ್ತು ಅನೇಕ ಸಾರಿ ಕೊಡುತ್ತದಷ್ಟೆ, ಆದರೆ ಅದು ಶಿರಸ್ಸಿನ ನಿಯಂತ್ರಣದಲ್ಲಿರುತ್ತದೆ ಮತ್ತು ಶಿರಸ್ಸಿಗೆ ಅಧೀನವಾಗಿರುತ್ತದೆ . . . ಆತನ ಚಿತ್ತವನ್ನು ಮಾಡುವದಕ್ಕಾಗಿ ಮತ್ತು ಆತನ ಅಪ್ಪಣೆಗಳನ್ನು ನೆರವೇರಿಸುವದಕ್ಕಾಗಿ ದೇಹಕ್ಕೆ ಶಿರಸ್ಸಿನ ಅಗತ್ಯವಿರುತ್ತದೆ ಮತ್ತು ಶಿರಸ್ಸಿಗೆ ದೇಹದ ಅಗತ್ಯವಿರುತ್ತದೆ.[16]

ದೇಹ ಮತ್ತು ಸಭೆ ಒಂದೇ ಆಗಿವೆ. Robertson ವ್ಯಾಖ್ಯೆಯು ಸರಿಯಾಗಿಯೇ ಇರುತ್ತದೆ, "ಇಲ್ಲಿ ಪೌಲನು ಎರಡು ಪದಗಳನ್ನು ಬಳಸುತ್ತಾನೆ, 'ದೇಹ' [ಮತ್ತು] 'ಸಭೆ,' ಒಂದು ಮತ್ತೊಂದಕ್ಕೆ ವಿವರಣಾತ್ಮಕ ಏಕಾನ್ವಯದಲ್ಲಿರುತ್ತದೆ. . . . ಹೀಗೆ ಸಭೆಯು ಕ್ರಿಸ್ತನ ದೇಹ, ಕ್ರಿಸ್ತನ ಸಭೆ ಆಗಿರುತ್ತದೆ."[17]

ಪೌಲನು "ದೇಹ" ಎಂದು ಬರೆದನೇ ಹೊರತು "ದೇಹಗಳು" ಎಂದಲ್ಲ. "ದೇಹ" ಎಂದು ಬರೆಯುವ ಮೂಲಕ, ಪೌಲನ ಸೂಚ್ಯಾರ್ಥವು ಒಂದು ಮತ್ತು ಒಂದೇ ದೇಹವಾದ, ಒಂದೇ ಸಭೆ ಎಂದಾಗಿರುತ್ತದೆ. ದೇಹದ ಸಾದೃಶ್ಯವನ್ನು ಬಳಸಿ ಸಭೆಯನ್ನು ಸೂಚಿಸುವದರಲ್ಲಿ, ಪೌಲನು ಯಾವಾಗಲೂ ಏಕವಚನದ ನಾಮಪದವನ್ನು ಬಳಸಿದನು, ಎಂದಿಗೂ ಬಹುವಚನದ ನಾಮಪದವನ್ನು ಬಳಸಲಿಲ್ಲ (1 ಕೊರಿಂಥ 12:24, 25, 27; ಎಫೆಸ 1:23; 4:12, 16; 5:23, 30; ಕೊಲೊಸ್ಸೆ 1:24; 2:19). ಹಲವಾರು ಸಾರಿ ಆತನು ದೇಹವನ್ನು ಒಂದೇ ಎಂಬದಾಗಿ ಸೂಚಿಸಿ ಹೇಳಿರುತ್ತಾನೆ (ರೋಮಾ 12:5; 1 ಕೊರಿಂಥ 10:17; 12:12, 13, 20; ಎಫೆಸ 2:16; 4:4; ಕೊಲೊಸ್ಸೆ 3:15). "ಕ್ರಿಸ್ತನ ದೇಹ" (1 ಕೊರಿಂಥ 12:27) ಅಥವಾ "ಆತನ ದೇಹ" (ಎಫೆಸ 1:23; 5:30; ಕೊಲೊಸ್ಸೆ 1:24) ಎಂದು ಬರೆಯುವ ಮೂಲಕ, ಪೌಲನು ಕ್ರಿಸ್ತನ ಒಂದೇ ದೇಹವು ಕ್ರಿಸ್ತನ ಒಂದೇ ಸಭೆಯಾಗಿರುತ್ತದೆಂದು ಕಲಿಸಿದನು. "ಸಭೆಗಳು" ಎಂಬ ಬಹುವಚನದ ರೂಪವು – "ಕ್ರಿಸ್ತನ ಸಭೆಗಳೆಲ್ಲಾ ನಿಮ್ಮನ್ನು ವಂದಿಸುತ್ತವೆ" ಎಂದಿರುವ ಪ್ರಕಾರ (ರೋಮಾ 16:16) – ಸ್ಥಳೀಯ ಸಭೆಗಳನ್ನು ಸೂಚಿಸಿ ಹೇಳಲಾಗಿರುತ್ತದೆಯೇ ಹೊರತು ಜಾಗತಿಕ ಸಭೆಯನ್ನು ಸೂಚಿಸಿ ಹೇಳಲ್ಪಟ್ಟಿಲ್ಲ.

ದೇಹವು ಸಭೆಯಾಗಿರುವದರ ಭಾವನೆಯು ಪ್ರಾಮುಖ್ಯವಾದ ಸೂಚ್ಯಾರ್ಥಗಳನ್ನು ಹೊಂದಿದೆ.

> ಬಹುಶಃ ಸಭೆಯು ಕ್ರಿಸ್ತನ ದೇಹವೆಂಬ ಈ ಭಾವನೆಯ ಮೂಲಕವೇ ಪೌಲನು ಹೇಗೆ ವಿಶ್ವಾಸಿಗಳ ಕುರಿತು ಅವರು "ಕ್ರಿಸ್ತನಲ್ಲಿ" ಇರುವರೆಂದು ಮತ್ತು ಅದೇ ವೇಳೆಯಲ್ಲಿ ಕ್ರಿಸ್ತನು ಅವರಲ್ಲಿದ್ದಾನೆಂದು ಹೇಳುತ್ತಾನೆಂಬುದನ್ನು ನಾವು ಉತ್ತಮವಾಗಿ ಅರ್ಥಮಾಡಿಕೊಳ್ಳಬಹುದಾಗಿದೆ. ಯಾಕೆಂದರೆ ಅವರು "ಕ್ರಿಸ್ತನಲ್ಲಿ" ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾಗಿ, ಆತನ ದೇಹದ ಅಂಗಗಳಂತೆ "ಕ್ರಿಸ್ತನಲ್ಲಿ" ಇದ್ದಾರೆ (ಗಲಾತ್ಯ 3:27); ಆತನ ಜೀವವೇ ಅವರನ್ನು ಸಜೀವಗೊಳಿಸುತ್ತಾದ್ದರಿಂದ ಆತನು ಅವರಲ್ಲಿ ಇದ್ದಾನೆ. ನಾವು ಯೋಹಾನ 15:1ರಿಂದ ಮುಂದಿನ ವಚನಗಳಲ್ಲಿರುವ

ಇನ್ನೊಂದು ಜೈವಿಕ ಸಾದೃಶ್ಯಕ್ಕೆ ಹೋಲಿಕೆಯನ್ನು ಮಾಡಬಹುದು; ಅಲ್ಲಿ ಕೊಂಬೆಗಳು ದ್ರಾಕ್ಷಾರಸದಲ್ಲಿರುತ್ತವೆ ಮತ್ತು ಅದೇ ವೇಳೆಯಲ್ಲಿ ದ್ರಾಕ್ಷಾ ಬಳ್ಳಿಯು ಕೊಂಬೆಗಳಲ್ಲಿರುತ್ತದೆ.[18]

"ದೇಹ" (σῶμα, *sōma*) ಎಂಬುದು, "ವಿದ್ಯಾರ್ಥಿಗಳ ಸಂಘ" ಮತ್ತು "ಶಾಸಕಾಂಗ" ಎಂಬ ಪದಗುಚ್ಛಗಳು ಸದಸ್ಯರೊಳಗಿನ ಒಂದು ಕಾರ್ಯಮಾಡುವ ಘಟಕವೆಂದು ಸೂಚಿಸುವ ರೀತಿಯಲ್ಲಿಯೇ, ಜನರು ಒಂದು ಗುಂಪು ಅಥವಾ ಘಟಕ ಎಂಬ ಅರ್ಥದಲ್ಲಿ ಬಳಸಲ್ಪಟ್ಟಿದೆ. ಪೌಲನು ಸಭೆಯನ್ನು ಮಾನವ ದೇಹಕ್ಕೆ ಹೋಲಿಕೆ ಮಾಡಿದನು (ರೋಮಾ 12:4, 5; 1 ಕೊರಿಂಥ 12:12, 13), ಪ್ರತಿಯೊಬ್ಬ ಸದಸ್ಯನು ಸಾಮರ್ಥ್ಯಗಳನ್ನು ಹೊಂದಿರುವವನಾಗಿ ಇಡೀ ದೇಹವು ಕಾರ್ಯಮಾಡುವಂತೆ ಸಹಾಯ ಮಾಡುವಂತಹ ಒಂದು ಸಂಘಟಿತವಾದ ಘಟಕದಂತೆ ಆಗಿರುತ್ತದೆ.

ಹೊಸ ಒಡಂಬಡಿಕೆಯಲ್ಲಿ "ಸಭೆ" (ἐκκλησία, *ekklēsia*) ಎಂಬ ಪದವು ಜನರು ಒಂದು ಗುಂಪು ಎಂದು ಸೂಚಿಸುವದಾಗಿದೆ, ಆದರೆ ಎಂದಿಗೂ ಒಂದು ಕಟ್ಟಡವನ್ನು ಸೂಚಿಸುವದಿಲ್ಲ. ಸಭೆಯ ಶಬ್ದಕೋಶದಲ್ಲಿ ಪರಿಚಯಿಸಲ್ಪಡುವ ಮುನ್ನ, *ekklēsia* ಎಂಬ ಪದವು ಗ್ರೀಕ್ ಸಮುದಾಯವೊಂದರಲ್ಲಿ ನಿಯಮಿತವಾಗಿ ಕರೆಯಲಾಗುತ್ತಿದ್ದ ರಾಜಕೀಯ ಸಭೆ – ನಗರ ಆಡಳಿತ ಮಂಡಳಿಯನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತಿತ್ತು. ಹೊಸ ಒಡಂಬಡಿಕೆಯಲ್ಲಿ ಯೇಸುವಿನ ಹಿಂಬಾಲಕರ ಇಡೀ ಗುಂಪನ್ನು (ಮತ್ತಾಯ 16:18), ಕ್ರಿಸ್ತನ ಸ್ಥಳಿಯ ಸಭಿಕರ ಸಮೂಹಗಳನ್ನು (ರೋಮಾ 16:16), ಒಂದು ಪ್ರಾಂತ್ಯದ ಸಭೆಗಳನ್ನು (1 ಕೊರಿಂಥ 16:1) ಕೂಡಿ ಬಂದಿರುವ ಕ್ರೈಸ್ತರನ್ನು (1 ಕೊರಿಂಥ 14:23), ಕೂಡಿ ಬರದ ಸದಸ್ಯರನ್ನು (ಅಪೊಸ್ತಲರ ಕೃತ್ಯಗಳು 8:1), ಮತ್ತು ಧಾರ್ಮಿಕವಲ್ಲದ ಕೂಟವನ್ನು ಸೂಚಿಸಿ ಬಳಸಲಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 19:32, 39, 41). 1:18ರಲ್ಲಿ ಮೊದಲ ಬಾರಿಗೆ ಕೊಲೊಸ್ಸೆಯವರಿಗೆ ಪತ್ರಿಕೆಯಲ್ಲಿ "ಸಭೆ" ಎಂಬ ಪದವು ಕಾಣಿಸಿಕೊಳ್ಳುವದನ್ನು ನೋಡುತ್ತೇವೆ. ಇಲ್ಲಿ ಅದರ ಅರ್ಥವು, 24ನೇ ವಚನದಲ್ಲಿರುವ ಪ್ರಕಾರವೇ, ಒಂದು ನಿರ್ದಿಷ್ಟವಾದ ಸಭೆಯಲ್ಲದೆ, ಯೇಸುವಿನ ಎಲ್ಲಾ ಹಿಂಬಾಲಕರು ಎಂದಾಗಿರುತ್ತದೆ. ಅನಂತರದಲ್ಲಿ, ಪೌಲನು ಸ್ಥಳೀಯ ಸಭೆಗಳನ್ನುದ್ದೇಶಿಸಿ ಈ ಪದವನ್ನು ಬಳಸಿದನು (4:15, 16).

ಸಭೆಯೊಂದಿಗೆ ಯೇಸುವಿಗಿರುವ ಸಂಬಂಧವು ಅದರ ಪ್ರಾಮುಖ್ಯತೆಯನ್ನು ಪ್ರಕಟಪಡಿಸುತ್ತದೆ. ಆತನು ಅದರ ನಿರ್ಮಾಣಿಕನು ಮತ್ತು ಒಡೆಯನು (ಮತ್ತಾಯ 16:18), ಕೊಂಡುಕೊಂಡಿರುವವನು (ಅಪೊಸ್ತಲರ ಕೃತ್ಯಗಳು 20:28), ಅಸ್ತಿವಾರ (1 ಕೊರಿಂಥ 3:11), ಶಿರಸ್ಸು (ಎಫೆಸ 1:22, 23), ಮತ್ತು ರಕ್ಷಕನು ಆಗಿದ್ದಾನೆ (ಎಫೆಸ 5:23). ದೇವರು ಸಭೆಯ ಮೂಲಕ ತನ್ನ ಜ್ಞಾನವನ್ನು ಪ್ರಕಟಗೊಳಿಸಿದ್ದಾನೆ (ಎಫೆಸ 3:10). ಯೇಸು ಅದನ್ನು ಪರಿಶುದ್ಧವೂ ನಿರ್ದೋಷವೂ ಆಗಿರುವದನ್ನಾಗಿ ಮಾಡಿ ತನ್ನ ಮುಂದೆ ನಿಲ್ಲಿಸಿಕೊಳ್ಳುವನು (ಎಫೆಸ 5:25-27).

ಸಭೆಯು ಯೇಸುವಿಗೆ ಸೇರಿದ್ದಾಗಿದೆ ಯಾಕೆಂದರೆ ಆತನು ಅದನ್ನು ತನ್ನ ರಕ್ತದಿಂದ ಕೊಂಡುಕೊಂಡನು. ಈ ಕಾರಣದಿಂದ ಅದು "ಕ್ರಿಸ್ತನ ಸಭೆಗಳು" ಎಂದು (ರೋಮಾ 16:16) ಅಥವಾ ಯೇಸುವು ದೇವರಾಗಿರುವ ಪ್ರಕಾರವೇ (ಯೋಹಾನ 1:1, 2), "ದೇವರ ಸಭೆ" ಎಂದು

ಕರೆಯಲ್ಪಡಬಹುದಾಗಿದೆ (1 ಕೊರಿಂಥ 1:2). ಸಭಿಕರ ಒಂದು ಸಮೂಹವನ್ನು ಇಂಥಿಂತ ನಗರದ ಸಭೆಯೆಂದು ಗುರುತಿಸಲ್ಪಡಬಹುದಾಗಿದೆ, ಉದಾಹರಣೆಗೆ "ಯೆರೂಸಲೇಮಿನಲ್ಲಿದ್ದ ಸಭೆ" (ಅಪೊಸ್ತಲರ ಕೃತ್ಯಗಳು 8:1). ಅಲ್ಲದೆ "ಅನ್ಯಜನಗಳ ಸಭೆ" (ರೋಮಾ 16:4) ಎಂಬ ರೀತಿಯಲ್ಲಿ ಸಮಾಜದ ಒಂದು ವರ್ಗದವರಿಂದ ಕೂಡಿ ಸಭೆಗಳನ್ನು ಕರೆಯುವದಕ್ಕೆ, ಮತ್ತು "ಗಲಾತ್ಯದ ಸಭೆಗಳು" (1 ಕೊರಿಂಥ 16:1) ಎಂಬಂತೆ ಒಂದು ಪ್ರಾಂತ್ಯದಲ್ಲಿನ ಸಭೆಗಳನ್ನು ಕರೆಯುವದಕ್ಕೆ ಬೈಬಲಾಧಾರಿತ ಅಧಿಕಾರವನ್ನು ಕಾಣುತ್ತೇವೆ. ಬೈಬಲಿನಲ್ಲಿರುವ ಇತರ ಪದಗುಚ್ಛಗಳಲ್ಲಿ ಸೇರಿರುವವುಗಳೆಂದರೆ "ದೇವಜನರ ಸಭೆಗಳು" (1 ಕೊರಿಂಥ 14:33), "ಜೀವಸ್ವರೂಪನಾದ ದೇವರ ಸಭೆಗಳು" (1 ತಿಮೊಥೆ 3:15), ಮತ್ತು "ಚೊಚ್ಚಲ ಮಕ್ಕಳ ಸಭೆ" (ಇಬ್ರಿಯ 12:23). ಅಪೊಸ್ತಲರ ಕೃತ್ಯಗಳು 5:11ನೇ ವಚನವು ಕೇವಲ ". . . ಸಭೆ" ಎಂದಷ್ಟೆ ಹೇಳುತ್ತದೆ.

ಸಭೆಯು "ಪರಲೋಕರಾಜ್ಯ" (ಮತ್ತಾಯ 16:18, 19) ಆಗಿದೆ, "ಹಿಂಡು" (ಅಪೊಸ್ತಲರ ಕೃತ್ಯಗಳು 20:28), "ಆತನ ದೇಹ" (ಎಫೆಸ 1:22, 23), ಮತ್ತು "ದೇವರ ಮನೆ [ಅಥವಾ ಕುಟುಂಬ]" ಆಗಿರುತ್ತದೆ (1 ತಿಮೊಥೆ 3:15). ಸಭೆಯೆಂಬ ಕ್ರಿಸ್ತನ ದೇಹದ ಸದಸ್ಯರು, ರಾಜ್ಯದ ಸಂಸ್ಥಾನದವರು ಆಗಿದ್ದಾರೆ (ಎಫೆಸ 2:19), ಹಿಂಡಿನ ಕುರಿಗಳು (ಯೋಹಾನ 10:16), ಮತ್ತು ದೇವರ ಮಕ್ಕಳು, ಆತನ ಕುಟುಂಬದ ಸದಸ್ಯರು (ಗಲಾತ್ಯ 3:26, 27) ಆಗಿದ್ದಾರೆ. ಯೇಸುವಿನ ಮರಣದಿಂದ ಶುದ್ಧ ಮಾಡಲ್ಪಟ್ಟವರು ಒಟ್ಟಾಗಿ ಸಭೆಯಾಗಿರುತ್ತದೆ. ದೀಕ್ಷಾಸ್ನಾನವು ಜನರನ್ನು ರಾಜ್ಯದೊಳಗೆ ಸೇರಿಸುತ್ತದೆ (ಯೋಹಾನ 3:5), ಅದು ಒಂದೇ ದೇಹವಾದ (1 ಕೊರಿಂಥ 12:13), ಸಭೆಯಾಗಿರುತ್ತದೆ (1 ತಿಮೊಥೆ 3:15). ಜೀವಬಾಧ್ಯರ ಪಟ್ಟಿಯಲ್ಲಿ ಯಾರ ಹೆಸರುಗಳು ಬರೆಯಲ್ಪಟ್ಟಿರುತ್ತವೋ ಅವರು ಪರಲೋಕಕ್ಕೆ ಸೇರ್ಪಡೆಗೊಳ್ಳುತ್ತಾರೆ (ಇಬ್ರಿಯ 12:23; ಪ್ರಕಟನೆ 21:27). ಅವರು ಆ "ಪರಿಶುದ್ಧ ಪಟ್ಟಣ"ವನ್ನು ಪ್ರವೇಶಿಸುವರು (ನೋಡಿರಿ ಪ್ರಕಟನೆ 21:2, 10; 22:19).

ಸಭೆಯ ಪರಲೋಕದ ಗತ್ಯತೆಯು ಹಲವಾರು ಬೈಬಲ್ ಹೇಳಿಕೆಗಳಿಂದ ನಿರೂಪಿಸಲ್ಪಟ್ಟಿದೆ. ಯೇಸುವಿನ ರಾಜ್ಯದ ಮಕ್ಕಳು ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು (ಮತ್ತಾಯ 13:37-43). ಯೇಸು ತನ್ನ ಹಿಂಡಿನ ಕುರಿಗಳಿಗೆ ನಿತ್ಯಜೀವವನ್ನು ಕೊಡುವನು (ಯೋಹಾನ 10:27, 28). ಆತನು ದೇಹದ ರಕ್ಷಕನಾಗಿದ್ದಾನೆ (ಎಫೆಸ 5:23). ದೇವರ ಮಕ್ಕಳಾಗಿ, ನಾವು ಬಾಧ್ಯಸ್ಥರಾಗಿದ್ದೇವೆ (ರೋಮಾ 8:16, 17; ಗಲಾತ್ಯ 4:7). ನಮ್ಮ ಬಾಧ್ಯತೆಯು ಪರಲೋಕದಲ್ಲಿ ಕಾಯ್ದಿರಿಸಲ್ಪಟ್ಟಿದೆ (1 ಪೇತ್ರ 1:3, 4).

ಕ್ರಿಸ್ತನ ಸಭೆಯಲ್ಲಿ ಸ್ವೀಕಾರರ್ಹ ಸದಸ್ಯರು ಯಾರೆಂದರೆ ಆತನಿಗೆ ಅಧೀನರಾಗುವವರೇ (ಎಫೆಸ 5:24). ಆತನ ಮೇಲಿರುವ ಪ್ರೀತಿ ಮತ್ತು ಭಯದ ಕಾರಣದಿಂದ ನಂಬಿಗಸ್ತರಾದ ಕ್ರೈಸ್ತರು ಆತನಿಗೆ ಪ್ರತಿಕ್ರಿಯೆ ತೋರಿಸುತ್ತಾರೆ (ಯೋಹಾನ 14:15, 21, 23; ಫಿಲಿಪ್ಪಿ 2:12; 1 ಪೇತ್ರ 1:17). ಯೇಸು ಹೀಗೆ ಹೇಳುತ್ತಾನೆ, "ಯಾವನಾದರೂ ನನ್ನ ಸೇವೆಯನ್ನು ಮಾಡುವವನಾದರೆ ನನ್ನ ಹಿಂದೆ ಬರಲಿ; ಮತ್ತು ಎಲ್ಲಿ ನಾನು ಇರುತ್ತೇನೋ ಅಲ್ಲಿ ನನ್ನ ಸೇವಕನು ಸಹ ಇರುವನು. ಯಾವನಾದರೂ ನನ್ನ ಸೇವೆಯನ್ನು ಮಾಡುವವಣಾದರೆ ತಂದೆಯು ಅವನಿಗೆ ಬಹುಮಾನ ಮಾಡುವನು" (ಯೋಹಾನ 12:26).

## “ಆತನು ಆದಿಸಂಭೂತನು . . . ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ” (1:18)

ಪೌಲನು **ಆತನು ಆದಿಸಂಭೂತನು . . . ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ** ಎಂದು ಬರೆಯುತ್ತಾನೆ. 15ನೇ ವಚನದಲ್ಲಿ ಇರುವಂತೆಯೇ, ಪೌಲನು ಯೇಸುವನ್ನು “ಮೊದಲು ಎದ್ದು ಬಂದವನು” ಎಂದು ಕರೆಯುತ್ತಾನೆ (“ಜ್ಯೇಷ್ಠಪುತ್ರ” ಮತ್ತು “ಆದಿ” ಎಂಬುದರ ಮೇಲಿನ ಹೆಚ್ಚಿನ ಮಾಹಿತಿಗಾಗಿ 1:15ರ ಮೇಲಿನ ಚರ್ಚೆಯನ್ನು ನೋಡಿರಿ). ಇದಕ್ಕು ಮುಂಚೆ, ಆತನು “ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನು” ಎಂದು ಹೇಳಿದ್ದನು; ಈ ಸಾರಿ ಆತನು “ಸತ್ತವರೊಳಗಿಂದ ಮೊದಲು ಎದ್ದು ಬಂದವನು” ಎಂದು ಹೇಳುತ್ತಾನೆ (ನೋಡಿರಿ ಪ್ರಕಟನೆ 1:5).

ಯೇಸುವು ಸತ್ತವರೊಳಗಿಂದ ಎಬ್ಬಿಸಲ್ಪಟ್ಟವರಲ್ಲಿ ಮೊದಲಿಗನಾಗಿರಲಿಲ್ಲ. ಎಲೀಯನು ಚಾರೆಪ್ತದಲ್ಲಿನ ವಿಧವೆಯ ಮಗನನ್ನು ಸತ್ತವರೊಳಗಿಂದ ಎಬ್ಬಿಸಿದನು (1 ಅರಸು 17:21, 22). ಎಲೀಷನು ಶೂನೇಮಿನ ಸ್ತ್ರೀಯ ಮಗನನ್ನು ಪುನಃ ಬದುಕಿಸಿದನು (2 ಅರಸು 4:34-36). ಎಲೀಷನ ಸಮಾಧಿಯೊಳಗೆ ಎಸೆಯಲ್ಪಟ್ಟ ಮನುಷ್ಯನೊಬ್ಬನು ಪುನಃ ಜೀವವನ್ನು ಪಡೆದನು (2 ಅರಸು 13:20, 21). ಯೇಸು ಯಾಯೀರನ ಮಗಳನ್ನು ಸತ್ತವರೊಳಗಿಂದ ಎಬ್ಬಿಸಿದನು (ಮಾರ್ಕ 5:22, 35-42), ನಾಯಿನೆಂಬ ಊರಿನಲ್ಲಿದ್ದ ವಿಧವೆಯ ಮಗನನ್ನು (ಲೂಕ 7:11-15), ಮತ್ತು ಲಾಜರನನ್ನು ಸತ್ತವರೊಳಗಿಂದ ಎಬ್ಬಿಸಿದನು (ಯೋಹಾನ 11:43, 44). ಯೇಸುವು ಸತ್ತವರೊಳಗಿಂದ ಎಬ್ಬಿಸಲ್ಪಡುವದಕ್ಕೆ ಮುಂಚೆ ಇವರೆಲ್ಲರು ಪುನರುತ್ಥಾನಗೊಳಿಸಲ್ಪಟ್ಟಿದ್ದರು. ಯೇಸುವು ಎಬ್ಬಿಸಲ್ಪಟ್ಟವರಲ್ಲಿ ಮೊದಲಿಗನಲ್ಲದಿದ್ದಾಗ್ಯೂ, ಆತನು ಅತ್ಯಂಥ ಪ್ರಮುಖನಾಗಿದ್ದಾನೆ. ಈ ಅರ್ಥದಲ್ಲಿ, ಸತ್ತವರೊಳಗಿಂದ ಎಬ್ಬಿಸಲ್ಪಟ್ಟಿದ್ದವರೆಲ್ಲರೊಳಗೆ “ಮೊದಲು ಎದ್ದು ಬಂದವನು ಆತನೇ” ಆಗಿದ್ದನು. ಆತನು ಇನ್ನು ಸಾಯತಕ್ಕವನಾಗಿರದೆ ಮೊದಲು ಎಬ್ಬಿಸಲ್ಪಟ್ಟವನಾಗಿ ಪುನರುತ್ಥಾನಗೊಂಡವನು (1 ಕೊರಿಂಥ 15:22, 23). ಆತನು ತನ್ನ ಪುನರುತ್ಥಾನದ ಮುಖಾಂತರ, ಇತತರಿಗೆ ಹಿಂಬಾಲಿಸುವಂತೆ ದಾರಿಯನ್ನು ತೆರೆದಿರುತ್ತಾನೆ (ರೋಮಾ 6:8).

ಯೇಸು ಕಾಲದ ಕ್ರಮಾನುಸಾರದಲ್ಲಿ ಮೊದಲು ಎದ್ದವನು ಎಂಬ ಅರ್ಥದಲ್ಲಿ ಹೇಳುವ ಬದಲಾಗಿ, ಪೌಲನು ಯೇಸುವಿನ ಸರ್ವಶ್ರೇಷ್ಠತೆಯ ಬಗ್ಗೆ ಒತ್ತಿ ಹೇಳುವವನಾಗಿದ್ದನು. “ಸತ್ತವರೊಳಗಿಂದ” ಎಂಬುದರ ಸೂಚ್ಯಾರ್ಥವು ಆತನು ಮರಣದಿಂದ ತನ್ನ ಸರ್ವಶ್ರೇಷ್ಠತೆಯ ಸ್ಥಾನಕ್ಕೆ ಏರಿದನು ಎಂಬದೆ. ಯೇಸುವು ದಾವೀದನ ಸಿಂಹಾಸನದ ಮೇಲೆ ಕುಳಿತುಕೊಳ್ಳುವದಕ್ಕಾಗಿ ಮರಣದಿಂದ ಎಬ್ಬಿಸಲ್ಪಟ್ಟನು (ಅಪೊಸ್ತಲರ ಕೃತ್ಯಗಳು 2:30, 31), ಆಗ ಆತನು ಸಮಸ್ತದ ಮೇಲೆ ಆಳ್ವಿಕೆ ಮಾಡುವದಕ್ಕೆ ಆರೋಹನಗೊಂಡನು (ಎಫೆಸ 1:20-23; 1 ಪೇತ್ರ 3:22).

ಯೇಸುವಿಗೆ ಸಭೆಯ ಮೇಲಿರುವ ಯಜಮಾನಿಕೆಯು ವಿಶ್ವದುದ್ದಕ್ಕೂ ಸಮಸ್ತದ ಮೇಲೆ ಆತನಿಗಿರುವ ಸರ್ವಶ್ರೇಷ್ಠತೆಯ ಮೇಲೆ ಆಧಾರವಾಗಿರುತ್ತದೆ. ಆತನು ವಿಶ್ವದ ಮೇಲೆ ಒಡೆಯನು ಮಾತ್ರವಲ್ಲದೆ, ಸಭೆಗೆ ಶಿರಸ್ಸು ಸಹ ಆಗಿದ್ದಾನೆ. ಈಗ ಆತನು ವಿಶ್ವದಲ್ಲಿರುವ ಪ್ರತಿಯೊಂದು ಪ್ರತಿಷ್ಠಾಪನೆಯ ಮೇಲೆ ಆಳ್ವಿಕೆ ಮಾಡುತ್ತಾನೆ.

### “ಎಲ್ಲಾದರಲ್ಲಿ ಪ್ರಮುಖನಾಗುವಂತೆ” (1:18)

ಪೌಲನು ಮುಂದುವರೆದು, **ಎಲ್ಲಾದರಲ್ಲಿ ಪ್ರಮುಖನಾಗುವಂತೆ** ಎಂದು ಹೇಳುತ್ತಾನೆ. “ಎಲ್ಲಾದರಲ್ಲಿ ಪ್ರಮುಖನಾಗುವಂತೆ” (πρωτεύω, *prōteuō*) ಎಂಬುದು ಹೊಸ ಒಡಂಬಡಿಕೆಯಲ್ಲಿ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಹೇಗೂ, ಅದು ಗುಣವಾಚಕದ ರೂಪದಲ್ಲಿ, πρῶτος (*prōtos*) ಅನೇಕ ಸಾರಿ ಕಾಣಿಸಿಕೊಂಡಿರುತ್ತದೆ. ಈ ಪದದ ಅರ್ಥವು “ಮೊದಲಿಗ” ಎಂದಾಗಿರುತ್ತದೆ ಮತ್ತು ಅದು ಆಂಗ್ಲದ “proton” ಎಂಬ ಪದದ ಮೂಲವಾಗಿರುತ್ತದೆ.

ಯೇಸುವಿನ ಪ್ರಾಧಾನ್ಯತೆಯು ಸ್ವಭಾವತಃ ಆಗಿರುವದು ಮಾತ್ರವೇ ಅಲ್ಲಿ, ಆದರೆ ಅದು ಆತನ ಪುನರುತ್ಥಾನದ ಮೂಲಕ ಸಹ ಬಂದದ್ದಾಗಿರುತ್ತದೆ. ಯೇಸುವು ಸತ್ತವರೊಳಗಿಂದ ಎದ್ದು ಬಂದವರಲ್ಲಿ ಮೊದಲಿಗನು ಮತ್ತು ಪ್ರಾಥಮಿಕನು ಆಗಿರುವದರಿಂದ, ಆತನು ಸತ್ತವರೊಳಗಿಂದ ಎಬ್ಬಿಸಲ್ಪಡಲಿರುವರೆಲ್ಲರ ಮೇಲೆ ಸಹ ಒಂದು ಸರ್ವಶ್ರೇಷ್ಠವಾದ ಸ್ಥಾನವನ್ನು ಹೊಂದಿದ್ದಾನೆ. ಮರಣದ ಮೇಲೆ ಜಯ ಹೊಂದುವ ಮೂಲಕ, ಆತನು ಜೀವದ ಮೂಲನಾದನು. ಎಲ್ಲಾ ವೈರಿಗಳನ್ನು ಪರಾಜಯಗೊಳಿಸಿದ ಜಯಶಾಲಿಯಾಗಿ (ಇಬ್ರಿಯ 2:14), ಆತನು ಎಲ್ಲರ ಮೇಲೆ ಸರ್ವಶ್ರೇಷ್ಠನಾಗಿದ್ದಾನೆ ಮತ್ತು ವೈರಿಯ ಪಾಳೆಯದಲ್ಲಿ ಆತನಿಗೆ ಯಾವ ವಿರೋಧಿಯೂ ಇರುವದಿಲ್ಲ. ಆತನು ತನಗೋಸ್ಕರ ಜೀವಿಸುವ ಎಲ್ಲರಿಗೂ ಮರಣದ ಮೇಲೆ ಜಯವನ್ನು ಒದಗಿಸಬಲ್ಲನು (1 ಕೊರಿಂಥ 15:55-57).

ಯೇಸುವು ಪರಲೋಕಕ್ಕೆ ಆರೋಹಣಗೊಂಡಾಗ, ಆತನು ಭೂಲೋಕದ ಮತ್ತು ಪರಲೋಕದ ಪ್ರತಿಯೊಂದು ಅಧಿಕಾರದ ಮೇಲೆ ಇರಿಸಲ್ಪಟ್ಟನು.[19] ಆತನು ಅಧಿಕಾರ ಹೊಂದಿರದ ಏಕೈಕ ವ್ಯಕ್ತಿಯೆಂದರೆ ತಂದೆಯು, ಆತನೇ ಸಮಸ್ತವನ್ನು ಆತನಿಗೆ ಅಧೀನಪಡಿಸಿದನು (1 ಕೊರಿಂಥ 15:27). ಆತನು ಸರ್ವರ ಮೇಲೆ ಆಳ್ವಿಕೆ ಮಾಡುತ್ತಾನಾದರೂ, ಇನ್ನು ಕೆಲವು ವೈರಿಗಳು ಆತನಿಂದ ಅಧೀನ ಪಡಿಸಿಕೊಳ್ಳಲ್ಪಟ್ಟಿರುವದಿಲ್ಲ (1 ಕೊರಿಂಥ 15:25, 26).

### “ತಂದೆಗೆ ಇಷ್ಟವಾಗಿತ್ತು” (1:19)

ಪೌಲನು ಯೇಸುವಿನಲ್ಲಿ ಸರ್ವಸಂಪೂರ್ಣತೆ ವಾಸವಾಗಿರುವ ಬಗ್ಗೆ ಮಾತಾಡಿದನು ಯಾಕೆಂದರೆ ಅದು **ತಂದೆಗೆ ಇಷ್ಟವಾಗಿತ್ತು**. “ಆದ್ದರಿಂದ” (ὅτι, *hoti*) ಎಂಬುದು “ಯಾಕೆಂದರೆ” ಎಂದು ಸಹ ಅನುವಾದಿಸಲ್ಪಡುವದಾಗಿದ್ದು, ಈ ವಚನವನ್ನು 16ರಿಂದ 18 ವಚನಗಳಲ್ಲಿ ಯೇಸುವಿನ ಕುರಿತು ಹೇಳಲ್ಪಟ್ಟದ್ದೆಲ್ಲದರೊಂದಿಗೆ ಜೋಡಣೆ ಮಾಡುತ್ತದೆ. “ಇಷ್ಟವಾಗಿತ್ತು” (εὐδοκέω, *eudokeō*) ಅಥವಾ “ಮೆಚ್ಚಿದ್ದೇನೆ,” ಎಂಬುದು ಯೇಸುವಿನ ದೀಕ್ಷಾಸ್ನಾನದ ವೇಳೆಯಲ್ಲಿ ಯೆಶಾಯನ ಪ್ರವಾದನೆಯನ್ನು ಉಲ್ಲೇಖನ ಮಾಡುತ್ತಾ, ಮತ್ತು ಆತನು ಪ್ರಕಾಶರೂಪವನ್ನು ಧರಿಸಿಕೊಂಡ ವೇಳೆಯಲ್ಲಿ ತಂದೆಯು ಯೇಸುವನ್ನು ಮೆಚ್ಚಿದ್ದೇನೆ ಎಂದು ಹೇಳುವಾಗ ಇದೇ ಕ್ರಿಯಾಪದವು ಬಳಸಲ್ಪಟ್ಟಿರುತ್ತದೆ (ಮತ್ತಾಯ 3:17; 12:18; 17:5).

ತಂದೆಯು ಯೇಸುವಿಗೆ ಉನ್ನತ್ತಕ್ಕೇರಲ್ಪಟ್ಟ ಸ್ಥಾನವನ್ನು ಕೊಡುವ ಮೂಲಕ ತನ್ನ ನಿತ್ಯವಾದ ಉದ್ದೇಶವನ್ನು ನೆರವೇರಿಸಿದನು. ಯೇಸುವು ತಂದೆಯಿಂದ ಈ ಉನ್ನತಕ್ಕೇರಿಸಲ್ಪಡುವಿಕೆಯನ್ನು ಪಡೆದುಕೊಳ್ಳಲು ಅಪೇಕ್ಷಿಸಲಿಲ್ಲ (ಫಿಲಿಪ್ಪಿ 2:6), ಆದರೆ

ಸೌಜನ್ಯವಾಗಿ ಆತನಿಂದ ಸ್ವೀಕರಿಸಿಕೊಂಡನು. ಯೇಸುವು ತಂದೆಯ ಚಿತ್ತವನ್ನು ಮಾಡುವದಕ್ಕೆ ಬಂದನು, ಯಾಕೆಂದರೆ ಉದ್ದೇಶದಲ್ಲಿ ಆತನೂ ತಂದೆಯೂ ಒಂದೇ ಆಗಿದ್ದರು (ಯೋಹಾನ 10:30). ತಾನು ಮಾಡಿದ ಎಲ್ಲದರಲ್ಲಿಯೂ ಯೇಸುವಿಗಿದ್ದ ಉದ್ದೇಶವು ತಂದೆಯ ಚಿತ್ತಕ್ಕೆ ವಿಧೇಯನಾಗುವದೇ ಆಗಿತ್ತು (ಯೋಹಾನ 4:34; 5:30; 6:38; ಇಬ್ರಿಯ 10:9). ಯೇಸುವು ಮನಃಪೂರ್ವಕವಾಗಿ ಶಿಲುಬೆಯ ಮರಣ ಹೊಂದುವದಕ್ಕೆ ವಿಧೇಯನಾದ ಕಾರಣದಿಂದ, ತಂದೆಯು "ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದನು" (ಫಿಲಿಪ್ಪಿ 2:9).

ಯೇಸುವಿನ ಮೂಲಕ ಮತ್ತು ತನ್ನ ಮಕ್ಕಳ ಮೂಲಕ, ತಂದೆಯು "ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು . . . ಪ್ರಯತ್ನವನ್ನೂ ಉದ್ದೇಶವನ್ನೂ" ಉಂಟು ಮಾಡುವದಕ್ಕೆ ಶಕ್ತನಾಗಿದ್ದಾನೆ (ಫಿಲಿಪ್ಪಿ 2:13). ಪ್ರತಿಯೊಂದು ಘಟನೆಯನ್ನು ದೇವರೇ ಸಂಭವಿಸುವಂತೆ ಮಾಡುತ್ತಾನೆಂದು ಇದರರ್ಥವಲ್ಲ. ಆತನು ಪ್ರತಿಯೊಬ್ಬ ವ್ಯಕ್ತಿಗೆ ಆರಿಸಿಕೊಳ್ಳುವ ಹಕ್ಕನ್ನು ಅನುಗ್ರಹಿಸುತ್ತಾನೆ (ಯೆಹೋಶುವ 24:15), ಯೇಸುವು ಸಹ ಗೆತ್ಸೇಮನೆಯಲ್ಲಿ ಪ್ರಾರ್ಥಿಸಿದ ವೇಳೆಯಲ್ಲಿ ತನಗೆ ಸ್ವೇಚ್ಛಾ – ಚಿತ್ತವು ಇತ್ತೆಂಬುದನ್ನು ಸೂಚ್ಯಾರ್ಥವಾಗಿ ತೋರಿಸಿ ಕೊಡುತ್ತಾನೆ (ಮತ್ತಾಯ 26:39).

## "ತಂದೆಯಾದ ದೇವರು ಆತನಲ್ಲಿ ತನ್ನ ಸರ್ವಸಂಪೂರ್ಣತೆಯು ವಾಸವಾಗಿರಬೇಕೆಂತಲೂ" (1:19)

ದೇವರ ಚಿತ್ತ, ಅಥವಾ ಇಷ್ಟವು ಏನಾಗಿತ್ತೆಂದರೆ, **ತಂದೆಯಾದ ದೇವರು ಆತನಲ್ಲಿ ತನ್ನ ಸರ್ವಸಂಪೂರ್ಣತೆಯು ವಾಸವಾಗಿರಬೇಕೆಂತಲೂ** ಎಂಬದೆ. "ವಾಸವಾಗಿರಬೇಕೆಂತಲೂ" (κατοικέω, *katoikeō*) ಎಂಬುದು ವರ್ತಮಾನ ಧಾತ್ವರ್ಥವಾಚಿಯ ರೂಪವಾಗಿರುತ್ತದೆ, ಅದು ಈ ಸರ್ವಸಂಪೂರ್ಣತೆಯು ವಾಸಿಸುವದದು ಮುಂದುವರೆದಿರುತ್ತದೆ ಎಂಬರ್ಥವಾಗಿರುತ್ತದೆ. ಯೇಸುವಿನ ಭೂಲೋಕದ ವಾಸಿಸುವಿಕೆಯನ್ನು "ವಾಸಮಾಡಿದನು" ಎಂಬದಾಗಿ ವ್ಯಕ್ತಪಡಿಸಲ್ಪಟ್ಟಿದೆ (ಯೋಹಾನ 1:14), ಅದೊಂದು ಏಕ-ಸಾರಿ ನಿವಾಸಿಸುವಿಕೆಯನ್ನು ಸೂಚಿಸುವಂತಹ ಅನಿಶ್ಚಿತ ಭೂತಕಾಲ ರೂಪವಾಗಿರುತ್ತದೆ. ಯೇಸುವಿನಲ್ಲಿ ವಾಸಿಸುವ ಸರ್ವಸಂಪೂರ್ಣತೆಯು ಏಕ-ಸಾರಿ ನಿವಾಸಿಸುವಿಕೆ ಆಗಿರುವದಿಲ್ಲ; ನಿರಂತರವಾಗಿ ಸಾಗುವ ಸ್ವಭಾವದ್ದಾಗಿದೆ.

"ಸರ್ವಸಂಪೂರ್ಣತೆ" ಎಂಬುದು, ಗ್ರೀಕ್‌.ನ πλήρωμα (*plērōma*) ಎಂಬ ಪದದಿಂದ ಬಂದಿದ್ದು, ಅದು ಯೋಹಾನ 1:16 ಮತ್ತು ಎಫೆಸ 1:23; 3:19; 4:13ರಲ್ಲಿರುವಂತೆಯೇ, ಇಲ್ಲಿ ಸಹ ಪರಿಪೂರ್ಣತೆ ಎಂಬುದನ್ನ ಸೂಚಿಸಲು ಬಳಸಲ್ಪಟ್ಟಿದೆ. ಕೊಲೊಸ್ಸೆಯವರಿಗೆ ಪತ್ರಿಕೆಯ ನಂತರದ ಭಾಗದಲ್ಲಿ, ಪೌಲನು ಈ ವಿಚಾರಕ್ಕೆ ಹಿಂದಿರುಗಿ ಬಂದು ಕ್ರಿಸ್ತನಲ್ಲಿರುವ ಸರ್ವಸಂಪೂರ್ಣತೆಯ ಕೆಲವೊಂದು ಅಂಶಗಳ ಬಗ್ಗೆ ಒತ್ತಿ ಹೇಳುತ್ತಾನೆ: "ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ಅವತರಿಸಿ ವಾಸ ಮಾಡುತ್ತದೆ" (ಕೊಲೊಸ್ಸೆ 2:9). ಆತನಲ್ಲಿಯೇ ರಕ್ಷಣೆ, ಪುನರುತ್ಥಾನ, ಎಲ್ಲಾ ಅಧಿಕಾರ, ಶಕ್ತಿ, ಮತ್ತು ತಂದೆಯ ಪ್ರಕಟವಾಗುವಿಕೆ ಇವುಗಳು ಇರುತ್ತವೆ. ಅಲ್ಲದೆ, ಈಗ ಆತನಲ್ಲಿ ನಿರಂತರವಾಗಿ ವಾಸವಾಗಿರುವ ಸಂಗತಿಗಳೆಂದರೆ, ಮಾನವರುಗಾಗಿ ಇರುವ ದೇವರ ಎಲ್ಲಾ ಉದ್ದೇಶಗಳ ಸರ್ವಸಂಪೂರ್ಣತೆ ಮತ್ತು ತಂದೆಯ ಸ್ವಭಾವದ ಸಂಪೂರ್ಣ ಪ್ರತಿಕೃತಿ ಇವುಗಳೆ.

ತಂದೆಯ ದೈವಿಕ ಉದ್ದೇಶವು ಯೇಸುವಿನಲ್ಲಿ ಸಾಧಿಸಲ್ಪಟ್ಟಿರುತ್ತದೆ. ಯೇಸುವನ್ನು ಹೊರತು ಪಡಿಸಿ ಮನುಷ್ಯರಿಗೆ ಇನ್ನಾವ ಸೃಷ್ಟಿಕರ್ತನು, ಕರ್ತನು, ಬೋಧಕನು, ಧರ್ಮಶಾಸ್ತ್ರದಾಯಕನು, ಅಥವಾ ರಕ್ಷಕನು ಇರುವದಿಲ್ಲ. ಸೃಷ್ಟಿಸಲ್ಪಟ್ಟ ಎಲ್ಲದಕ್ಕೆ ಸಂಬಂಧಿಸಿದಂತೆ, ಯೇಸುವು ಸಮಸ್ತದಲ್ಲಿಯೂ ಸಮಸ್ತವಾಗಿದ್ದಾನೆ. ಆತನಲ್ಲಿ ಸೃಷ್ಟಿಗೆ ಸಂಬಂಧಿಸಿದ ದೇವರ ಎಲ್ಲಾ ಉದ್ದೇಶಗಳು ಪೂರ್ಣಗೊಂಡಿರುತ್ತವೆ. ಶಿಲುಬೆಯ ಮೇಲಿನ ತನ್ನ ಶ್ರಮೆಯ ಮೂಲಕ, ಮಾಣವರ ರಕ್ಷಕನಾಗಿ ಪರಿಪೂರ್ಣನು, ಸಂಪೂರ್ಣನು ಆಗಿ ಮಾಡಲ್ಪಟ್ಟನು (ಇಬ್ರಿಯ 5:9). ಇದೆಲ್ಲದರ ಜೊತೆಗೆ, ದೇವರ ಪೂರ್ಣ ಅಧಿಕಾರವು ಮತ್ತು ದೇವತ್ವದ ದೈವಿಕ ಸ್ವಭಾವವು ಸತ್ತ್ವಗುಂದದ್ದಾಗಿ ಮತ್ತು ಪೂರ್ಣ ಪ್ರಕಟಗೊಂಡದ್ದಾಗಿ ವಾಸಿಸುತ್ತದೆ. ಯೇಸುವು ಯಾವದೇ ಗುಣಲಕ್ಷಣಗಳ ಕೊರತೆಯಿಲ್ಲದವನಾಗಿದ್ದಾನೆ.

ಅದರಲ್ಲಿ ಆತನು ಭೂಮಿಯ ಎಲ್ಲಾ ನಿವಾಸಿಗಳ ಅಗತ್ಯತೆಯನ್ನು ಪೂರೈಸುತ್ತಾನೆ, ಇದು ಆತನಲ್ಲಿ ದೇವರು ಸರ್ವಸಂಪೂರ್ಣತೆಯು ವಾಸಿಸುವಂತೆ ಮಾಡಿದ್ದಾನೆಂಬುದಕ್ಕೆ ಪುರಾವೆಯಾಗಿರುತ್ತದೆ. ಕೊಲೊಸ್ಸೆಯವರು ಯೇಸುವನ್ನು ಹೊರತು ಪಡಿಸಿ ಮತ್ತಾರ ಕಡೆಗೂ ತಿರುಗಿಕೊಳ್ಳುವ ಅವಶ್ಯಕತೆಯಿರಲಿಲ್ಲ. ಇಂದಿನ ಜನರ ವಿಷಯದಲ್ಲಿ ಸಹ ಅದು ಅಷ್ಟೇ ಸತ್ಯವಾಗಿರುತ್ತದೆ. ಅವರಿಗೆ ರಕ್ಷಣೆಯ ಅಗತ್ಯವಿದ್ದಲ್ಲಿ, ಯೇಸು ಸಾಕಾದಷ್ಟು ಒದಗಿಸಿ ಕೊಡುತ್ತಾನೆ. ಅವರಿಗೆ ಆತ್ಮೀಕ ಸಹಾಯದ ಅಗತ್ಯವಿದ್ದರೆ, ಯೇಸು ಅವರ ಸಹಾಯಕನು. ಅವರಿಗೆ ಬೋಧನೆಯ ಅಗತ್ಯವಿದ್ದಲ್ಲಿ, ಯೇಸು ಮಾತ್ರವೇ ಏಕೈಕ ಸತ್ಯವಾದ ಬೋಧಕನು. ಆತನು ಮಾನವನ ಏಕೈಕ ರಕ್ಷಕನು (ಅಪೊಸ್ತಲರ ಕೃತ್ಯಗಳು 4:12) ಮತ್ತು ಮಧ್ಯಸ್ಥನು (1 ತಿಮೊಥೆ 2:5). ಮಧ್ಯಸ್ಥನಾಗಿ, ಆತನು ದೇವರಿಂದ ದೂರವಾಗಿದ್ದವರಿಗಾಗಿ ಸಂಧಾನವನ್ನು ಏರ್ಪಡಿಸಿದ್ದಾನೆ. ಕ್ರೈಸ್ತರಿಗೋಸ್ಕರವಾದ ಸಂಪೂರ್ಣತೆಯು ಯೇಸುವಿನಲ್ಲಿ ವಾಸಿಸುತ್ತದೆ. "ಬೋಧಕನ ಕೆಲಸವು ತಮ್ಮ ಸಂಪೂರ್ಣತೆಯನ್ನ ಕ್ರಿಸ್ತನಲ್ಲಿ ಮಾತ್ರವೇ ಕಂಡುಕೊಳ್ಳುವಂತೆ ಜನರನ್ನು ನಡಿಸುವದೇ ಆಗಿದೆ: ಆತನು ಕ್ರಿಸ್ತನನ್ನು ಮೀರಿ ತನ್ನ ಜನರಿಗೆ ಕೊಡುವದಕ್ಕೆ ಏನನ್ನೂ ಹೊಂದಿರುವವನಲ್ಲ."[20]

ಯೇಸುವನ್ನು ಹೊರತು ಪಡಿಸಿ ಆತ್ಮೀಕ ಅಗತ್ಯತೆಗಳನ್ನು ಸಂತೃಪ್ತಿಪಡಿಸಲು ಪ್ರಯತ್ನಿಸುವ ಸಭೆಗಳು ಆ ಅಗತ್ಯತೆಗಳನ್ನು ಸಂಧಿಸಬಲ್ಲವನಾದ ಏಕೈಕ ವ್ಯಕ್ತಿಯಿಂದ ದೂರವಾಗಿ ಅಲೆದಾಡಿರುತ್ತವೆ. ಅವರು ಆತನನ್ನು ಬಿಟ್ಟು ಕಡಮೆಯಾದ ಮೂಲದ ಕಡೆಗೆ ತಿರುಗಿಕೊಂಡಿರುತ್ತಾರೆ. ಇಸ್ರಾಯೇಲ್ಯರು ದೇವರಿಂದ ದೂರವಾಗಿ ವಿಗ್ರಹಗಳ ಕಡೆಗೆ ತಿರುಗಿಕೊಂಡಾಗ, ಯೆರೆಮೀಯನು ಹೀಗೆ ಬರೆದನು, "ನನ್ನ ಜನರು ಎರಡು ಅಪರಾಧಗಳನ್ನು ಮಾಡಿದ್ದಾರೆ; ಜೀವಜಲದ ಬುಗ್ಗೆಯಾದ ನನ್ನನ್ನು ಬಿಟ್ಟಿದ್ದಾರೆ, ತಮಗೋಸ್ಕರ ತೊಟ್ಟಿಗಳನ್ನು, ನೀರು ನಿಲ್ಲದ ಬಿರಿದ ತೊಟ್ಟಿಗಳನ್ನು ಕೊರೆದುಕೊಂಡಿದ್ದಾರೆ" (ಯೆರೆಮೀಯ 2:13).

ಯೇಸುವಿನ ಹೊರಗೆ, ಸಂಪೂರ್ಣತೆಯು ಇಲ್ಲವೇ ಇಲ್ಲ. ಯೇಸುವಿನೊಳಗೆ ಕ್ರೈಸ್ತರು ದೇವರ ಸಂಗಡ ತಮ್ಮ ಸಂಬಂಧವನ್ನು ಪೂರ್ಣಗೊಳಿಸಲು ಬೇಕಾದ ಎಲ್ಲವೂ ಇರುತ್ತದೆ. ಪೌಲನು ಈ ವಾಕ್ಯಭಾಗದಲ್ಲಿ ಮತ್ತು ಕೊಲೊಸ್ಸೆ 2:10ದಲ್ಲಿ ಅಸ್ತಿವಾರ ಹಾಕುವವನಾಗಿ ಹೀಗೆ ಬರೆಯುತ್ತಾನೆ, "ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ."

## ಸಂಧಾನಪಡಿಸಿಕೊಳ್ಳಲು ತಳಹದಿ (1:20)

**[20]ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನು ಉಂಟುಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಆತನ ಮೂಲಕ ತನಗೆ ಸಂಧಾನಪಡಿಸಿಕೊಳ್ಳಬೇಕೆಂತಲೂ ನಿಷ್ಕರ್ಷೆ ಮಾಡಿದನು.**

### "ಸಮಸ್ತವನ್ನೂ ಆತನ ಮೂಲಕ ತನಗೆ ಸಂಧಾನಪಡಿಸಿಕೊಳ್ಳಬೇಕೆಂತಲೂ"

ದೇವರ ಸರ್ವಸಂಪೂರ್ಣತೆಯು ಯೇಸುವಿನಲ್ಲಿರುತ್ತದೆ ಎಂದು ಹೇಳಿದ ಬಳಿಕ, ಪೌಲನು ಯೇಸುವಿನ ಮೂಲಕವಾಗಿ ತಂದೆಯು ಸಂಧಾನವನ್ನು ಸಾಧ್ಯವಾಗಿಸಿದ್ದಾನೆಂಬ ಭರವಸೆಯನ್ನು ಕೊಡುತ್ತಾನೆ. **ಸಮಸ್ತವನ್ನೂ ಆತನ ಮೂಲಕ ತನಗೆ ಸಂಧಾನಪಡಿಸಿಕೊಳ್ಳಬೇಕೆಂತಲೂ** ಎಂಬುದು ಎರಡು ಸತ್ಯಗಳನ್ನು ಸೂಚ್ಯಾರ್ಥವಾಗಿ ತಿಳಿಸುತ್ತದೆ: (1) ಪಾಪದ ಕಾರಣದಿಂದ ಮಾನವರು ದೇವರಿಂದ ಬೇರ್ಪಟ್ಟಿದ್ದಾರೆ ಮತ್ತು ದೂರವಾಗಿದ್ದಾರೆ, ಮತ್ತು (2) ದೇವರೇ ಯೇಸುವಿನ ಮೂಲಕವಾಗಿ ಒಂದು ಸ್ನೇಹಮಯ ಸಂಬಂಧವನ್ನು ಸಾಧ್ಯವಾಗಿಸಿದ್ದಾನೆ. ಪಾಪವು ದೇವರ ಮತ್ತು ಮನುಷ್ಯನ ನಡುವೆ ಒಂದು ಆಳವಾದ ಹಳ್ಳವನ್ನು ಅಥವಾ ಗೋಡೆಯನ್ನು ರೂಪಿಸುತ್ತದೆ. ಅದು ಮಾನವನನ್ನು ದೇವರಿಂದ ಬೇರ್ಪಡಿಸುತ್ತದೆ, ಆತನೊಂದಿಗಿನ ಅವನ ಸಂಬಂಧವನ್ನು ಕಡಿದು ಹಾಕುತ್ತದೆ, ಮತ್ತು ಆತನನ್ನು ದೇವರಿಗೆ ವೈರಿಯನ್ನಾಗಿ ಮಾಡುತ್ತದೆ (ಯೆಶಾಯ 59:1, 2; ಎಫೆಸ 2:12, 13; ಯಾಕೋಬ 4:4). ದೇವರೊಂದಿಗೆ ಸಂಧಾನಪಡಿಸಿಕೊಂಡು ಆತನಿಗೆ ಸ್ನೇಹಿತರಾಗುವದು ಎಲ್ಲಾ ಮನುಷ್ಯರಿಗೆ ಇರುವ ಅಗತ್ಯತೆಯಾಗಿದೆ. ಒಬ್ಬನ ನಂಬಿಕೆ ಮತ್ತು ಕ್ರಿಯೆಗಳ ಫಲಿತವಾಗಿ ದೇವರ ಸ್ನೇಹಿತನೆಂದು ಕರೆಯಲ್ಪಟ್ಟನೆಂಬುದಕ್ಕೆ ಅಬ್ರಹಾಮನು ಒಂದು ಉದಾಹರಣೆಯಾಗಿದ್ದಾನೆ (ಯಾಕೋಬ 2:22, 23).

ಸಂಧಾನವು ಕ್ರಿಸ್ತನ ಸರ್ವಸಂಪೂರ್ಣತೆಯಲ್ಲಿ ಸಿಕ್ಕುತ್ತದೆ. ಇದು ದೇವರ ಇಷ್ಟದ ಮೇರೆಗೆ ವ್ಯವಸ್ಥೆಗೊಳಿಸಲ್ಪಟ್ಟಿತು. Hay ಹೀಗೆ ಬರೆಯುತ್ತಾನೆ,

> ವಚನ 20*a* ಯಲ್ಲಿನ "ಸಂಧಾನಪಡಿಸಿಕೊಳ್ಳಬೇಕೆಂತಲೂ" ಧಾತ್ವರ್ಥವಾಚಿಯು ವ್ಯಾಕರಣಾತ್ಮಕವಾಗಿ . . . 19ನೇ ವಚನದಲ್ಲಿನ "ವಾಸವಾಗಿರಬೇಕೆಂತಲೂ" ಎಂಬುದಕ್ಕೆ ಸಮಾಂತರವಾಗಿರುತ್ತದೆ, ಎರಡೂ ಧಾತ್ವರ್ಥವಾಚಿಗಳು "ನಿಷ್ಕರ್ಷೆಮಾಡಿದನು" ಎಂಬುದರ ಅರ್ಥವನ್ನು ಪೂರ್ಣಗೊಳಿಸುತ್ತವೆ. ದೇವರು ದೇವರ ಸರ್ವಸಂಪೂರ್ಣತೆಯಿಂದ ತನ್ನ ಮಗನಲ್ಲಿ ಇರುವದಕ್ಕೂ ಆತನ ಮೂಲಕ ಕಾರ್ಯಮಾಡುವದಕ್ಕೂ ನಿಷ್ಕರ್ಷೆಮಾಡಿದನು. ಸೂತ್ರೀಕರಣವು 2 ಕೊರಿಂಥ 5:19ರಲ್ಲಿರುವದಕ್ಕೆ ನಿಕಟತೆಯಿಂದಿರುವಂತೆ ಕಾಣುತ್ತದೆ, "ದೇವರು . . . ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನಪಡಿಸಿಕೊಳ್ಳುತ್ತಿದ್ದನೆಂಬದೇ," ಆದರೂ ಇಲ್ಲಿ ಕೆಲವೊಂದು ಮಹತ್ವಪೂರ್ಣವಾದ ವ್ಯತ್ಯಾಸಗಳಿರುತ್ತವೆ. "ಸಮಾಧಾನಪಡಿಸಿಕೋ" ಎಂಬುದಕ್ಕಿರುವ ಕ್ರಿಯಾಪದವು ಬೇರೆಯಾಗಿರುತ್ತದೆ; ಖಂಡಿತವಾಗಿಯೂ, 1:20ರಲ್ಲಿ ಬಳಸಲಾಗಿರುವ ಪದವು (ಗ್ರೀಕ್‌ನ *apokatalassein*) ಪ್ರಾಚೀನ ಗ್ರೀಕ್ ಸಾಹಿತ್ಯದಲ್ಲಿ ಎಲ್ಲಿಯೂ ಕಂಡು ಬರುವದಿಲ್ಲ ಮತ್ತು ಬಹುಶಃ ಪೌಲನು 2 ಕೊರಿಂಥ 5:18-19ರಲ್ಲಿ ಬಳಸಿದ ಪದದಿಂದ ಮತ್ತು ರೋಮಾ 5:10ರಲ್ಲಿನ (ಗ್ರೀಕ್‌ನ *katalassein*) ಪದದಿಂದ ಸೃಷ್ಟಿಸಲ್ಪಟ್ಟಿರಬಹುದಾಗಿದೆ.[21]

"ಸಂಧಾನಪಡಿಸಿಕೊಳ್ಳುವಿಕೆ" ಎಂದರೆ ಎರಡು ಪಕ್ಷಗಳವರು ಸ್ನೇಹಿತರಾಗುವಂತೆ ಅವರ ಮಧ್ಯದಲ್ಲಿರುವ ಅಡೆತಡೆಗಳನ್ನು ತೆಗೆದುಹಾಕುವದು ಎಂದರ್ಥವಾಗಿರುತ್ತದೆ. ಯೇಸುವು ಇದನ್ನು ಸಾಧ್ಯವಾಗಿಸುವದಕ್ಕೆ ತನ್ನ ಪಾತ್ರವನ್ನು ಮಾಡಿದ್ದನು, ಮಾನವರ ಪಾಪಗಳನ್ನು ಶಿಲುಬೆಯ ಮೇಲೆ ಹೊತ್ತುಕೊಳ್ಳುವ ಮೂಲಕ ಅಡೆತಡೆಗಳನ್ನು ನಿವಾರಿಸಿದ್ದನು (1 ಪೇತ್ರ 2:24). ಸಂಧಾನಗೊಳ್ಳುವದಕ್ಕೋಸ್ಕರ ಮಾನವನಿಗಿರುವ ಜವಾಬ್ದಾರಿಯೆಂದರೆ ಯೇಸುವಿನ ಚಿತ್ತವನ್ನು ಮಾಡುವದೇ. ದೇವರು ಮನುಷ್ಯನನ್ನು ಕ್ರಿಸ್ತನಲ್ಲಿ ಸಂಧಿಸುತ್ತಾನೆ, ಅಲ್ಲಿಯೇ ಸಂಧಾನವು ಸಾಧ್ಯಗೊಳಿಸಲ್ಪಟ್ಟಿರುತ್ತದೆ (2 ಕೊರಿಂಥ 5:19). ಯೇಸುವು ಪಾಪದ ಶಾಪವನ್ನು ತನ್ನ ಮೇಲೆ ಹೊತ್ತುಕೊಂಡನು ಮತ್ತು ಮಾನವರಿಗಾಗಿ ಪಾಪ ಸ್ವರೂಪಿಯಾದನು (ಗಲಾತ್ಯ 3:13; 2 ಕೊರಿಂಥ 5:21). ಮುಂದಿನ ನಡೆಯು ಆಯಾ ವ್ಯಕ್ತಿಗೆ ಬಿಟ್ಟಿದ್ದು: ಒಬ್ಬ ವ್ಯಕ್ತಿಯು ದೇವರ ಸಂಗಡ ಸಂಧಾನಪಡಿಸಲ್ಪಡಬೇಕೆಂದರೆ ಆತನು ಕ್ರಿಸ್ತನನ್ನು ಪ್ರವೇಶಿಸಬೇಕು (2 ಕೊರಿಂಥ 5:20; ಗಲಾತ್ಯ 3:26, 27). ದೇವರು ತನ್ನ ಸಂಧಾನದ ಕಾರ್ಯವನ್ನು ಯೇಸುವಿನ ಮೂಲಕವಾಗಿ ಪೂರ್ತಿಗೊಳಿಸಿರುತ್ತಾನೆ. ಆತನು ಬೇರೆ ಇನ್ನೇನೂ ಮಾಡಲಾರನು.

ಮಾನವರು ಆದಾಮ ಮತ್ತು ಹವ್ವಳ ಪಾಪದ ಆಧಾರದ ಮೇಲೆ ದೇವರಿಂದ ಬೇರ್ಪಡಿಸಲ್ಪಟ್ಟಿರುವದಿಲ್ಲ. ನಾವೇ ದೇವರಿಂದ ನಮ್ಮ ಬೇರ್ಪಡುವಿಕೆಯನ್ನು ತಂದುಕೊಂಡಿದ್ದೇವೆ (ಆದಿಕಾಂಡ 3:23, 24). ಮಕ್ಕಳು ಒಳ್ಳೇದು ಮತ್ತು ಕೆಟ್ಟದ್ದನ್ನು ಅರಿಯದವರಾಗಿ ಈ ಲೋಕದಲ್ಲಿ ಹುಟ್ಟುತ್ತಾರೆ (ಧರ್ಮೋಪದೇಶಕಾಂಡ 1:39). ಅವರು ಯಾವದು ಸರಿ ಮತ್ತು ತಪ್ಪು ಎಂಬ ವಿಚಾರದಲ್ಲಿ ಕುರುಡರಾಗಿರುತ್ತಾರಾದ್ದರಿಂದ, ಅವರಲ್ಲಿ ಪಾಪ ಇರುವದಿಲ್ಲ (ಯೋಹಾನ 9:41). ಪರಲೋಕರಾಜ್ಯವು ಅವರಿಗೆ ಸೇರಿದ್ದಾಗಿದೆ (ಮತ್ತಾಯ 19:14). ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ವಂತ ಪಾಪಗಳ ಕಾರಣದಿಂದಾಗಿ ದೇವರಿಂದ ಬೇರ್ಪಟ್ಟಿರುತ್ತಾನೆ (ಯೆಶಾಯ 59:1, 2; ಯಾಕೋಬ 1:14). ಯೇಸು ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ರಕ್ಷಿಸುವದಕ್ಕೆ ಬಂದನು (ಮತ್ತಾಯ 1:21; ಒತ್ತಿ ಹೇಳಿದ್ದು ನನ್ನದು). ಪೇತ್ರನು ಜನರಿಗೆ "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ" ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 2:38), ಮತ್ತು ಪೌಲನಿಗೆ ". . . ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" ಎಂದು ಹೇಳಲಾಯಿತು (ಅಪೊಸ್ತಲರ ಕೃತ್ಯಗಳು 22:16). ಯಾರಿಗೂ ಆದಾಮ ಪಾಪದಿಂದ ಅಥವಾ ಆದಾಮನಿಂದ ಬಾಧ್ಯವಾಗಿ ಹೊಂದಿರುವ ಪಾಪದಿಂದ ಕ್ಷಮಿಸಲ್ಪಡುವದಕ್ಕಾಗಿ ಏನನ್ನಾದರೂ ಮಾಡುವಂತೆ ಹೇಳಲ್ಪಡಲೇ ಇಲ್ಲ.

1:6, 23ರಲ್ಲಿ ಇರುವ ಪ್ರಕಾರ, "ಸಮಸ್ತವನ್ನೂ" ಎಂಬುದು ವಿಶ್ವದಲ್ಲಿ ಇರಬಹುದಾದ ಪ್ರತಿಯೊಂದು ಸಂಗತಿಯೂ ಎಂದರ್ಥವಲ್ಲ. ಗ್ರೀಕ್.ನಲ್ಲಿ, "ಎಲ್ಲಾ" ಎಂಬ ಅರ್ಥ ಕೊಡುವ *πάντα* (*panta*) ಎಂಬ ಗುಣವಾಚಕ ಮಾತ್ರವೇ ಕಾಣಿಸಿಕೊಳ್ಳುತ್ತದೆ. "ಸಂಗತಿಗಳನ್ನು" ಎಂಬುದು ಗ್ರೀಕ್ ವಾಕ್ಯದಲ್ಲಿ ಸಿಕ್ಕುವದಿಲ್ಲ, ಅದು ಪದ ರೂಪದಲ್ಲಿ ಸೂಚ್ಯಾರ್ಥವಾಗಿ ತಿಳಿಸಲ್ಪಟ್ಟಿರುತ್ತದೆ.

"ಸಮಸ್ತ" ಎಂಬುದರಲ್ಲಿ ಶಾರೀರಿಕ ವಿಶ್ವವನ್ನು, ಪ್ರಾಣಿಗಳನ್ನು, ಅಥವಾ ಇತರೆ ಸೃಷ್ಟಿಜೀವಿಗಳನ್ನು ಒಳಗೊಂಡಿರುವದಿಲ್ಲ, ಯಾಕೆಂದರೆ ಅವುಗಳು ತಮ್ಮನ್ನ ದೇವರಿಂದ

ಬೇರ್ಪಡಿಸಿಕೊಳ್ಳುವಂತಹ ಯಾವ ಕಾರ್ಯವನ್ನೂ ಮಾಡಿರುವದಿಲ್ಲ. ಪೌಲನು ಯಾರ ಪಾಪಗಳು ದೇವರಿಂದ ಅವರನ್ನು ಬೇರ್ಪಡುವಂತೆ ಮಾಡಿವೆಯೋ ಮತ್ತು ಆ ಕಾರಣದಿಂದ ಸಂಧಾನದ ಅಗತ್ಯದಲ್ಲಿರುವಂತಾಗಿದ್ದಾರೋ ಆ "ಎಲ್ಲಾ" ಜನರನ್ನು ಸೂಚಿಸಿ ಹೇಳಿರಬಹುದಾಗಿದೆ. ಯೇಸುವು ದೇವರೊಂದಿಗೆ ಸರಿಯಾದ ಸಂಬಂಧದಲ್ಲಿರುವವರನ್ನು ಸಂಧಾನಪಡಿಸುವದಕ್ಕೋಸ್ಕರ ಬರಲಿಲ್ಲ (ಮತ್ತಾಯ 9:13), ಆದರೆ "ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ" ಬಂದನು (ಲೂಕ 19:10). ಇಡೀ ವಿಶ್ವದೊಳಗೆ, ಮಾನವ ಜೀವಿಗಳಿಗೆ ಮಾತ್ರವೇ ದೇವರ ಸಂಗಡ ಸಂಧಾನದ ಅಗತ್ಯವಿರುತ್ತದೆ ಮತ್ತು ಅವರಿಗೆ ಮಾತ್ರವೇ ಒದಗಿಸಲ್ಪಡಬಲ್ಲದ್ದಾಗಿದೆ. "ಎಲ್ಲಾ" ಎಂಬುದು ಜೀವಿಸಿದಂತಹ ಪ್ರತಿಯೊಬ್ಬರಿಗಾಗಿಯೂ ಯೇಸುವು ಸಂಧಾನವನ್ನು ಸಾಧ್ಯವಾಗಿಸಿದ್ದಾನೆಂಬ ಅರ್ಥವನ್ನು ಕೊಡತಕ್ಕದ್ದು.

ಕೆಲವರು "ಎಲ್ಲಾ ಸಂಗತಿಗಳು" ಎಂಬುದರ ಅರ್ಥವು ಸಾರ್ವತ್ರಿಕ ರಕ್ಷಣೆ ಎಂದಾಗುವಂತೆ ಒತ್ತಾಯಪಡಿಸಲು ಪ್ರಯತ್ನಿಸಿದ್ದಾರೆ. ಪ್ರತಿಯೊಬ್ಬರೂ ಶರತ್ತಿಲ್ಲದೆ ದೇವರೊಂದಿಗೆ ಸಂಧಾನಪಡಿಸಲ್ಪಡುವರೆಂಬ ಅರ್ಥದಲ್ಲಿ ಪೌಲನು ಹೇಳಲಿಲ್ಲ. ಸಂಧಾನವು ಯೇಸುವಿನ ಮೂಲಕ ಸಾಧ್ಯಗೊಳಿಸಲ್ಪಟ್ಟಿದೆ, ಆದರೆ ಅದನ್ನು ಪಡೆದುಕೊಳ್ಳಲು ಒಂದು ಪ್ರತಿಕ್ರಿಯೆ ತೋರುವ ಅಗತ್ಯವಿರುತ್ತದೆ. ಪೌಲನು ಕೊರಿಂಥದವರನ್ನು ದೇವರ ಸಂಗಡ ಸಂಧಾನಗೊಳ್ಳುವಂತೆ ಬೇಡಿಕೊಂಡನು (2 ಕೊರಿಂಥ 5:18–20). ಯೇಸು ತನಗೆ ವಿಧೇಯರಾಗುವವರನ್ನು ರಕ್ಷಿಸುತ್ತಾನೆ (ಇಬ್ರಿಯ 5:9). ಆತನು ತನಗೆ ಅವಿಧೇಯರಾಗುವವರಿಗೆ ನಿತ್ಯವಾದ ದಂಡನೆಯನ್ನು ಕೊಡುತ್ತಾನೆ (1 ಥೆಸಲೋನಿಕ 1:7–9). ಯೇಸುವು ಎರಡು ಗಮ್ಯಸ್ಥಾನಗಳುಂಟು ಎಂದು ಹೇಳಿದನು: "ನಾಶನ" ಮತ್ತು "ಜೀವ" (ಮತ್ತಾಯ 7:13, 14); "ನಿತ್ಯ ದಂಡನೆ" ಮತ್ತು "ನಿತ್ಯಜೀವ" (ಮತ್ತಾಯ 25:46); "ಜೀವಕ್ಕಾಗಿ ಪುನರುತ್ಥಾನ" ಮತ್ತು "ತೀರ್ಪಿಗಾಗಿ ಪುನರುತ್ಥಾನ" (ಯೋಹಾನ 5:29; KJV).

ಸಾರ್ವತ್ರಿಕ ರಕ್ಷಣೆಯ ಸುಳ್ಳು ಸಿದ್ಧಾಂತವು ಆರಂಭದಲ್ಲಿ ಸಭೆಯ ಬರಹಗಳಲ್ಲಿ ಬೋಧಿಸಲ್ಪಡುವದಕ್ಕೆ ಪ್ರಾರಂಭವಾಗಿತ್ತು. "Origenನೇ ಬಹುಶಃ ಮೊದಲ ಕ್ರೈಸ್ತ ಸಾರ್ವತ್ರಿಕ ರಕ್ಷಣವಾದಿ ಆಗಿದ್ದಿರಬಹುದಾಗಿದೆ. ಆತನು ತನ್ನ ಯೌವನಪ್ರಾಯದಲ್ಲಿ ಬರೆದ *De Principiis* ಎಂಬ ಕೃತಿಯಲ್ಲಿ ಈ ಸಾರ್ವತ್ರಿಕ ರಕ್ಷಣೆ, ಅಂತಿಮವಾಗಿ ಎಲ್ಲರೂ ಪುನಃಸ್ಥಾಪಿಸಲ್ಪಡುವರು ಎಂಬ ಆಲೋಚನೆಯನ್ನು ಸೂಚಿಸುತ್ತಾನೆ."[22]

## "ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನ ಉಂಟುಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ . . ."

ನಂತರ, ಪೌಲನು **ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ಸಮಾಧಾನವನ್ನು ಉಂಟುಮಾಡಿ** ಎಂಬುದರ ಕುರಿತು ಮಾತಾಡುತ್ತಾನೆ. ಮಾನವರು ದೇವರ ಸಂಗಡ ಸಮಾಧಾನಗೊಳ್ಳುವಂತಾಗಲು ಯೇಸುವು ಪಾಪಗಳ ಪರಿಹಾರರ್ಥವಾಗಿ ತನ್ನ ರಕ್ತವನ್ನು ಸುರಿಸಿದನು (ಮತ್ತಾಯ 26:28). ದೇವರು ಮತ್ತು ಮಾನವರು ಸಮಾಧಾನದಲ್ಲಿ ಒಂದುಗೂಡಿಲ್ಪಡುವದಕ್ಕೆ ಮುನ್ನ ಪಾಪವೆಂಬ ಗೋಡೆಯು ತೆಗೆದು ಹಾಕಲ್ಪಡತಕ್ಕದ್ದು. ದೇವರು ಏಕೆ ರಕ್ತವು ಸುರಿಸಲ್ಪಡದೆ ಪಾಪವನ್ನು ಕ್ಷಮಿಸುವದಿಲ್ಲ ಎಂಬುದನ್ನು ಈ ಭೂಮಿಯ ಮೇಲಿನ ಜೀವಿತದಲ್ಲಿ ಯಾರೊಬ್ಬನೂ ಎಂದಿಗೂ ತಿಳುಕೊಳ್ಳಲಾರನು (ಇಬ್ರಿಯ 9:22).

"ಪ್ರಾಣಕ್ಕೆ ಪ್ರತಿಯಾಗಿ ಪ್ರಾಣ" ಎಂಬ ಮೂಲತತ್ವವು (ವಿಮೋಚನಕಾಂಡ 21:23; ಧರ್ಮೋಪದೇಶಕಾಂಡ 19:21) ಸಂಧಾನಪಡಿಸುವಿಕೆಯ ಮೇಲೆ ಆಧಿಪತ್ಯ ನಡಿಸಬಹುದಾಗಿದೆ. ಪಾಪವು ಕೊಡುವ ಸಂಬಳ ಮರಣ (ರೋಮಾ 6:23). ಯೇಸುವು ಪಾಪಗಳ ಪರಿಹಾರ, ಸಂಧಾನ, ನಿತ್ಯಜೀವ, ಮತ್ತು ದೇವರೊಂದಿಗೆ ಸಮಾಧಾನಗಳನ್ನು ಒದಗಿಸುವದಕ್ಕೋಸ್ಕರ ತನ್ನ ಜೀವಧಾರಕ ರಕ್ತವನ್ನು ಕೊಡುವ ಮೂಲಕ ಪಾಪದ ಶಾಪ ಮತ್ತು ದಂಡನೆಯನ್ನು ತನ್ನ ಮೇಲೆ ಹೊತ್ತುಕೊಂಡನು (ಗಲಾತ್ಯ 3:13).

ಯೇಸುವು ಹುಟ್ಟಿದ ವೇಳೆ, ದೇವದೂತರು ಸಮಾಧಾನದ ಕುರಿತು ಹಾಡಿದರು: "ಮೇಲಣಲೋಕಗಳಲ್ಲಿ ದೇವರಿಗೆ ಮಹಿಮೆ, ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ, ದೇವರು ಅವರಿಗೆ ಒಲಿಯುತ್ತಾನೆ" (ಲೂಕ 2:14). ಯೇಸು ತನ್ನ ಹಿಂಬಾಲಕರಿಗೆ ಸಂಕಷ್ಟದ ವೇಳೆಯಲ್ಲಿ ಸಮಾಧಾನ ಕೊಡುವದಾಗಿ ವಾಗ್ದಾನ ಮಾಡಿದನು (ಯೋಹಾನ 14:27; 16:33). "ಒಳ್ಳೆದನ್ನು ನಡಿಸುವದಕ್ಕೆ" (ರೋಮಾ 2:10) ನಂಬಿಕೆಯಿಂದ ಸ್ಫೂರ್ತಿಗೊಳ್ಳುವವರಿಗೆ ದೇವರೊಂದಿಗೆ ಸಮಾಧಾನ ಸಿಕ್ಕುತ್ತದೆ (ರೋಮಾ 5:1; ಇಬ್ರಿಯ 11:6). ಆತ್ಮೀಕತೆಯ ಮನಸ್ಸುಳ್ಳ ಜನರಿಗೆ ಸಮಾಧಾನ ಸಿಕ್ಕಬಹುದು (ರೋಮಾ 8:6), ಆದರೆ ಕೆಟ್ಟದ್ದನ್ನು ನಡಿಸುವವರಿಗೆ ಸಮಾಧಾನದ ದಾರಿಯು ತಿಳಿಯದು (ರೋಮಾ 3:17). ಸಂಧಾನದ ಮುಖಾಂತರ ಸಮಾಧಾನವು ಮಾನವರಿಗೆ ಒಂದು ಶುಭವಾರ್ತೆಯಾಗಿ ಪ್ರಕಟಿಸಲ್ಪಟ್ಟಿರುತ್ತದೆ (ರೋಮಾ 10:15; ಎಫೆಸ 2:17).

ವಚನದ ಅಂತ್ಯದಲ್ಲಿ, ಪೌಲನು ಪುನರಾವರ್ತಿಸಿ **ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಆತನ ಮೂಲಕ** ಎಂದು ಹೇಳುತ್ತಾನೆ. "ಸಂಗತಿಗಳು" ಎಂಬುದಲ್ಲೆ ಮಾನವ ಜೀವಿಗಳು ಎಂಬದಕ್ಕಿಂತಲೂ ವ್ಯಾಪಕವಾದ ಅನ್ವಯಿಕೆ ಇರುತ್ತದೆ, ಆದರೆ ಸೃಷ್ಟಿಸಲ್ಪಟ್ಟ "ಸಂಗತಿಗಳನ್ನು" ಬಿಡಿಸುವದಕ್ಕೆ ಯೇಸುವಿನ ರಕ್ತವು ಏಕೆ ಅವಶ್ಯಕವಾಗುವದು? ಆತನ ರಕ್ತವು ಪಾಪಗಳನ್ನು ಪರಿಹರಿಸುವದಕ್ಕೆ ಸುರಿಸಲ್ಪಟ್ಟಿತು (ಮತ್ತಾಯ 26:28). ಎಲ್ಲಾ ಸೃಷ್ಟಿಯೂ ಅಲ್ಲ, ಆದರೆ ಮಾನವನು ಮಾತ್ರವೇ ಪಾಪ ಮಾಡಿದನು.

ಒಂದು ವಿವರಣೆಯೆಂದರೆ, ಆದಾಮನ ಪಾಪದ ಕಾರಣದಿಂದ, ಭೂಮಿ, ಸೌರ ಮಂಡಲ, ಮತ್ತು ನಕ್ಷತ್ರಗಳಿಂದ ಕೂಡಿದ ಅಂತರಿಕ್ಷಗಳು ಸೇರಿದಂತೆ ಸೃಷ್ಟಿಸಲ್ಪಟ್ಟ ಎಲ್ಲದರ ಮೇಲೆ ಶಾಪ ಉಂಟಾಯಿತು. ಯೇಸು ಶಿಲುಬೆಯ ಮೂಲಕ ಈ ಶಾಪವನ್ನು ತೊಲಗಿಸಿದನು, ಹೀಗೆ ಆದಾಮನಿಂದ ಉಂಟಾಗಿದ್ದ ಅಸಾಮರಸ್ಯವನ್ನು ಪರಿಹರಿಸುವದನ್ನು ಸಾಧ್ಯವಾಗಿಸಿದನು. ಅಂತಿಮ ಫಲಿವು ಎಲ್ಲಾ ಸಂಗತಿಗಳ ಪುನಃಸ್ಥಾಪನೆ ಆಗಿರಲಿದೆ. ಶಾಪದ ಮುನ್ನ (ಆದಿಕಾಂಡ 3:17) ಇದ್ದಂಥ ಜಾಗತಿಕ ಸಾಮರಸ್ಯ ಮತ್ತು ಸಮಾಧಾನ ಸಹ ಪುನಃಸ್ಥಾಪಿಸಲ್ಪಡುವದು (ರೋಮಾ 8:18-23). Herbert M. Carsonನು ಪೌಲನ ತಾತ್ಪರ್ಯವು ಇದೇ ಆಗಿತ್ತೆಂದು ಅಭಿಪ್ರಾಯ ಪಡುತ್ತಾನೆ:

> ಆದರೆ ಈ ಸಂಧಾನಪಡಿಸುವಿಕೆಯು ಮನುಷ್ಯರಿಗೆ ಮಾತ್ರವೇ ಸಿಮೀತವಾಗಿರುವದಿಲ್ಲ. ಅದು ಸೃಷ್ಟಿಸಲ್ಪಟ್ಟ ಜೀವಿಯ ಇಡೀ ಶ್ರೇಣಿಗೆ ಅನ್ವಯವಾಗುತ್ತದೆ. ಪೌಲನು ಇಲ್ಲಿ "ಎಲ್ಲಾ ಮನುಷ್ಯರು" ಎಂದು ಹೇಳಲಿಲ್ಲ, ಅದು ಆತನ ಬೋಧನೆಗೆ ತದ್ವಿರುದ್ಧವಾಗಿರುತ್ತಿತ್ತು, ಆದರೆ ಆತನು ಎಲ್ಲಾ ಸಂಗತಿಗಳು ಎನ್ನುತ್ತಾನೆ. ಪದಗುಚ್ಛವು ಅನಿರ್ದೇಶಕವಾಗಿದ್ದು ದೇವರ ಯೋಜನೆಯ ಸಂಪೂರ್ಣತೆಯನ್ನು ಸೂಚಿಸುತ್ತದೆ.

> ಪಾಪಿಯಾದ ಮನುಷ್ಯನು ಸಂಧಾನಪಡಿಸಲ್ಪಟ್ಟಿದ್ದು ಮಾತ್ರವಲ್ಲದೆ, ಪಾಪದ ಕಾರಣದಿಂದ ವ್ಯರ್ಥತ್ವಕ್ಕೆ ಒಳಪಡಿಸಲ್ಪಟ್ಟಿದ್ದ ಸೃಷ್ಟಿಸಲ್ಪಟ್ಟ ಜಗತ್ತು ಸಹ (ನೋಡಿರಿ [ರೋಮಾ 8:20-23]) ಶಿಲುಬೆ ಮೇಲಿನ ಪಾಪಪರಿಹಾರದ ಶಕ್ತಿಶಾಲಿ ಕಾರ್ಯ ಫಲದಲ್ಲಿ ಪಾಲು ಹೊಂದುವದು.[23]

ಯೇಸುವಿನ ಮರಣವು ಭೂಮಿಯ ಮೇಲಿನ ಸಂಗತಿಗಳಲ್ಲಿ ಪರಲೋಕದಲ್ಲಿರುವ ಸಂಗತಿಗಳೊಂದಿಗೆ ಸಂಧಾನಪಡಿಸಿತು ಎಂದು ಕೆಲವರು ನಿರ್ಧಾರಕ್ಕೆ ಬಂದಿರುವ ಪ್ರಕಾರ, ಪೌಲನು ಬರೆಯಲಿಲ್ಲ. ಆತನ ಮರಣವು ಭೂಲಿಯ ಮೇಲಿರುವ ಸಂಗತಿಗಳಿಗೆ ಮತ್ತು ಪರಲೋಕದಲ್ಲಿರುವ ಸಂಗತಿಗಳಿಗೆ ಸಂಧಾನವನ್ನು ಒದಗಿಸಿತು. ಯೇಸುವು ಸಂಧಾನದ ಅಗತ್ಯವಿರುವ ಎಲ್ಲರಿಗೂ ಸಂಧಾನವನ್ನು ಒದಗಿಸಿದನು ಎಂಬದೇ ಅರ್ಥವಾಗಿರತಕ್ಕದ್ದು. ದೇವರ ವಿರುದ್ಧ ಅಪರಾಧ ಮಾಡಿದವರು ಮಾತ್ರವೇ ಆತನೊಂದಿಗೆ ಸಂಧಾನಪಡಿಸಿಕೊಳ್ಳುವ ಅಗತ್ಯವಿರುತ್ತಾದ್ದರಿಂದ, ಪ್ರಾಣಿಗಳು ಮತ್ತು ಇತರ ಬದುಕುವ ಜೀವಿಗಳು ಅಳಿಸಿಹಾಕಲ್ಪಡಬಹುದಾಗಿದೆ. ದೇವರ ವಿರುದ್ಧ ಅಪರಾಧ ಮಾಡಬಲ್ಲವರೆಂದರೆ ದುರಾತ್ಮಗಳು, ದೇವದೂತರು, ಮತ್ತು ಜನರು. ಒಳ್ಳೆಯ ದೇವದೂತರು ಸಂಧಾನಪಡಿಸಿಕೊಳ್ಳುವ ಅಗತ್ಯವಿಲ್ಲ. ಕೆಟ್ಟ ದೇವದೂತರು ಮತ್ತು ದುರಾತ್ಮಗಳಿಗೆ ಸಂಧಾನದ ಅಗತ್ಯವಿರುತ್ತದೆ ಆದರೆ ಅವುಗಳು ಅದನ್ನು ಪಡೆದುಕೊಳ್ಳುವದಿಲ್ಲ. ಸಂಧಾನಪಡಿಸಲ್ಪಡುವದಕ್ಕೆ ಉಳಿದಿರುವವರೆಂದರೆ ಮಾನವ ಜನಾಂಗ ಮತ್ರವೇ.

ಬಹುಶಃ ಭೂಮಿಯ ಮೇಲಿರುವ ಪಾಪಭರಿತ ಮಾನವರಿಗೆ ಯೇಸುವಿನ ಮೂಲಕ ಸಮಾಧಾನವು ಲಭ್ಯಗೊಳಿಸಲ್ಪಟ್ಟಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಕಷ್ಟವೇನೂ ಇರುವದಿಲ್ಲ – ಆದರೆ ಪರಲೋಕದಲ್ಲಿರುವ ಯಾರಿಗೆ ಯೇಸುವಿನ ಮೂಲಕ ಸಮಾಧಾನವನ್ನು ಕಂಡುಕೊಳ್ಳುವ ಅಗತ್ಯದಲ್ಲಿದ್ದಾರೆ? ಹೊಲೆಯಾಗಿರುವ ಯಾವದೂ ದೇವರ ನಿವಾಸವಾಗಿರುವ ಪರಲೋಕವನ್ನು ಪ್ರವೇಶಿಸಲಾರದು (ಪ್ರಕಟನೆ 21:27). ಅಷ್ಟುಮಾತ್ರವಲ್ಲದೆ, ಯೇಸುವಿನ ವಿಮೋಚನಾಕಾರ್ಯದ ಮೂಲಕ ಪಾಪ ಮಾಡಿದ ದೇವದೂತರಿಗೆ ಸಂಧಾನವು ವಿಸ್ತರಿಸಲ್ಪಟ್ಟಿರುತ್ತದೆ ಎಂಬ ಯೋಚನೆಯು ಪಾಪ ಮಾಡಿದ ದೇವದೂತರ ಕುರಿತಾಗಿ ಪೇತ್ರನು ಹೇಳಿದ ಮಾತುಗಳಿಗೆ ವಿರುದ್ಧವಾಗುವದು. ಅವರು ನ್ಯಾಯತೀರ್ಪನ್ನು ಹೊಂದುವದಕ್ಕೆ ಕತ್ತಲೇ ಗುಂಡಿಗಳಲ್ಲಿ ಇಡಲ್ಪಟ್ಟಿದ್ದಾರೆ (2 ಪೇತ್ರ 2:4). ಅವರು ಪರಲೋಕದಲ್ಲಿ ಇಲ್ಲ, ಯಾಕೆಂದರೆ ಅವರು ತಮ್ಮ ಅಂತಿಮ ನ್ಯಾಯತೀರ್ಪಿಗಾಗಿ ಕಾಯ್ದುಕೊಳ್ಳುವಂತೆ "ನರಕಕ್ಕೆ ದೊಬ್ಬಲ್ಪಟ್ಟಿದ್ದಾರೆ" (ταρταρώσας, *tartarōsas*) – ಅಕ್ಷರಶಃ "tartaras [ಟಾರ್ಟಾರಾಸ್] ಒಳಗೆ ತಳ್ಳಲ್ಪಟ್ಟಿದ್ದಾರೆ." ಈ ಸಂದರ್ಭದಲ್ಲಿ "ನ್ಯಾಯತೀರ್ಪು" ಎಂಬುದನ್ನು ಮತ್ತಾಯ 23:14ರಲ್ಲಿರುಂತೆ "ದಂಡನೆ ತೀರ್ಪು" ಎಂದು ಅನುವಾದಿಸಬಹುದು (ನೋಡಿರಿ ಮಾರ್ಕ 12:40; ಲೂಕ 20:47; 23:40; ರೋಮಾ 3:8; 13:2; 1 ತಿಮೊಥೆ 3:6; 5:12; ಯೂದನು 4).

ಸಂಧಾನದಲ್ಲಿ "ಸೃಷ್ಟಿಸಲ್ಪಟ್ಟ ಜಗತ್ತು" ಸೇರಿರುತ್ತದೆಂಬದನ್ನು ವಾದಿಸುತ್ತಾ, Carsonನು ನಿರ್ಲಕ್ಷಿಸುವ ವಾಶ್ತವಾಂಶವೇನೆಂದರೆ ಪೌಲನು "ಭೂಮಿ" ಮತ್ತು "ಪರಲೋಕ" ಎಂದು ಹೇಳಲಿಲ್ಲ, ಆದರೆ ಭೂಮಿಯ "ಮೇಲೆ" ಮತ್ತು ಪರಲೋಕ "ದಲ್ಲಿ" ಎಂದು ಹೇಳಿದನು ಎಂಬದೆ. ಸಂಧಾನವು ಭೂಮಿಯ ಮೇಲೆ ಮತ್ತು ಪರಲೋಕದಲ್ಲಿ ಇರುವಂಥವುಗಳಿಗಾಗಿ

ಆಗಿರುತ್ತದೆ, ಹೊರತು ಸ್ವತಃ ಭೂಮಿ ಮತ್ತು ಪರಲೋಕಗಳಿಗಾಗಿಯೇ ಅಲ್ಲ. ಭೂಮ್ಯಾಕಾಶಗಳು ಅಳಿದು ಹೋಗುವವು (ಮತ್ತಾಯ 24:35) ಮತ್ತು ಸುಟ್ಟು ಹೋಗುವವು (2 ಪೇತ್ರ 3:10-12). ಆದಾಮ ಮತ್ತು ಹವ್ವಳರ ಪಾಪದ ದೆಸೆಯಿಂದ ಭೂಮಿಯ ಮೇಲೆ ಬರಲಾದ ಶಾಪವನ್ನು (ಆದಿಕಾಂಡ 3:17) ಯೇಸು ಸಂಧಾನಪಡಿಸುವವನಾಗಿರುವದಿಲ್ಲ.

Carson ಗಮನಕ್ಕೆ ತರುವದೇನೆಂದರೆ ಪೌಲನು ಫಿಲಿಪ್ಪಿ 2:10ರಲ್ಲಿ ಮಾಡುವ ಪ್ರಕಾರ "ಪಾತಾಳಗಳಲ್ಲಿರುವ" ಎಂಬುದನ್ನು ಸೇರ್ಪಡೆಗೊಳಿಸುವದಿಲ್ಲ. "ಪಾತಾಳದಲ್ಲಿ" ಎಂಬುದರ ಅರ್ಥವು ದುರಾತ್ಮ ಸೇನೆಗಳು ಎಂದಾಗಿರುತ್ತದೆ. ಆತನು ಇದನ್ನು ಸೇರ್ಪಡೆಗೊಳಿಸಿದ್ದಲ್ಲಿ, ಯೇಸುವು ಸೈತಾನನಿಗೂ ಆತನ ದುರಾತ್ಮ ದೂತರಿಗೂ, ಮತ್ತು ದುಷ್ಕೃತ್ಯ ನಡಿಸುವವರಿಗೆಲ್ಲಾ ಸಂಧಾನವನ್ನು ಒದಗಿಸಿದ್ದಾನೆಂದು ಪೌಲನು ಬೋಧಿಸುವವನಾಗಿರುತ್ತಿದ್ದನು.

ಒಂದು ಒಪ್ಪುವಂತೆ ತೋರುವ ಮುಕ್ತಾಯವೇನೆಂದರೆ ಪೌಲನ ತಾತ್ಪರ್ಯವು ಯೇಸು ಭೂಮಿಯ ಮೇಲೆ ಇರುವವರಿಗಾಗಿ ಮತ್ತು ಆತನ ಶಿಲುಬೆಗೇರಿಸಲ್ಪಡುವಿಕೆ ಮುಂಚೆ ಸತ್ತವರಿಗಾಗಿ ಸಹ ಸಂಧಾನವನ್ನು ಸಾಧ್ಯವಾಗಿಸಿದನು ಎಂಬದೆ. ಅವರ ಜೀವಿತಕಾಲದಲ್ಲಿ, ಅವರು ದೇವರ ಚಿತ್ತವನ್ನು ಮಾಡುವದಕ್ಕೆ ಪ್ರಯತ್ನಿಸಿದ್ದವರು ಆದರೆ ಯೇಸುವಿನ ಮರಣದ ಮೂಲಕ ಸಂಧಾನವು ಸಾಧ್ಯವಾಗಿರುಸುವದಕ್ಕೆ ಮುಂಚೆ, ಅವರು ಈಗಾಗಲೇ ಮರಣಿಸಿದ್ದರು ಮತ್ತು ಭೂಮಿಯ ಹೊರಗೆ ಆಕಾಶ ಮಂಡಲದಲ್ಲಿ, ಪಾತಾಳಲೋಕದಲ್ಲಿದ್ದರು. ಆತನ ಯಜ್ಞದ ಮುಖಾಂತರ ಅವರು ದೇವರೊಂದಿಗೆ ಸಂಧಾನಗೊಳಿಸಲ್ಪಟ್ಟರು (ನೋಡಿರಿ ರೋಮಾ 3:25; ಇಬ್ರಿಯ 9:15). ಪೇತ್ರನು ದಾವೀದನ ಕುರಿತು ಹೇಳಿದ ಹಾಗೆಯೇ (ಅಪೊಸ್ತಲರ ಕೃತ್ಯಗಳು 2:34), ಇವರು ಇನ್ನೂ ಪರಲೋಕದಲ್ಲಿ ದೇವರ ಸಂಗಡ ಇದ್ದಿರಲಿಲ್ಲ. ಹೇಗೂ, ಭೂಮಂಡಲದ ಹೊರಗೆ ಇದ್ದರಾದ್ದರಿಂದ, ಅವರು ಆಕಾಶಮಂಡಲಗಳಲ್ಲಿರುವವರು ಎಂಬದಾಗಿ ಕರೆಯಲ್ಪಡಬಹುದು (ಎಫೆಸ 6:12).

ಪೌಲನು ಗ್ರೀಕ್‌ನ ಎರಡು ಬೇರೆ ಬೇರೆ ಉಪಸರ್ಗಗಳನ್ನು ಬಳಸುವ ಮೂಲಕ ಸ್ಥಳಗಳ ನಡುವೆ ವ್ಯತ್ಯಾಸವನ್ನು ಮಾಡಿರಬಹುದಾಗಿದೆ: ಭೂಮಿಯ ಮೇಲಿರುವವರನ್ನು ಸೂಚಿಸಲು *epi* ("ಮೇಲೆ"), ಮತ್ತು ಪರಲೋಕದಲ್ಲಿರುವವರನ್ನು ಸೂಚಿಸಲು *en* ("ದಲ್ಲಿ"). ಪೌಲನು ಭೂಮಿಯೇ ಸಂಧಾನಪಡಿಸಲ್ಪಡುವದಾಗಿ ಸೂಚಿಸುವವನಾಗಿರಲಿಲ್ಲ, ಆದರೆ "ಭೂಮಿಯ ಮೇಲೆ" ಜೀವಿಸುವ ಜನರನ್ನು ಸೂಚಿಸಿದನು. ಆತನು ಸ್ವತಃ ಪರಲೋಕ ಎಂಬ ಅರ್ಥದಲ್ಲಿ ಹೇಳಲಿಲ್ಲ, ಆದರೆ ಆಕಾಶಮಂಡಲಗಳಲ್ಲಿ ಇರುವವರೆಂಬ ಅರ್ಥದಲ್ಲಿ ಹೇಳಿದನು – ಅಂದರೆ. ಪಾತಾಳದಲ್ಲಿ, ಅದೊಂದು ಭೂಮಂಡಲದ ಹೊರಗಿನ ಸ್ಥಳವಾಗಿದೆ ಆದರೆ ದೇವರು ನಿವಾಸಿಸುವ ಪರಲೋಕ ಮಂಡಲದಲ್ಲಿರುವ ಸ್ಥಳವಲ್ಲ.

ಕೆಲವು ವೇದ ಪಂಡಿತರು 15ರಿಂದ 20 ವಚನಗಳನ್ನು ಯೇಸುವಿನ ಕುರಿತಾದ ಒಂದು "ಸ್ತುತಿಗೀತೆ" ಎಂದು ಪರಿಗಣಿಸುತ್ತಾರೆ, ಆದರೆ ಅವರು ಅದರ ಪದವಿನ್ಯಾಸದ ವಿಷಯದಲ್ಲಿ ವ್ಯಾಪಕವಾದ ಭಿನ್ನಾಭಿಪ್ರಾಯ ಹೊಂದಿರುತ್ತಾರೆ. ಅದೊಂದು ಸ್ತುತಿಗೀತೆಯಾಗಿ ಬಳಕೆಗೆ ಬಂದಿತ್ತೋ ಅಥವಾ ಇಲ್ಲವೋ, ಈ ವಿಭಾಗವು ಪೌಲನ ಮುಂದಿನ ಮಾತುಗಳಿಗೆ ಅಸ್ತಿವಾರವನ್ನು ಹಾಕಿರುತ್ತದೆ.

ಯೇಸುವಿನ ಸರ್ವೋಚ್ಚ ಗುಣಗಳ ಮಹತ್ವಪೂರ್ಣತೆಯನ್ನು Hay ವಿವರಿಸುತ್ತಾನೆ:

> *ಮಗನನ್ನು ಪ್ರತಿರೂಪ ಎಂದು ಬಣ್ಣಿಸುವಿಕೆಯು* (15a) ಕ್ರೈಸ್ತರು ತಮ್ಮ ಸೃಷ್ಟಿಕರ್ತನ ಸ್ವರೂಪವಾಗಿದ್ದಾರೆ ಎಂಬ ಹೇಳಿಕೆಗಾಗಿ ಸಿದ್ಧತೆಯನ್ನು ಮಾಡುತ್ತದೆ (3:10, 11). ಆತನು ಸಭೆಯ ಶಿರಸ್ಸು ಎಂದು ಹೇಳುವಿಕೆಯು (1:18) 2:10, 19ರಲ್ಲಿ ಇನ್ನಷ್ಟು ವಿವರಿಸಲ್ಪಟ್ಟಿದೆ. ಎಲ್ಲಾದರಲ್ಲಿಯೂ ಮಗನು ಪ್ರಮುಖನು ಎಂಬ ಹೇಳಿಕೆಯು (1:18) 1:28; 2:3, 6-7, 17, 19; 3:3, 11; 4:1ರಲ್ಲಿ ಅದೇ ರೀತಿಯ ಘೋಷಣೆಗಳಿಗೆ ಮತ್ತು ಎಚ್ಚರಿಕೆಗಳಿಗೆ ದಾರಿಯನ್ನು ಸಿದ್ಧಗೊಳಿಸುತ್ತದೆ. ಕ್ರಿಸ್ತನ ಮರಣವು ರಕ್ಷಣೆಗೆ ಮೂಲ ಎಂಬ ಕುರಿತಾಗಿ ಒತ್ತಿ ಹೇಳುವಿಕೆಯು 1:20ನ್ನು 1:14, 22; 2:11-15; ಮತ್ತು 3:13 ರೊಂದಿಗೆ ಜೋಡಿಸುತ್ತದೆ. ಸಭೆಯು ಕ್ರಿಸ್ತನ ದೇಹ ಎಂಬ ಆಲೋಚನೆಯು 1:24 ಮತ್ತು 2:19ರಲ್ಲಿ ಪುನಃ ಕಾಣಿಸಿಕೊಳ್ಳುತ್ತದೆ. ಕ್ರಿಸ್ತನೊಂದಿಗೆ ಮರಣಿಸುವದು ಮತ್ತು ಎಬ್ಬಿಸಲ್ಪಡುವದರ ಕುರಿತ ಸಮರ್ಥನೆಯು (2:12-13, 20; 3:1, 5) "ಸತ್ತವರೊಳಗಿಂದ ಮೊದಲು ಎದ್ದು ಬಂದವನು" ಎಂಬುದರ ಅರ್ಥವನ್ನು ಸ್ಪಷ್ಟಗೊಳಿಸುತ್ತದೆ (1:18a). 16ನೇ ವಚನದಲ್ಲಿ ದೇವದೂತ ಸಂಬಂಧಿತ ಅಧಿಕಾರಗಳ ಉಲ್ಲೇಖವು 2:8, 15, 18, ಮತ್ತು 20 ವಚನಗಳಲ್ಲಿ ಅತಿಮಾನುಷ ಜೀವಿಗಳ ಉಲ್ಲೇಖಿಸುವದರಲ್ಲಿ ಪ್ರತಿಧ್ವನಿಸುತ್ತದೆ. 1:15-20 ವಚನಗಳಲ್ಲೆಲ್ಲಾ ಒತ್ತಿ ಹೇಳಲ್ಪಟ್ಟಿರುವ ಮಗನ ಸರ್ವವ್ಯಾಪಿ ಮಹತ್ವಪೂರ್ಣತೆಯು, ಸುವಾರ್ತೆ ಏಕೆ ಎಲ್ಲೆಡೆಯಲ್ಲಿಯೂ ಸಾರಲ್ಪಡುತ್ತದೆಂಬದನ್ನು ವಿವರಿಸುತ್ತದೆ (1:6, 23, 27-28; 3:11; 4:3-6). ಅಂತಿಮವಾಗಿ ಲೋಕವು ಮಗನ ಮುಖಾಂತರ ಸೃಷ್ಟಿಸಲ್ಪಟ್ಟ ದೇವರ ಸೃಷ್ಟಿ ಎಂಬ ಸಕಾರಾತ್ಮಕ ದೃಷ್ಟಿಕೋನವು 2:16-23ರಲ್ಲಿರುವ ಸುಳ್ಳು ಬೋಧಕರ ಕಠೋರ ವೈರಾಗ್ಯದ ವಿರುದ್ಧ ಎಚ್ಚರಿಕೆಯಾಗುತ್ತದೆ ಮತ್ತು 3:5-4:6ರಲ್ಲಿ ಲೋಕದಲ್ಲಿನ ಜೀವನದ ಕುರಿತು ಸಕಾರಾತ್ಮಕ ಬೋಧನೆಯಾಗುತ್ತದೆ.[24]

# ಅನ್ವಯಿಸುವಿಕೆ

## ಕ್ರಿಸ್ತನ ಶ್ರೇಷ್ಠತೆ (1:15-19)

ಪೌಲನು ಕ್ರಿಸ್ತನ ಅಧಿಕಾರ ಮತ್ತು ಸ್ವಭಾವದ ಕುರಿತು ಹೇಳುವ ಮೂಲಕ ಆತನ ಶ್ರೇಷ್ಠತೆಯ ಬಗ್ಗೆ ಬಣ್ಣಿಸುತ್ತಾನೆ. ಕೊಲೊಸ್ಸೆಯವರನ್ನು ಕ್ರಿಸ್ತನಿಗೆ ನಿಷ್ಠೆಯುಳ್ಳವರಾಗಿರುವಂತೆ ಪ್ರೋತ್ಸಾಹಗೊಳಿಸುವದಕ್ಕಾಗಿ ಆತನು ಈ ಮಾಹಿತಿಯನ್ನು ಮುಂದಿಡುತ್ತಾನೆ. ಕ್ರಿಸ್ತನ ಶ್ರೇಷ್ಠತೆಯ ಚರ್ಚೆಯನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಬಹುದಾಗಿದೆ: ಆತನು ಹೇಗಿರುತ್ತಾನೆ, ಆತನು ಏನು ಮಾಡಿದ್ದಾನೆ ಮತ್ತು ಮಾಡುತ್ತಿದ್ದಾನೆ, ಆತನ ಸ್ಥಾನ, ಮತ್ತು ಆತನಿಗಿರುವ ಅಧಿಕಾರದ ಸರ್ವೋಚ್ಚ ಸ್ಥಾನ.

1. *ಕ್ರಿಸ್ತನು ಹೇಗಿರುತ್ತಾನೆ.* ಆತನು ದೇವರ ಪ್ರತಿರೂಪನಾಗಿದ್ದಾನೆ (ನೋಡಿರಿ 2 ಕೊರಿಂಥ 4:4). ದೇವರ ಮಹಿಮೆಯನ್ನು ತೋರ್ಪಡಿಸುವದಕ್ಕೆ ಮತ್ತು ಆತನು ಹೇಗಿದ್ದಾನೆಂಬುದನ್ನು ಪ್ರಕಟಗೊಳಿಸುವದಕ್ಕೆ ಯೇಸುವು ಲೋಕವನ್ನು ಪ್ರವೇಶಿಸಿದನು (ಯೋಹಾನ 1:14, 18). ಆತನು ಅಪೊಸ್ತಲರಿಗೆ ತನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆಂದು ಹೇಳಿದನು (ಯೋಹಾನ 12:45; 14:9). ಇದಕ್ಕೆ ಕಾರಣವು ತಂದೆಯು ಯೇಸುವಿನಲ್ಲಿ ಮತ್ತು ಯೇಸು ತಂದೆಯಲ್ಲಿ ಇರುವದೇ ಆಗಿದೆ (ಯೋಹಾನ 10:38; 14:10,

11; 17:21).

ದೇವರನ್ನು ಯಾವ ಕಾಲದಲ್ಲೂ ಯಾರೊಬ್ಬರೂ ಕಂಡಿಲ್ಲ (ಯೋಹಾನ 1:18), ಯಾಕೆಂದರೆ ಆತನು "ಅಗಮ್ಯವಾದ ಬೆಳಕಿನಲ್ಲಿ ವಾಸಿಸುವವನೂ ಆಗಿದ್ದಾನೆ; ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ" (1 ತಿಮೊಥೆ 6:16). ದೇವರನ್ನು ನೋಡುವದಕ್ಕೆ ಸಾಧ್ಯವಿಲ್ಲದ್ದರಿಂದ, ಆತನು ತನ್ನನ್ನು ಯೇಸುವಿನ ಮೂಲಕ ಪ್ರಕಟಿಸಿಕೊಂಡಿದ್ದಾನೆ, ಆತನು ಎಲ್ಲಾ ವಿಧದಲ್ಲಿಯೂ ತಂದೆಯಂತೆ ಇದ್ದಾನೆ (ಇಬ್ರಿಯ 1:3).

ದೇವರು ತನ್ನನ್ನು ತನ್ನ ಸೃಷ್ಟಿಯ ಮೂಲಕ ಪ್ರಕಟ ಪಡಿಸಿಕೊಂಡಿದ್ದಾನೆ, ಅದು ಆತನ ಶಕ್ತಿ ಮತ್ತು ಮಹಿಮೆಯು ಎಷ್ಟು ದೊಡ್ಡದು ಎಂಬದನ್ನು ತೋರ್ಪಡಿಸುತ್ತದೆ (ಕೀರ್ತನೆ 19:1; ರೋಮಾ 1:20). ಹೇಗೂ, ಇದೊಂದೇ ದೇವರ ಇಡೀ ಗುಣಸ್ವಭಾವವನ್ನು ತಿಳಿಯಪಡಿಸುವದಿಲ್ಲ. ನಾವು ಯೇಸುವಿನ ಸ್ವಭಾವದ ಜ್ಞಾನವನ್ನು ಪಡೆಯುವ ಮೂಲಕ ದೇವರ ಸ್ವಭಾವದ ಕುರಿತಾಗಿ ಕಲಿತುಕೊಳ್ಳಬಹುದಾಗಿದೆ.

ದೇವರನ್ನು ತಿಳಿಯುವದು ನಾವು ಪಡೆಯಬಹುದಾದ ಅತ್ಯಂಥ ಪ್ರಾಮುಖ್ಯ ಜ್ಞಾನವಾಗಿರುತ್ತದೆ. ನಾವು ಆತನನ್ನು ತಿಳಿದುಕೊಳ್ಳುವದರ ಮೇಲೆಯೇ ನಮ್ಮ ನಿತ್ಯಜೀವವು ಅವಲಂಭಿತವಾಗಿರುತ್ತದೆ (ಯೋಹಾನ 17:3). ನಾವು ಆತನನ್ನು ತಿಳಿದುಕೊಳ್ಳುವಾಗ ಆತನಿಗೆ ವಿಧೇಯರಾಗುವಂತೆಯೂ ಪಾಪದಿಂದ ದೂರವಿರುವಂತೆಯೂ ಪ್ರೇರಣೆಗೊಳಿಸಲ್ಪಡುತ್ತೇವೆ (1 ಯೋಹಾನ 2:3–5; 3:6). ದೇವರನ್ನು ತಿಳಿಯುವದರಲ್ಲಿಯೇ ಮಾನವ ಅಸ್ತಿತ್ವವು ಉಚ್ಛ್ರಾಯ ಸ್ಥಿತಿಯನ್ನು ತಲುಪುತ್ತದೆ (ಯೆರೆಮೀಯ 9:23, 24). ಯೇಸುವು ದೇವರ ಸ್ವಭಾವವನ್ನೇ ಹೊಂದಿದವನಾದ್ದರಿಂದ, ನಾವು ತಂದೆಗೆ ಕೊಡುವ ಗೌರವವನ್ನೇ ಆತನಿಗೂ ಕೊಡತಕ್ಕದ್ದು (ಯೋಹಾನ 5:23).

2. *ಯೇಸು ಏನು ಮಾಡಿದ್ದಾನೆ ಮತ್ತು ಮಾಡುತ್ತಿದ್ದಾನೆ.* ಯೇಸುವನ್ನು ಸಮಸ್ತವನ್ನು ಸೃಷ್ಟಿಸಿದವನೆಂಬ ಭಯಭಕ್ತಿಯಿಂದ ಕಾಣತಕ್ಕದ್ದು. ಆತನು ಆದಿಯಲ್ಲಿ ತಂದೆಯ ಸಂಗಡ ಇದ್ದನು ಮತ್ತು ತಂದೆಯ ದೈವಿಕ ಸ್ವಭಾವವನ್ನು ಹೊಂದಿದವನು. ಯೇಸುವು ಸಮಸ್ತವನ್ನು ಸೃಷ್ಟಿಸಿದನು ಎಂಬದಾಗಿ ಪ್ರಕಟಗೊಳಿಸುವ ಮೂಲಕ ಯೋಹಾನನು ತನ್ನ ಸುವಾರ್ತೆಯನ್ನು ಆರಂಭಿಸುತ್ತಾನೆ.

ಆತನು ಆದಿಸಂಭೂತನು ಎಂದು ಹೇಳುವ ಮೂಲಕ (ವ. 18), ಯೇಸುವು ಸೃಷ್ಟಿಸಲ್ಪಟ್ಟವನು ಎಂಬದಾಗಿ ಪೌಲನು ಹೇಳಲಿಲ್ಲ; ಬದಲಾಗಿ, ಆದಿಯನ್ನು ಕಾರ್ಯೋನ್ಮುಖಗೊಳಿಸಿದವನೇ ಆತನು ಎಂಬದಾಗಿ ಬೋಧಿಸುತ್ತಿದ್ದಾನೆ. ಆತನು ಸೃಷ್ಟಿಯ ಮೂಲನು, ಆದಿಸಂಭೂತನು ಆಗಿದ್ದಾನೆ. ಯೇಸುವು ಆದಿಯಲ್ಲಿ ಸೃಷ್ಟಿಸಲ್ಪಟ್ಟವರಲ್ಲಿ ಮೊದಲಿಗನಾಗಿರಲಿಲ್ಲ, ಯಾಕೆಂದರೆ ಆತನು ಎಲ್ಲಕ್ಕೂ ಮೊದಲು ಇದ್ದವನು, ಸಮಸ್ತವನ್ನು ಸೃಷ್ಟಿಸಿದವನು, ಮತ್ತು ಆದಿಯು ಸಂಭವಿಸಿದಾಗ ಆತನು ತಂದೆಯ ಬಳಿಯಲ್ಲಿದ್ದನು.

ಆತನು ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೂ ಆಧಾರಭೂತನಾಗಿದ್ದಾನೆ (ಇಬ್ರಿಯ 1:3). ಆತನು ಯಾವ ವಾಕ್ಯದಿಂದ ಸಮಸ್ತವನ್ನು ಸೃಷ್ಟಿಸಿದನೋ ಅದೇ ವಾಕ್ಯದಿಂದಲೇ ಸಮಸ್ತಕ್ಕೆ ಆಧಾರಭೂತನಾಗಿದ್ದಾನೆ. ಆತನ ಮಾತು ನಾಶನದ ದಿನದ ವರೆಗೆ ವಿಶ್ವವನ್ನು ಸಂರಕ್ಷಿಸಿಡುತ್ತದೆ (2 ಪೇತ್ರ 3:5–7).

ಯೇಸುವು ತನ್ನ ವಾಕ್ಯದ ಮೂಲಕ ಸಮಸ್ತವನ್ನು ಸೃಷ್ಟಿಸುವ ಮೂಲಕ ಅದರ

ಶಕ್ತಿಯನ್ನು ತೋರ್ಪಡಿಸಿದ್ದಾನೆ (ಇಬ್ರಿಯ 4:12). ಇದರ ಆಧಾರದಲ್ಲಿ, ನಾವು ಆತನ ವಾಕ್ಯದಲ್ಲಿ ಭರವಸೆ ಹೊಂದಬಹುದಾಗಿದೆ. ತಾನು ಏನು ಮಾಡುವೆನೆಂದು ಹೇಳಿದ್ದಾನೋ ಅದನ್ನು ಆತನು ಮಾಡಲು ಶಕ್ತನು. ಆತನ ವಾಕ್ಯದ ಮೂಲಕ ನಾವು ರಕ್ಷಿಸಲ್ಪಡಬಲ್ಲೆವು (ಯಾಕೋಬ 1:21) ಮತ್ತು ರಕ್ಷಣೆಯ ಮೂಲಕ ಬರಬಲ್ಲಂಥ ಎಲ್ಲಾ ಆಶೀರ್ವಾದಗಳನ್ನು ಹೊಂದಿಕೊಳ್ಳಬಹುದು.

3. *ಯೇಸುವಿನ ಸ್ಥಾನ*. ಸಮಸ್ತವೂ ಆತನಿಗೋಸ್ಕರ ಸೃಷ್ಟಿಸಲ್ಪಟ್ಟಿತು. ಕ್ರಿಸ್ತನು ಉನ್ನತ್ತಕ್ಕೇರಿಸಲ್ಪಡುವದನ್ನು ತಂದೆಯು ಬಯಸಿದನು, ಅದು ಜಗದುತ್ಪತ್ತಿಗೆ ಮುಂಚೆ ಯೋಜನೆ ಮಾಡಲ್ಪಟ್ಟದ್ದಾಗಿತ್ತು (ಅಪೊಸ್ತಲರ ಕೃತ್ಯಗಳು 2:23; ಎಫೆಸ 1:4; 1 ಪೇತ್ರ 1:19, 20). ಈ ಸಂಭವದ ಮೂಲಕ ಯೇಸುವು ಮಹಿಮೆ ಹೊಂದುವದಕ್ಕಿದ್ದನು. ಇತರ ಎಲ್ಲರಿಗಿಂತ ಉನ್ನತವಾಗಿ ಆತನು ಘನತೆಯನ್ನು ಹೊಂದುವದು ಮಾನವರ ರಕ್ಷಣೆಗಾಗಿ ಆತನು ಮರಣ ಹೊಂದುವ ಮೂಲಕ ಸಂಭವಿಸಬೇಕೆಂಬದು ಮೊದಲೇ ನಿರ್ಧರಿಸಲ್ಪಟ್ಟದ್ದಾಗಿತ್ತು (ಫಿಲಿಪ್ಪಿ 2:8–11).

ನಾವು ಇರುವದು ಯೇಸುವಿಗೋಸ್ಕರವೇ ಹೊರತು ನಮಗೋಸ್ಕರವಲ್ಲ. ನಮ್ಮ ಜೀವಿತದ ಉದ್ದೇಶವು ಆತನನ್ನು ಸ್ತುತಿಸುವದು, ಗೌರವಿಸುವದು, ಮತ್ತು ಸೇವೆ ಮಾಡುವದು. ನಾವು ಆತನ ಮಹಿಮೆಗೋಸ್ಕರ ಸೃಷ್ಟಿಸಲ್ಪಟ್ಟೆವು. ಯೇಸುವು ಜೀವಿಸಿದ ರೀತಿಯಲ್ಲಿ ಜೀವಿಸುವವರಾಗಿ, ನಮ್ಮ ಮಾದರಿಗಳ ಮೂಲಕ (1 ಯೋಹಾನ 2:6), ಇತರರಿಗೆ ನಾವು ಆತನ ಸ್ವಭಾವದ ಸೌಂದರ್ಯವನ್ನು ತೋರ್ಪಡಿಸುತ್ತೇವೆ.

ಆತನು ಸಮಸ್ತಕ್ಕೂ ಮುಂಚೆ ಇದ್ದವನು. ಆತನು ಆದಿಯಲ್ಲಿ, ಅನಾದಿಕಾಲದಿಂದಲೂ ತಂದೆಯ ಜೊತೆಯಲ್ಲಿ ಇದ್ದವನು (ಮೀಕ 5:2). ಒಂದು ಜೀವಿಯು ಆದಿ ಅಥವಾ ಅಂತ್ಯವಿಲ್ಲದೆ ಇರಬಹುದು ಎಂಬ ಭಾವನೆಯು ನಮ್ಮ ಗ್ರಹಿಕೆಯನ್ನು ಮೀರಿದ್ದಾಗಿರುತ್ತದೆ. ನಾವು ನೋಡುವ ಎಲ್ಲವೂ ಸದಾಕಾಲದಿಂದ ಅಸ್ತಿತ್ವದಲ್ಲಿರಲಿಲ್ಲ, ಶಾಶ್ವತವಾಗಿ ಇರುವದೂ ಇಲ್ಲ.

ಯೇಸುವು ಅದೃಶ್ಯವಾದ ಪರಲೋಕ ಮಂಡಲದಲ್ಲಿರುತ್ತಾನೆ (2 ಕೊರಿಂಥ 5:1). ನಾವು ನಮ್ಮ ನಿತ್ಯಜೀವಕ್ಕಾಗಿ ಆತನ ಮೇಲೆ ಅವಲಂಭಿತರಾಗಬಹುದು ಯಾಕೆಂದರೆ ಆತನು ನಿತ್ಯನಾದವನು. ಕ್ರಿಸ್ತನಲ್ಲಿರುವವರಿಗೆ ನಿತ್ಯಜೀವವು ಲಭ್ಯವಿರುತ್ತದೆ (ಯೋಹಾನ 3:36; 1 ಯೋಹಾನ 5:11, 12). ನಾವು ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ ಆತನಲ್ಲಿ ಸೇರಿಕೊಳ್ಳುತ್ತೇವೆ (ರೋಮಾ 6:3; ಗಲಾತ್ಯ 3:27).

ಆತನಲ್ಲಿ ಸರ್ವಸಂಪೂರ್ಣತೆಯು ವಾಸ ಮಾಡುತ್ತದೆ. ಆತನೇ ಬರಲಿರುವ ಜೀವವನ್ನು ಒದಗಿಸಬಲ್ಲನು ಮತ್ತು ಈಗಿನ ಕಾಲದಲ್ಲಿ ಸಮೃದ್ಧಿಯಾದ ಜೀವವನ್ನು ಕೊಡಬಲ್ಲನು (ಯೋಹಾನ 10:10). ವಿಶ್ವದಲ್ಲೆಲ್ಲಾ, ಎಲ್ಲರೂ ಆತನ ಮೇಲೆ ಆಧಾರವಾಗಿದ್ದಾರೆ. ಈ ಕಾರಣಕ್ಕಾಗಿ ನಾವು ಆತನಲ್ಲಿ ನೆಲೆಗೊಳ್ಳಬೇಕು ಮತ್ತು ನಮ್ಮ ಜೀವಿತಗಳಲ್ಲಿ ಆತನ ರಾಜ್ಯಕ್ಕೆ ಆದ್ಯತೆ ಕೊಡುವ ಮೂಲಕ, ಆತನ ಸೇವೆ ಮಾಡಬೇಕು (ಮತ್ತಾಯ 6:33).

4. ಯೇಸುವಿನ ಅಧಿಕಾರದ ಸರ್ವೋಚ್ಛ ಸ್ಥಾನ. ಆತನು ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನು ಮತ್ತು ಎಲ್ಲಾದರಲ್ಲಿಯೂ ಪ್ರಮುಖನಾಗುವಂತೆ, ಸತ್ತವರೊಳಗಿಂದ ಮೊದಲು ಎದ್ದು ಬಂದವನು. ಯೆಹೂದಿ ಕುಟುಂಬದಲ್ಲಿ ಜ್ಯೇಷ್ಠಪುತ್ರನಿಗೆ ಗೌರವದ ಅತ್ಯುನ್ನತ ಸ್ಥಾನವನ್ನು

ಕೊಡಲಾಗುತ್ತಿತ್ತು. ಸೃಷ್ಟಿಸಲ್ಪಟ್ಟ ಸಮಸ್ತಕ್ಕೆ ಸಂಬಂಧ ಪಟ್ಟಂತೆ ಕ್ರಿಸ್ತನಿಗೆ ಆ ಸ್ಥಾನ ಇರುತ್ತದೆ. ತಂದೆಯು ಮಾತ್ರವೇ ಆತನ ಅಧೀನಕ್ಕೊಳಪಟ್ಟವನಲ್ಲ (1 ಕೊರಿಂಥ 15:27). ಮಿಕ್ಕ ವಿಶ್ವವೆಲ್ಲವೂ ಆತನಿಗೆ ಅಧೀನಪಡಿಸಲ್ಪಟ್ಟಿದೆ.

ಆತನು ಒಮ್ಮೆ ಸತ್ತವನಾಗಿದ್ದನಾದರೂ, ಈಗ ಜೀವಿಸುವವನಾಗಿದ್ದಾನೆ; ಯಾಕೆಂದರೆ ಆತನು ಮರಣವನ್ನು ಜಯಿಸಿದ್ದಾನೆ. ಆತನು ಸತ್ತವರೆಲ್ಲರ ಮೇಲೆ ಸರ್ವೋಚ್ಚ ಸ್ಥಾನವನ್ನು ಹೊಂದಿದ್ದಾನೆ, ಹೀಗೆ ಆತನು ಪ್ರಮುಖ ಸ್ಥಾನವನ್ನು ಹೊಂದಿದವನಾದನು. ಇದೇ ಸತ್ಯವನ್ನು ಪೌಲನು ಕಲಿಸಿದನು, ಏನೆಂದರೆ ಆತನ ಪುನರುತ್ಥಾನ ಮತ್ತು ಪರಲೋಕಾರೋಹಣಗಳ ಮೂಲಕ ಆತನು ಸಮಸ್ತದ ಮೇಲೆ ಇಡಲ್ಪಟ್ಟನು ಮತ್ತು ಎಲ್ಲವೂ ಆತನಿಗೆ ಅಧೀನಪಡಿಸಲ್ಪಟ್ಟಿತು ಎಂಬದೆ.

ಮರಣವು ಆತನನ್ನು ಹಿಡಿದಿಟ್ಟುಕೊಳ್ಳಲಾಗಲಿಲ್ಲ (ಅಪೊಸ್ತಲರ ಕೃತ್ಯಗಳು 2:24). ಆತನಿಗೆ ತನ್ನ ಪ್ರಾಣವನ್ನು ಕೊಡುವದಕ್ಕೂ ಅದನ್ನು ಪುನಃ ಜೀವಿತವಾಗಿ ಎಬ್ಬಿಸುವದಕ್ಕೆ ಅಧಿಕಾರವಿತ್ತು (ಯೋಹಾನ 10:18). ಆತನ ಪುನರುತ್ಥಾನದ ಮೂಲಕ ತನಗೆ ಸತ್ತವರನ್ನು ಜೀವಿತರಾಗಿ ಎಬ್ಬಿಸುವ ಅಧಿಕಾರ ಹೊಂದಿದ್ದಾನೆಂಬ ಭರವಸೆಯನ್ನು ನಮಗೆ ನೀಡಿರುತ್ತಾನೆ.

ಯೇಸುವಿನ ಅಧಿಕಾರಕ್ಕೆ ಯಾವ ಮನುಷ್ಯ ಅಧಿಕಾರವು ಪೈಪೋಟಿ ನಡಿಸಲಾರದು. ನಾವು ಆತನಿಗೆ ನಮ್ಮ ಕರ್ತನು ಮತ್ತು ಒಡೆಯನಾಗಿ ಗೌರವ ಸಲ್ಲಿಸಬೇಕು ಹಾಗೂ ಆತನಿಗೆ ವಿಧೇಯರಾಗಬೇಕು, ಯಾಕೆಂದರೆ ಯಾವ ದೇವದೂತನಾಗಲಿ ಅಥವಾ ಮನುಷ್ಯನಾಗಲಿ ಆತನಿಗೆ ಪ್ರತಿಸ್ಪರ್ಧಿಯಾಗಲಾರನು. ಕ್ರಿಸ್ತನು ತನ್ನ ಪ್ರೇರಿತ ಪ್ರತಿನಿಧಿಗಳ ಮೂಲಕ ಕೊಟ್ಟಿರುವ ಪ್ರಕಟನೆಗೆ ವಿರುದ್ಧವಾದ ಕಾರ್ಯಗಳನ್ನು ಯಾವನಾದರೂ ಬೋಧಿಸುವದಾದರೆ, ಆ ವ್ಯಕ್ತಿಯ ಮೇಲೆ ಪರಲೋಕದಿಂದ ಶಾಪವು ನೆಲೆಯಾಗಿರುವದು (ಗಲಾತ್ಯ 1:8, 9).

ಕ್ರಿಸ್ತನು ಸಭೆಯೆಂಬ ದೇಹಕ್ಕೆ ಶಿರಸ್ಸಾಗಿದ್ದಾನೆ. ಆತನು ಯಾರಾಗಿದ್ದಾನೆಂಬ ಕಾರಣಕ್ಕಾಗಿ, ಸಭೆಯು ಆತನಿಗೆ ಶಿರಸ್ಸೆಂದು ಗೌರವ ಸಲ್ಲಿಸತಕ್ಕದ್ದು. ಮಾನವ ಶಿರಸ್ಸಿಗೆ ಮಾನವ ದೇಹದೊಂದಿಗಿರುವ ಸಂಬಂಧವು ಸಭೆಯೊಂದಿಗೆ ಯೇಸುವಿಗಿರುವ ಸಂಬಂಧವನ್ನು ತೋರ್ಪಡಿಸುತ್ತದೆ. ಆತನ ಸಭೆಯೆಂಬ ಕ್ರಿಸ್ತನ ದೇಹದ ಅಂಗಗಳಾಗಿರುವ ನಾವು, ಆತನಿಗೆ ನಮ್ಮ ಆತ್ಮೀಕ ಶಿರಸ್ಸೆಂದು ಅಧೀನರಾಗತಕ್ಕದ್ದು (ಎಫೆಸ 5:24). ನಾವು ಯೇಸುವಿಗೆ ತೋರಿಸುವ ಅದೇ ಗೌರವವನ್ನು ಬೇರೆ ಯಾವದೇ ವ್ಯಕ್ತಿಗಾಗಲಿ ಅಥವಾ ಗುಂಪಿಗಾಗಲಿ ತೋರಿಸತಕ್ಕದ್ದಲ್ಲ. ಯೇಸುವು ಮಾತ್ರವೇ ನಮ್ಮ ಶಿರಸ್ಸು ಎಂಬದಾಗಿ ಅಂಗೀಕರಿಸಲ್ಪಡತಕ್ಕದ್ದು.

ಸಾರಾಂಶದಲ್ಲಿ, ಕ್ರಿಸ್ತನು ದೇವರ ಪ್ರತಿರೂಪನು, ಆತನ ಮೂಲಕವಾಗಿಯೂ ಆತನಿಗೋಸ್ಕರವಾಗಿಯೂ ಸಮಸ್ತವು ಸೃಷ್ಟಿಸಲ್ಪಟ್ಟಿತು, ಮತ್ತು ಆತನು ಅಧೀಕಾರದ ಒಂದು ಸರ್ವೋಚ್ಚ ಸ್ಥಾನವನ್ನು ನಿರ್ವಹಿಸುವವನಾಗಿದ್ದಾನೆ. ಇದರ ನಿಮಿತ್ತವಾಗಿ ನಾವು ಆತನನ್ನು ಗೌರವಿಸತಕ್ಕದ್ದು, ಆತನನ್ನು ತಿಳಿದುಕೊಳ್ಳತಕ್ಕದ್ದು, ಮತ್ತು ಆತನ ಶಕ್ತಿಯಲ್ಲಿ ಭರವಸೆಯಿಡತಕ್ಕದ್ದು.

### ಕ್ರಿಸ್ತನ ಗುಣಗಳು (1:15, 17-19)

ಯೇಸುವಿಗೆ ವಿಶ್ವದಲ್ಲಿರುವ ಸ್ಥಾನದ ಸುತ್ತ ನಮ್ಮ ಜೀವಿತಗಳು ಕಟ್ಟಲ್ಪಡಬೇಕು. ಇದು ನಮ್ಮ ಆಲೋಚನೆಯ ಮೇಲೆ ಮಾತ್ರವಲ್ಲದೆ ನಮ್ಮ ಕ್ರಿಯೆಗಳ ಮೇಲೆ ಸಹ ಪರಿಣಾಮ ಬೀರತಕ್ಕದ್ದು. ಯೇಸು ಯಾರಾಗಿದ್ದಾನೆಂಬದಕ್ಕಾಗಿ, ನಾವು ಆತನಿಗೆ ನಮ್ಮ ಸಂಪೂರ್ಣ ನಿಷ್ಠೆಯನ್ನು ವ್ಯಕ್ತಪಡಿಸಬೇಕು. ಆತನಿಗೆ ಈ ಪ್ರಮಾಣದಲ್ಲಿ ಸಮರ್ಪಣೆಯನ್ನು ಹೊಂದಿರುವದೆಂದರೆ ನಾವು ಸುಳ್ಳು ಬೋಧಕರಿಂದ, ವಿನಾಶಕಾರಿ ಆಚಾರಗಳಿಂದ (ಅನೈತಿಕತೆ), ಮತ್ತು ಚಿತ್ತಚಾಂಚಲ್ಯವುಂಟು ಮಾಡುವ ಆಚಾರಗಳಿಂದ – ಸ್ವತಃ ತಪ್ಪಲ್ಲದ ಆದರೆ ಕ್ರಿಸ್ತನಿಗೆ ನಾವು ಹಂಗು ಹೊಂದಿರುವ ಸೇವೆಯಿಂದ ನಮ್ಮನ್ನು ದೂರ ಮಾಡುವ ಕೃತ್ಯಗಳು – ದೂರವಿರಬೇಕು ಎಂದರ್ಥವಾಗಿರುತ್ತದೆ.

*ಯೇಸುವು ದೇವರ ಪ್ರತಿರೂಪ* (ವ. 15). ಯೇಸುವು ತಂದೆಯ ಸ್ವಭಾವವನ್ನು ಪ್ರಕಟಗೊಳಿಸುವದಕ್ಕೆ ಬಂದನು (ಯೋಹಾನ 1:18). ಆತನು "ನನ್ನನ್ನು ನೋಡುವವನು ನನ್ನನ್ನು ಕಳುಹಿಸಿಕೊಟ್ಟಾತನನ್ನು ನೋಡುವವನಾಗಿದ್ದಾನೆ" (ಯೋಹಾನ 12:45); "ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ" (ಯೋಹಾನ 14:9) ಎಂದು ಬೋಧಿಸಿದನು. ಕ್ರಿಸ್ತನು "ದೇವರ ಪ್ರತಿರೂಪನು" ಎಂದು ಬರೆದ ಮೇಲೆ, ಪೌಲನು ಆ ಆಲೋಚನೆಯನ್ನು ಮುಂದುವರೆಸುತ್ತಾ ಹೀಗೆ ಹೇಳುತ್ತಾನೆ, "ದೇವರು ತಾನೇ ಯೇಸು ಕ್ರಿಸ್ತನ ಮುಖದಲ್ಲಿ ತೋರುವ ದೇವಪ್ರಭಾವಜ್ಞಾನವೆಂಬ ಪ್ರಕಾಶವು . . . ನಮ್ಮ ಹೃದಯಗಳಲ್ಲಿ ಹೊಳೆದನು" (2 ಕೊರಿಂಥ 4:4, 6).

ಯೇಸುವು ನಿರ್ಮಲನು, ಪರಿಶುದ್ಧನು, ದಯೆಯುಳ್ಳವನು, ಪ್ರೀತಿಸ್ವರೂಪ, ಮತ್ತು ಕನಿಕರವುಳ್ಳವನಾಗಿದ್ದಾನೆ. ಆತನ ಗುಣಗಳನ್ನೇ ಕ್ರೈಸ್ತರು ತಮ್ಮಲ್ಲಿ ಬೆಳೆಸಿಕೊಳ್ಳತಕ್ಕದ್ದು. ನಾವು ದೇವರ ಪರಿಶುದ್ಧ ಗುಣಸ್ವಭಾವಗಳನ್ನು ಉತ್ಸಾಹದಿಂದ ಅನುಕರಣೆ ಮಾಡತಕ್ಕದ್ದು. ನಾವು ಆತನನ್ನು ಅನುಸರಿಸುವಂತೆ ನಮಗೆ ಮಾದರಿಯಾಗುವದಕ್ಕಾಗಿ ತನ್ನನ್ನು ಆತನು ಒಪ್ಪಿಸಿ ಕೊಟ್ಟನು (1 ಪೇತ್ರ 1:16). ಯೇಸುವು ನಡೆದ ಪ್ರಕಾರ ನಾವು ನಡೆಯುವವರಾದರೆ (1 ಯೋಹಾನ 2:6), ನಾವು ಸಹ ದೇವರಂತಾಗುತ್ತೇವೆ.

*ಯೇಸುವು ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನು* (ವ. 15). "ಜ್ಯೇಷ್ಠಪುತ್ರ"ನಾಗಿ ಯೇಸುವಿಗೆ ದೇವರ ಕುಟುಂಬದಲ್ಲಿ ಅತ್ಯಂಥ ಹೆಚ್ಚಿನ ಗೌರವವಿರುತ್ತದೆ, ಆತನು "ಅನೇಕ ಮಂದಿ ಸಹೋದರರಿದ್ದು ಆತನೇ ಹಿರಿಯವನು" (ರೋಮಾ 8:39). ಕ್ರೈಸ್ತರು "ಕ್ರಿಸ್ತನೊಂದಿಗೆ ಬಾಧ್ಯರು" (ರೋಮಾ 8:17). ಜನರು ಆತನ ಮಾದರಿಯನ್ನು ಅನುಸರಿಸುವದಕ್ಕೆ ಸಾಧ್ಯವಾಗುವಂತೆ ಯೇಸು ಮನುಷ್ಯನಾದನು (ಇಬ್ರಿಯ 2:14, 17). ನಾವು ಆತನೊಂದಿಗೆ ಜೀವಿಸುವವರಾಗುವಂತೆ ಆತನಿಗೋಸ್ಕರ ಜೀವಿಸತಕ್ಕದ್ದು. ಆತನು ನಮ್ಮ ಹಿರಿಯ ಸಹೋದರನಾಗಿದ್ದು ತನ್ನ ಸಹೋದರರಿಗೋಸ್ಕರ ಆತನು ಹೊಂದಿರುವ ಕಾಳಜಿಯ ನಿಮಿತ್ತವಾಗಿ, ಆತನು ನಮ್ಮ ಅಗತ್ಯತೆಗಳನ್ನು ಒದಗಿಸುತ್ತಾನೆ ಮತ್ತು ನಮಗಾಗಿ ಚಿಂತಿಸುತ್ತಾನೆ. ಆತನ ಒಳ್ಳೇತನ, ಕನಿಕರ, ಮತ್ತು ಪ್ರೀತಿಗಾಗಿ ನಾವು ಆತನನ್ನು ಮೆಚ್ಚುಗೆಯಿಂದ ನೋಡುತ್ತೇವೆ.

ಸಾಮಾನ್ಯವಾಗಿ, ಕಿರಿಯ ಮಕ್ಕಳು ಕುಟುಂಬದಲ್ಲಿನ ಜ್ಯೇಷ್ಠವಾಗಿ ಹುಟ್ಟಿದವನನ್ನು ಶ್ರೇಷ್ಠತೆಯಿಂದ ಕಾಣುತ್ತಾರೆ. ಸಹಜವಾಗಿ ಆತನು ಹೆಚ್ಚು ಪಕ್ವತೆ ಮತ್ತು ಅನುಭವ

ಹೊಂದಿರುತ್ತಾನೆ, ಅದರಿಂದಾಗಿ ಅವನು ಆಳವಾದ ಜ್ಞಾನ ಮತ್ತು ಉತ್ತಮ ಸಾಮರ್ಥ್ಯಗಳನ್ನು ಹೊಂದುವವನಾಗುತ್ತಾನೆ. ಆತನು ತನಗಿರುವ ಗೌರವದ ಸ್ವಾಭಾವಿಕ ಸ್ಥಾನವನ್ನು ಗಂಭೀರವಾಗಿ ಪರಿಗಣಿಸಿಕೊಳ್ಳುವದಾದಲ್ಲಿ, ತನ್ನ ಕಿರಿಯ ಸಹೋದರರು ಹಾಗೂ ಸಹೋದರಿಯರಿಗೆ ತನ್ನನ್ನು ಮಾದರಿ ವ್ಯಕ್ತಿಯನ್ನಾಗಿ ಮಾಡಿಕೊಳ್ಳುತ್ತಾನೆ. ಯೇಸು ತನ್ನ ಪ್ರತಿಯೊಬ್ಬ ಹಿಂಬಾಲಕರಿಂದ ಈ ವಿಧವಾದ ಗೌರವವನ್ನು ಹೊಂದತಕ್ಕದ್ದು.

*ಯೇಸುವು ಎಲ್ಲಕ್ಕೂ ಮೊದಲು ಇದ್ದವನು* (ವ. 17). ಯೇಸುವಿಗೆ ಒಂದು ನಿತ್ಯವಾದ ಸ್ವಭಾವ ಇರುತ್ತದೆ, ಯಾಕೆಂದರೆ ಆತನ "ಮೂಲವು ಪುರಾತನವೂ ಅನಾದಿಯೂ ಆದದ್ದು," "ಜಗದುತ್ಪತ್ತಿಗೆ ಮುಂಚೆ" ಇದ್ದವನು (ಮೀಕ 5:2; ಯೋಹಾನ 1:2; 17:5). ಆತನು ಅನಾದಿ ಕಾಲದಿಂದಲೂ ತಂದೆಯ ಜೊತೆಯಲ್ಲಿರುವದರ ಅರ್ಥವೇನೆಂದರೆ ಆತನು ತಂದೆಯ ಜ್ಞಾನದಲ್ಲಿ ಪಾಲು ಹೊಂದಿದ್ದಾನೆ. ತಂದೆಯ ಸಮಸ್ತವೂ ಯೇಸುವಿಗೆ ಸೇರಿರುತ್ತದೆ ಮತ್ತು ಯೇಸುವಿನ ಸಮಸ್ತವೂ ತಂದೆಗೆ ಸೇರಿರುತ್ತದೆ (ಯೋಹಾನ 17:10). ಈ ಕಾರಣಕ್ಕಾಗಿ, ದೇವತ್ವವು ಮಾನವರೊಂದಿಗೆ ನಿತ್ಯಜೀವದ ಕುರಿತು ಹಂಚಿಕೊಳ್ಳುವ ಜ್ಞಾನದ ಪ್ರತಿಯೊಂದು ಅಂಶದ ಮೂಲವು ಯೇಸುವೇ ಆಗಿದ್ದಾನೆಂಬ ಭರವಸೆಯನ್ನು ಕ್ರೈಸ್ತರು ಇಟ್ಟುಕೊಳ್ಳಬಹುದಾಗಿದೆ (ಯೋಹಾನ 12:49, 50; 17:8).

*ಯೇಸುವು ಪ್ರಮುಖನು* (ವ. 18). ಸೃಷ್ಟಿಕರ್ತನಾಗಿ, ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನು, ಎಲ್ಲಕ್ಕೂ ಮೊದಲು ಇದ್ದವನು, ಮತ್ತು ಸಮಸ್ತಕ್ಕೂ ಆಧಾರಭೂತನು ಆಗಿರುವವನಾಗಿ, ಕ್ರಿಸ್ತನು ಎಲ್ಲಾದರಲ್ಲಿಯೂ ಪ್ರಮುಖನಾಗಿದ್ದಾನೆ. ಆತನು ಯಾರಾಗಿದ್ದಾನೆ ಮತ್ತು ವಿಶ್ವದಲ್ಲಿ ಆತನಿಗಿರುವ ಸ್ಥಾನದ ಕಾರಣದಿಂದಾಗಿ, ಕ್ರೈಸ್ತರ ಜೀವಿತಗಳಲ್ಲಿ ಆತನಿಗಲ್ಲದೆ ಬೇರೆ ಯಾರಿಗೂ ಪ್ರಥಮ ಸ್ಥಾನವನ್ನು ಕೊಡಕೂಡದು. ತಂದೆಯು ಮಾತ್ರವೇ ಕ್ರಿಸ್ತನ ಅಧಿಕಾರದ ಮೇಲ್ಗಡೆ ಇದ್ದಾನೆ (1 ಕೊರಿಂಥ 15:27). ಯೇಸುವಿಗೆ ಮುಂದಾಗಿ ಬೇರೆ ಯಾವದಕ್ಕಾದರೂ ಆದ್ಯತೆಯನ್ನು ಕೊಟ್ಟರೆ ಯೇಸುವಿಗೆ ನ್ಯಾಯವಾಗಿ ಸಿಕ್ಕಬೇಕಾದ ಸ್ಥಾನವನ್ನು ಕಸಿದುಕೊಂಡಂತಾಗುವದು. ಆತನು ಮಾನವರ ಮೇಲೆ (ಯೋಹಾನ 17:2), ಭೂಲೋಕದ ಮತ್ತು ಪರಲೋಕದ ಅಧಿಕಾರಗಳ ಮೆಲೆ (ಎಫೆಸ 1:20, 21), ಮತ್ತು ದೇವದೂತರ ಗಣಗಳ ಮೇಲೆ (1 ಪೇತ್ರ 3:22) ದೊರೆತನ ಮಾಡುವವನಾಗಿದ್ದಾನೆ.

ಆತನಿಗಿರುವ "ಪ್ರಮುಖ" ಸ್ಥಾನವು ಸಭೆಗೆ ಸಂಬಂಧಿಸಿದ್ದಾಗಿದೆ, ಯಾಕೆಂದರೆ ಆತನು ಸಭೆಗೆ ಶಿರಸ್ಸಾಗಿದ್ದಾನೆ (ಎಫೆಸ 1:22, 23; 5:23). ಕ್ರೈಸ್ತ ಜೀವನದ ಪ್ರತಿಯೊಂದು ಅಂಶಗಳಲ್ಲಿಯೂ, ದೇಹದ ಅಂಗಗಳು ಶಿರಸ್ಸಾಗಿರುವ ಯೇಸುವನ್ನೇ ದೃಷ್ಟಿಸುವವರಾಗಿರಬೇಕು. ದೇಹವು ಪೋಷಣೆ ಮತ್ತು ಮಾರ್ಗದರ್ಶನಕ್ಕಾಗಿ ಶಿರಸ್ಸನ್ನು ದೃಷ್ಟಿಸತಕ್ಕದ್ದು, ಮತ್ತು ಶಿರಸ್ಸು ದೇಹದ ಹಿತಾಸಕ್ತಿಯ ಬಗ್ಗೆ ಚಿಂತಿಸುವದಾಗಿರುತ್ತದೆ.

*ಯೇಸು ತನ್ನಲ್ಲೇ ಸರ್ವಸಂಪೂರ್ಣತೆಯನ್ನು ಹೊಂದಿದ್ದಾನೆ* (ವ. 19). ವಿಶ್ವದಲ್ಲಿರುವ ಪ್ರತಿಯೊಂದರ – ಲೋಕದ ಹಾಗೂ ಪರಲೋಕದ ಜೀವಿಗಳು ಸೇರಿದಂತೆ – ಅಗತ್ಯತೆಗಳು ಕ್ರಿಸ್ತನಲ್ಲಿಯೇ ಸಂಧಿಸಲ್ಪಡುತ್ತವೆ. ಮಾನವ ಹೃದಯದ ಪ್ರತಿಯೊಂದು ಅವಶ್ಯಕತೆ ಮತ್ತು ಆಕಾಂಕ್ಷೆಯು ಆತನಲ್ಲಿ ನೆರವೇರಿಕೆಯನ್ನು ಕಾಣಬಹುದು. ಆತನಲ್ಲಿ ಸರ್ವಸಂಪೂರ್ಣತೆ ವಾಸ ಮಾಡುತ್ತದೆ; ಆತನು ಆತ್ಮೀಕ ಮಂಡಲವಾಗಿರಲಿ ಅಥವಾ ಶಾರೀರಿಕ ಮಂಡಲವಾಗಿರಲಿ, ವಿಶ್ವದುದ್ದಕ್ಕೂ ಅಗತ್ಯವಾದದ್ದನ್ನೆಲ್ಲಾ ಒದಗಿಸುತ್ತಾನೆ.

## ಕ್ರಿಸ್ತನ ಕೆಲಸಗಳು (1:16-18)

*ಯೇಸು ಆದಿಯಲ್ಲಿ ಸಮಸ್ತವನ್ನು ಸೃಷ್ಟಿಸಿದನು* (ವಚನಗಳು 16, 18). ಆತನು ಜೀವ ಮತ್ತು ಭೌತವಸ್ತುವಿನ ಮೂಲನಾಗಿದ್ದಾನೆ. ಈಗಿನ ವಿಶ್ವದಲ್ಲಿರುವ ಯಾವದೂ ಆತನಿಲ್ಲದೆ ಉಂಟಾಗಲಿಲ್ಲ (ಯೋಹಾನ 1:3). ಸೃಷ್ಟಿಕರ್ತನಾಗಿ, ಮನುಷ್ಯನು ಆತನ ಪ್ರತಿಮೆಯನ್ನು ಮಾಡಬಹುದಾದ ಯಾವದೇ ಶಾರೀರಿಕ ಪ್ರತಿಕೃತಿಯಂತೆ ಆತನಿರುವದಿಲ್ಲ. ಬುದ್ಧಿಯುಳ್ಳ ಜೀವಿಗಳು ಆತನಿಂದಲೇ ಅಸ್ತಿತ್ವಕ್ಕೆ ಬಂದವರಾಗಿದ್ದು ದೇವರನ್ನ ಬುದ್ಧಿಯಿಲ್ಲದ ಭೌತವಸ್ತುವಿನಿಂದ ರೂಪಿಸಲ್ಪಡುವದಕ್ಕೆ ಸಾಧ್ಯವಿಲ್ಲ ಎಂದು ಪೌಲನು ಒತ್ತಿ ಹೇಳಿದನು (ಅಪೊಸ್ತಲರ ಕೃತ್ಯಗಳು 17:29). ಸೃಷ್ಟಿಸಲ್ಪಟ್ಟವುಗಳು ಎಂದಿಗೂ ಸೃಷ್ಟಿಕರ್ತನಿಗಿಂತ ಶ್ರೇಷ್ಠವಾಗುವದಕ್ಕೆ ಸಾಧ್ಯವಿಲ್ಲ. ಈ ಕಾರಣಕ್ಕೆ, ಸೃಷ್ಟಿಜೀವಿ – ಮಾನವರು – ದೇವರಿಂದ ಸೃಷ್ಟಿಸಲ್ಪಟ್ಟಿರುವದನ್ನು ಆರಾಧಿಸುವ ಬದಲಾಗಿ ಅಥವಾ ಆತನು ಸ್ವತಃ ಉಂಟುಮಾಡಿರುವದನ್ನು ವಿಗ್ರಹವಾಗಿಸುವ ಬದಲಾಗಿ ಸೃಷ್ಟಿಕರ್ತನನ್ನು ಆರಾಧಿಸತಕ್ಕದ್ದು (ರೋಮಾ 1:25).

*ಆತನು ಸಮಸ್ತಕ್ಕೂ ಆಧಾರಭೂತನು* (ವ. 17). ಒಂದು ಮನೆಯನ್ನು, ಮೊಳೆಗಳಾಗಲಿ ಅಥವಾ ಅದರ ಸ್ಥಿರತೆಯನ್ನು ಹಿಡಿದಿಡುವಂಥಹ ಯಾವದೇ ವಸ್ತುವಿಲ್ಲದಿದ್ದರೆ ಅಂಥ ಮನೆಯು ಒಡೆದು ಬಿದ್ದು ಹೋಗುವದು. ಲೋಕ ಮತ್ತು ಸರ್ವವನ್ನು ಒಳಗೊಂಡಿರುವ ವಿಶ್ವದ ವಿಷಯದಲ್ಲಿ ಸಹ ಅದು ಸತ್ಯವಾಗಿರುತ್ತದೆ. ಯೇಸು ಅದೆಲ್ಲಕ್ಕೂ ತನ್ನ ಶಕ್ತಿಯ ವಾಕ್ಯದಿಂದ ಆಧಾರಭೂತನಾಗಿರುತ್ತಾನೆ (ಇಬ್ರಿಯ 1:3). ಯೇಸುವಿಲ್ಲದೆ ಇರುವವರು ತಮ್ಮ ಲೋಕವನ್ನು ಮುರಿದು ಬೀಳುವದರಿಂದ ತಡೆಯುವದಕ್ಕೆ ಕಷ್ಟಪಡುತ್ತಾರೆ. ಆತನ ಬಳಿಗೆ ಬರುವವರು ಆಂತರಿಕ ಬಲವನ್ನು ಮತ್ತು ಆತ್ಮೀಕ ವಿಶ್ರಾಂತಿಯನ್ನು ಹೊಂದಿಕೊಳ್ಳುವರು (ಮತ್ತಾಯ 11:28-30).

*ಆತನು ಸಭೆಗೆ ಶಿರಸ್ಸು* (ವ. 18). ಹೆಚ್ಚುಕಡಿಮೆ ಎಲ್ಲಾ ಉನ್ನತ ರೂಪದ ಜೀವಿಗಳಿಗೆ ಕ್ರಿಯೆ ಮಾಡಬೇಕೆಂದರೆ ಶಿರಸ್ಸಿನ ಅಗತ್ಯವಿರುತ್ತದೆ. ಶಿರಸ್ಸು ದೇಹಕ್ಕೆ ಮಾರ್ಗದರ್ಶನ, ನಿಯಂತ್ರಣ, ಮತ್ತು ಆರೈಕೆಯನ್ನು ಒದಗಿಸುತ್ತದೆ. ಯೇಸುವು ಸಭೆಗೆ ಅದನ್ನೇ ಮಾಡುತ್ತಾನೆ. ದೇಹವು ಮಾರ್ಗದರ್ಶನಕ್ಕಾಗಿ ಆತನನ್ನು ದೃಷ್ಟಿಸಬೇಕಾಗಿರುತ್ತದೆ. ಆತನು ವಾಕ್ಯದ ಮೂಲಕವಾದ ಬೋಧನೆ ಮತ್ತು ಪವಿತ್ರಾತ್ಮನ ಮೂಲಕವಾದ ಸಹಾಯದಿಂದ ಸಭೆಯ ಪ್ರತಿಯೊಂದು ಅಗತ್ಯತೆಯನ್ನು ಸಂಧಿಸುತ್ತಾನೆ (ಎಫೆಸ 3:16).

ಯೇಸುವಿನ ವೈಭವಯುಕ್ತ ಲಕ್ಷಣಗಳು ನಮಗೆ ನೀಡುವ ಭರವಸೆ ಏನೆಂದರೆ ಆತನ ರಾಜ್ಯಕ್ಕೆ ಮೊದಲ ಸ್ಥಾನವನ್ನು ಕೊಡುವವರ ಅಗತ್ಯತೆಗಳು ನಿರ್ಲಕ್ಷಿಸಲ್ಪಡುವದಿಲ್ಲ ಎಂಬದೆ (ಮತ್ತಾಯ 6:33).

---

## ಅಡಿಟಿಪ್ಪಣಿಗಳು

[1]Eduard Schweizer, *The Letter to the Colossians: A Commentary*, trans. Andrew Chester (Zürich: Benziger Verlag, 1976; reprint, Minneapolis: Augsburg Publishing House, 1982), 67–68. [2]William Hendriksen, *Exposition of Colossians and Philemon*, New Testament Commentary (Grand Rapids, Mich.: Baker Book House, 1964), 72. [3]A. T. Robertson, *Paul*

*and the Intellectuals: The Epistle to the Colossians*, rev. and ed. W. C. Strickland (Nashville: Broadman Press, 1959), 44. [4]H. C. G. Moule, *The Epistles to the Colossians and to Philemon*, The Cambridge Bible for Schools and Colleges (Cambridge: University Press, 1893; reprint, 1902), 77. [5]Ibid. [6]Watch Tower Bible and Tract Society of Pennsylvania, *You Can Live Forever in Paradise on Earth* (Brooklyn, N.Y.: Watchtower Bible and Tract Society of New York, 1982), 58. [7]*The New World Translation of the Holy Scriptures* (Brooklyn, N.Y.: Watchtower Bible and Tract Society of New York, 1961), 1274. [8]Walter Bauer, *A Greek-English Lexicon of the New Testament and Other Early Christian Literature,* 3d ed., rev. and ed. Frederick William Danker (Chicago: University of Chicago Press, 2000), 194. [9]C. B. Hoch, Jr., "Only Begotten," in *The International Standard Bible Encyclopedia*, rev., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1987), 3:606. [10]E. K. Simpson and F. F. Bruce, *Commentary on the Epistles to the Ephesians and the Colossians*, The New International Commentary on the New Testament (Grand Rapids, Mich.: Wm. B. Eerdmans Publishing Co., 1957), 197.

[11]Robert G. Bratcher and Eugene A. Nida, *A Translators Handbook on Paul's Letters to the Colossians and to Philemon*, Helps for Translators (New York: United Bible Societies, 1977), 24. [12]David M. Hay, *Colossians*, Abingdon New Testament Commentaries (Nashville: Abingdon Press, 2000), 58. [13]Simpson and Bruce, 199, n. 85. [14]Bratcher and Nida, 24. [15]J. B. Lightfoot, *St. Paul's Epistles to the Colossians and to Philemon*, rev. (London: Macmillan & Co., 1916), 153. [16]Robertson, 50. [17]Ibid., 49–50. [18]Bruce, 205. [19]ನೋಡಿರಿ ಮತ್ತಾಯ 28:18; 1 ಕೊರಿಂಥ 15:25-27; ಎಫೆಸ 1:20-23; ಫಿಲಿಪ್ಪಿ 2:10, 11; 1 ಪೇತ್ರ 3:22; ಪ್ರಕಟನೆ 1:5; 12:5. [20]R. C. Lucas, *The Message of Colossians and Philemon: Fullness and Freedom*, The Bible Speaks Today (Downers Grove, Ill.: InterVarsity Press, 1980), 53.

[21]Hay, 62. [22]Hendriksen, 81. [23]Herbert M. Carson, *The Epistles of Paul to the Colossians and Philemon: An Introduction and Commentary*, The Tyndale New Testament Commentaries (Grand Rapids Mich.: Wm. B. Eerdmans Publishing Co., 1960), 46–47. [24]Hay, 53.